ಯಶಸ್ವಿ ಪ್ರದರ್ಶನದೊಂದಿಗೆ ಮುನ್ನುಗ್ಗುತ್ತಿರುವ ರಣವೀರ್ ಸಿಂಗ್ ಅಭಿನಯದ 'ಧುರಂಧರ್ 2' ಒಂದರ ನಂತರ ಒಂದರಂತೆ ದಾಖಲೆಗಳನ್ನು ಮುರಿಯುತ್ತಿದೆ. ಕೇವಲ ನಾಲ್ಕು ದಿನಗಳ ಹಿಂದೆ ಬಿಡುಗಡೆಯಾದ ಚಿತ್ರವು ಬಾಕ್ಸ್‌ಆಫೀಸ್‌ನಲ್ಲಿ ನೂರಾರು ಕೋಟಿ ಕ್ಲಬ್ ಸೇರಿದೆ.



BHARATHA SARATHI
KANNADA DAILY NEWS PAPER

# ಭಾರತ ಸಾರಥಿ

CALL 9740160669

RNI KARKAN2011/44806

ಸದಾ ನಿಮ್ಮೊಂದಿಗೆ ಕನ್ನಡ ದಿನಪತ್ರಿಕೆ



ಸಂಪಾದಕ
ಗಂಡಸಿ ಸದಾನಂದಸ್ವಾಮಿ



## ಕದನ ವಿರಾಮ ಬೇಡ ಎಂದ ಇರಾನ್..!: ಶಾಂತಿ ಮಾತುಕತೆಗೂ ಒಪ್ಪದ ರಾಷ್ಟ್ರ..!

ವಾಷಿಂಗ್ಟನ್: ಮಹತ್ವದ ಬೆಳವಣಿಗೆಯಲ್ಲಿ ಮುಂದಿನ ಐದು ದಿನಗಳ ಕಾಲ ಇರಾನ್‌ನ ಪವರ್ ಪ್ಲಾಂಟ್ ಗಳ ಮೇಲೆ ದಾಳಿ ಮಾಡುವುದಿಲ್ಲ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಕದನ ವಿರಾಮ ಘೋಷಣೆ ಮಾಡಿದ್ದಾರೆ.

ಹಾರ್ಮುಜ್ ಜಲಸಂಧಿಯನ್ನು ಪುನಃ ತೆರೆಯಲು ಇರಾನ್‌ಗೆ ನೀಡಿದ್ದ ಗಡುವನ್ನು ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮುಂದೂಡಿದ್ದು, ಇರಾನ್‌ನ ವಿದ್ಯುತ್ ಸ್ಥಾವರಗಳ ಮೇಲಿನ ಯಾವುದೇ ಸಂಭಾವ್ಯ ದಾಳಿಗಳನ್ನು ಮುಂದಿನ ಐದು ದಿನಗಳವರೆಗೆ ಅಮೆರಿಕ ವಿಳಂಬಗೊಳಿಸುತ್ತದೆ ಎಂದು ಹೇಳಿದ್ದಾರೆ.

ಮೂಲ ಗಡುವು ಮುಕ್ತಾಯಗೊಳ್ಳಲು ಕೆಲವೇ ಗಂಟೆಗಳ ಮೊದಲು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಈ ಘೋಷಣೆ ಮಾಡಿದ್ದು ಆ ಮೂಲಕ ಯುದ್ಧ ನಿಲ್ಲಿಸಲು ಜಾಗತಿಕ ಸಮುದಾಯ ಮಾಡುತ್ತಿರುವ ಪ್ರಯತ್ನಕ್ಕೆ ಆರಂಭಿಕ ಯಶಸ್ಸು ಸಿಕ್ಕಂತಾಗಿದೆ.

ಟ್ರಂಪ್ ಸೋಮವಾರ ತಮ್ಮ ಟ್ರೂತ್ ಸೋಶಿಯಲ್ ಪ್ಲಾಟ್‌ಫಾರ್ಮ್ ಮೂಲಕ ಈ ಹೊಸ ಘೋಷಣೆ ಹಂಚಿಕೊಂಡಿದ್ದು, ಎಲ್ಲಾ ದೊಡ್ಡ ಅಕ್ಷರಗಳಲ್ಲಿ ಬರೆಯಲಾದ ಸಂದೇಶದಲ್ಲಿ, ಅಮೆರಿಕ ಮತ್ತು ಇರಾನ್ "ತುಂಬಾ ಉತ್ತಮ ಮತ್ತು ಉತ್ಪಾದಕ ಸಂಭಾಷಣೆಗಳಲ್ಲಿ" ತೊಡಗಿಸಿಕೊಂಡಿವೆ ಎಂದು ಹೇಳಿದ್ದಾರೆ. ಇದು ಸಂಘರ್ಷದ "ಸಂಪೂರ್ಣ ಪರಿಹಾರ"ಕ್ಕೆ ಕಾರಣವಾಗಬಹುದು ಎಂದು ಅವರು ನಂಬಿರುವುದಾಗಿ ಬರೆದಿದ್ದಾರೆ.




ರಾಜತಾಂತ್ರಿಕ ಪ್ರಯತ್ನಗಳ ಬಗ್ಗೆ ನಿರ್ದಿಷ್ಟ ವಿವರಗಳನ್ನು ನೀಡದಿದ್ದರೂ, ವಾರವಿಡೀ ಚರ್ಚೆಗಳು ಮುಂದುವರಿಯುತ್ತವೆ ಎಂದು ಟ್ರಂಪ್ ಹೇಳಿದ್ದಾರೆ. "ಮಧ್ಯಪ್ರಾಚ್ಯದಲ್ಲಿ ನಮ್ಮ ಹಗೆತನದ ಸಂಪೂರ್ಣ ಮತ್ತು ಸಂಪೂರ್ಣ ಪರಿಹಾರದ ಕುರಿತು ಕಳೆದ ಎರಡು ದಿನಗಳಲ್ಲಿ ಅಮೆರಿಕ ಸಂಯುಕ್ತ ಸಂಸ್ಥಾನ ಮತ್ತು ಇರಾನ್ ದೇಶವು ಉತ್ತಮ ಮತ್ತು ಉತ್ಪಾದಕ ಸಂಭಾಷಣೆಗಳನ್ನು ನಡೆಸಿವೆ ಎಂದು ವರದಿ ಮಾಡಲು ನನಗೆ ಸಂತೋಷವಾಗಿದೆ.

ವಾರವಿಡೀ ಮುಂದುವರಿಯುವ ಈ ಆಳವಾದ, ವಿವರವಾದ ಮತ್ತು ರಚನಾತ್ಮಕ ಸಂಭಾಷಣೆಗಳ ಸ್ವರೂಪ ಮತ್ತು ಸ್ವರವನ್ನು ಆಧರಿಸಿ, ನಡೆಯುತ್ತಿರುವ ಸಭೆಗಳು ಮತ್ತು ಚರ್ಚೆಗಳ ಯಶಸ್ಸಿಗೆ ಒಳಪಟ್ಟು, ಇರಾನಿನ ವಿದ್ಯುತ್ ಸ್ಥಾವರಗಳು ಮತ್ತು ಇಂಧನ ಮೂಲಸೌಕರ್ಯದ ವಿರುದ್ಧದ ಯಾವುದೇ ಮತ್ತು ಎಲ್ಲಾ ಮಿಲಿಟರಿ ದಾಳಿಗಳನ್ನು ಐದು ದಿನಗಳ ಅವಧಿಗೆ ಮುಂದೂಡಲು ನಾನು ರಕ್ಷಣಾ ಇಲಾಖೆಗೆ ಸೂಚಿಸಿದ್ದೇನೆ." ಎಂದು ಟ್ರಂಪ್ ಬರೆದು ಕೊಂಡಿದ್ದಾರೆ.

ಇನ್ನು ಅತ್ತ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಸಂಧಾನ ಯಶಸ್ವಿಯಾಗಿದೆ ಎಂದು ಘೋಷಣೆ ಮಾಡಿದ್ದರೆ ಇತ್ತ ಇರಾನ್ ಮಾತ್ರ ಇದಕ್ಕೆ ತದ್ವಿರುದ್ಧ ಹೇಳಿಕೆ ನೀಡಿದೆ. ಅಮೆರಿಕದೊಂದಿಗೆ ತಾನು ಅಂತಹ ಯಾವುದೇ ಮಾತುಕತೆಗಳು ನಡೆದಿಲ್ಲ ಎಂದು ಸ್ಪಷ್ಟಪಡಿಸಿದೆ. ಅಂತೆಯೇ ಈ ಕದನ ವಿರಾಮವು ತಾತ್ಕಾಲಿಕವಾಗಿದ್ದು, ಮಾತುಕತೆಯ ಪ್ರಗತಿಯ ಮೇಲೆ ಯುದ್ಧದ ಮುಂದಿನ ಭವಿಷ್ಯ ಸಂಪೂರ್ಣವಾಗಿ ಅವಲಂಬಿತವಾಗಿದೆ ಎಂದು ಹೇಳಲಾಗಿದೆ.

ಯಾವುದೇ ಷರತ್ತುಗಳನ್ನು ಒಪ್ಪಿಕೊಂಡಿರುವ ಬಗ್ಗೆ ಟೆಹ್ರಾನ್‌ನಿಂದ ಯಾವುದೇ ಸೂಚನೆ ಇರಲಿಲ್ಲ, ಅಥವಾ ಔಪಚಾರಿಕ ಮಾತುಕತೆಗಳು ವಾಸ್ತವವಾಗಿ ನಡೆಯುತ್ತಿವೆ ಎಂಬುದಕ್ಕೆ ಯಾವುದೇ ದೃಢೀಕರಣವೂ ಇರಲಿಲ್ಲ ಎಂದು ಇರಾನ್ ಅಧಿಕಾರಿಗಳು ಹೇಳಿದ್ದಾರೆ.

ಇದೇ ವಿಚಾರವಾಗಿ ಇರಾನ್ ಸರ್ಕಾರಿ ಸ್ವಾಮ್ಯದ ಟಿವಿ ಸುದ್ದಿ ಮಾಡಿದ್ದು, ಟ್ರಂಪ್ ಹೇಳಿಕೆಯನ್ನು ನಿರಾಕರಿಸಿದೆ. ಮಾತ್ರವಲ್ಲದೇ ಕದನ ವಿರಾಮದ ಮೂಲ ಗಡುವನ್ನು ಮಂಗಳವಾರ ನಿಗದಿಪಡಿಸಲಾಗಿತ್ತು, ಆದರೆ ಸೋಮವಾರ ಅದನ್ನು ಹಿಂದಕ್ಕೆ ತಳ್ಳಲಾಗುವುದು ಎಂದು ಟ್ರಂಪ್ ಘೋಷಿಸಿದರು. ಇದಕ್ಕೆ ಪ್ರತಿಕ್ರಿಯೆಯಾಗಿ, ಇರಾನ್‌ನ ಸರ್ಕಾರಿ ದೂರದರ್ಶನವು ಇರಾನ್‌ನ ದೃಢ ಎಚ್ಚರಿಕೆ ಎಂದು ವಿವರಿಸಿದ ನಂತರ ಅಮೆರಿಕ ಅಧ್ಯಕ್ಷರು ಹಿಂದೆ ಸರಿದರು ಎಂದು ಹೇಳುವ ಆನ್-ಸ್ಕ್ರೀನ್ ಗ್ರಾಫಿಕ್ ಅನ್ನು ಪ್ರದರ್ಶಿಸಿದೆ.

## ಆರೋಗ್ಯವಾಗಿದ್ದೇನೆ ಎಂದ ಸಚಿವ ಶಿವರಾಜ್ ತಂಗಡಗಿ

ತುಮಕೂರು: ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಶಿವರಾಜ್ ತಂಗಡಗಿ ಅವರಿಗೆ ಏಕಾಏಕಿ ಎದೆ ನೋವು ಕಾಣಿಸಿಕೊಂಡು ಆಸ್ಪತ್ರೆಗೆ ದಾಖಲಾಗಿದ್ದಾರೆ ಎಂಬ ಮಾಹಿತಿ ಹೊರಬಿದ್ದಿತ್ತು. ಇದಕ್ಕೆ ಈಗ ಸ್ವತಃ ಸಚಿವರೇ ಪ್ರತಿಕ್ರಿಯೆ ನೀಡಿದ್ದಾರೆ. ತಾವು ಸಂಪೂರ್ಣವಾಗಿ ಚೇತರಿಸಿಕೊಂಡಿದ್ದು ಆತಂಕಪಡುವ ಅಗತ್ಯವಿಲ್ಲ ಎಂದಿದ್ದಾರೆ.

ವಿವಿಧ ಕಾಮಗಾರಿಗಳಿಗೆ ಶಂಕುಸ್ಥಾಪನೆ ನೆರವೇರಿಸುವ ಕಾರ್ಯಕ್ರಮವಿದ್ದ ಕಾರಣ ನಾಲ್ಕು ದಿನಗಳ ಹಿಂದೆ ನನ್ನ ಕನಕಗಿರಿ ಮತಕ್ಷೇತ್ರಕ್ಕೆ ಹೋಗಿದ್ದೆ. ಕಾರ್ಯಕ್ರಮ ಮುಗಿಸಿಕೊಂಡು ಕೊಪ್ಪಳದಿಂದ ಬೆಂಗಳೂರಿಗೆ ಹೊರಟು ಬರುವಾಗ ನಿನ್ನೆ ಭಾನುವಾರ ರಾತ್ರಿ ಮಾರ್ಗ ಮಧ್ಯೆ ಎದೆ ಚುಚ್ಚಿದ ಅನುಭವ ಆಯಿತು. ಈ ಹಿನ್ನೆಲೆಯಲ್ಲಿ ನನ್ನ ಕುಟುಂಬದ ವೈದ್ಯರೊಂದಿಗೆ ಕರೆ ಮಾಡಿ ಮಾತನಾಡಿದೆ. ಮುನ್ನೆಚ್ಚರಿಕೆ ಕ್ರಮವಾಗಿ ತುಮಕೂರಿನ ಸಿದ್ಧಗಂಗಾ ಆಸ್ಪತ್ರೆಯಲ್ಲಿ ಒಮ್ಮೆ ತಪಾಸಣೆ ಮಾಡಿಸುವಂತೆ ಸೂಚಿಸಿದರು ಎಂದಿದ್ದಾರೆ.

ಆಸ್ಪತ್ರೆಯಲ್ಲಿ ಇಸಿಜಿ ಮಾಡಿಸಿದಾಗ ಯಾವುದೇ ತೊಂದರೆ ಇಲ್ಲ ಎಂದು ವೈದ್ಯರು ತಿಳಿಸಿದ್ದಾರೆ. ಗ್ಯಾಸ್ಟಿಕ್ ಸಮಸ್ಯೆಯಿಂದ ಈ ರೀತಿ ಆಗಿದೆ. ಯಾರು ಆತಂಕಪಡುವ ಅಗತ್ಯವಿಲ್ಲ. ನಾನು ಇಂದು ಎಂದಿನಂತೆ ವಿಧಾನಸಭೆ ಅಧಿವೇಶನದಲ್ಲಿ ಪಾಲ್ಗೊಳ್ಳುತ್ತೇನೆ ಎಂದು ತಿಳಿಸಿದ್ದಾರೆ.

## ಹಾರ್ಮುಜ್ ಜಲಸಂಧಿಗೆ ಹೊಸ ನಿಯಮ..?

ಟೆಹ್ರಾನ್: ಪಶ್ಚಿಮ ಏಷ್ಯಾದಲ್ಲಿ ನಡೆಯುತ್ತಿರುವ ಉದ್ವಿಗ್ನತೆ ಮಧ್ಯೆ, ಇರಾನ್ ಹಾರ್ಮುಜ್ ಜಲಸಂಧಿಗೆ ಸಂಬಂಧಿಸಿದಂತೆ ಹೊಸ ಕಾರ್ಯತಂತ್ರವನ್ನು ಅಭಿವೃದ್ಧಿಪಡಿಸುತ್ತಿದೆ. ಜಾಗತಿಕ ವ್ಯಾಪಾರ ಮತ್ತು ಕಡಲ ಆರ್ಥಿಕತೆಯ ದಿಕ್ಕನ್ನು ಬದಲಾಯಿಸಬಹುದಾದ ಯೋಜನೆಯಲ್ಲಿ ಇರಾನ್ ಕಾರ್ಯನಿರ್ವಹಿಸುತ್ತಿದೆ. ಹಾರ್ಮುಜ್ ಜಲಸಂಧಿಯ ಮೂಲಕ ಹಾದುಹೋಗುವ ಹಡಗುಗಳ ಮೇಲೆ ಸುಂಕ ಅಥವಾ ಸಾರಿಗೆ ಶುಲ್ಕ ವಿಧಿಸಲು ಇರಾನ್ ಮುಂದಾಗಿದೆ. ಸುಮಾರು 18 ಕೋಟಿ ರೂ. ಶುಲ್ಕ ಕಟ್ಟಬೇಕಾಗಬಹುದು ಎಂದು ಅಂದಾಜಿಸಲಾಗಿದೆ. ಹಾರ್ಮುಜ್ ನೆಪ ಇಟ್ಟುಕೊಂಡು ಇರಾನ್ ಇಡೀ ಜಗತ್ತನ್ನು ಬ್ಲ್ಯಾಕ್ ಮೇಲ್ ಮಾಡಲು ಮುಂದಾದಂತೆ ಕಾಣುತ್ತಿದೆ.

ಈ ಪ್ರಸ್ತಾಪವು ಜಾರಿಗೆ ಬಂದರೆ, ಜಾಗತಿಕ ತೈಲ, ಅನಿಲ ಮತ್ತು ವ್ಯಾಪಾರ ಪೂರೈಕೆ ಸರಪಳಿಗಳ ಮೇಲೆ ಪರಿಣಾಮ ಬೀರಬಹುದು. ವಾಸ್ತವವಾಗಿ, ಹಾರ್ಮುಜ್ ಜಲಸಂಧಿಯು ವಿಶ್ವದ ಪ್ರಮುಖ ಸಮುದ್ರ ಮಾರ್ಗಗಳಲ್ಲಿ ಒಂದಾಗಿದೆ. ಜಾಗತಿಕ ತೈಲ ಮತ್ತು ದ್ರವೀಕೃತ ನೈಸರ್ಗಿಕ ಅನಿಲದ ಸರಿಸುಮಾರು ಶೇ.20 ಇದರ ಮೂಲಕ ಹಾದುಹೋಗುತ್ತದೆ. ಆದ್ದರಿಂದ ಈ ಪ್ರದೇಶದಲ್ಲಿನ ಯಾವುದೇ ಬದಲಾವಣೆಗಳು ಅಂತಾರಾಷ್ಟ್ರೀಯ ಮಾರುಕಟ್ಟೆಗಳ ಮೇಲೆ ನೇರವಾಗಿ ಪರಿಣಾಮ ಬೀರುತ್ತದೆ.

ಪಶ್ಚಿಮ ಏಷ್ಯಾದಲ್ಲಿ ಇತ್ತೀಚೆಗೆ ಉಂಟಾದ ಉದ್ವಿಗ್ನತೆ, ವಿಶೇಷವಾಗಿ ಇಸ್ರೇಲ್ ಮತ್ತು ಇರಾನ್ ನಡುವಿನ ಹೆಚ್ಚುತ್ತಿರುವ ಸಂಘರ್ಷದ ನಂತರ ಪರಿಸ್ಥಿತಿ ಹೆಚ್ಚು ಸೂಕ್ಷ್ಮವಾಗಿದೆ. ಕತಾರ್ ಹಾಗೂ ಇರಾನ್ ನಡುವೆ ಇರುವ ಸೌತ್ ಪಾರ್ಸ್ ಅನಿಲ ಘಟಕವು ಮಹತ್ವದ್ದಾಗಿದೆ. ಇದನ್ನು ವಿಶ್ವದ ಅತಿದೊಡ್ಡ ನೈಸರ್ಗಿಕ ಅನಿಲ ನಿಕ್ಷೇಪವೆಂದು ಪರಿಗಣಿಸಲಾಗಿದೆ.

48 ಗಂಟೆಗಳ ಒಳಗೆ ಜಲಸಂಧಿಯನ್ನು ಮತ್ತೆ ತೆರೆಯದಿದ್ದರೆ, ಅಮೆರಿಕವು ಇರಾನ್‌ನ ವಿದ್ಯುತ್ ಮೂಲಸೌಕರ್ಯವನ್ನು ಗುರಿಯಾಗಿಸಬಹುದು ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಎಚ್ಚರಿಕೆ ನೀಡಿದ್ದ ಬೆನ್ನಲ್ಲೇ ಬೊರೊಜೆರ್ಡಿ ಅವರ ಹೇಳಿಕೆಗಳು ಬಂದಿವೆ.

ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಉಪ ಚುನಾವಣೆಯ ಕಾಂಗ್ರೆಸ್ ಅಭ್ಯರ್ಥಿ ಸಮರ್ಥ್ ನಾಮಪತ್ರ ಸಲ್ಲಿಕೆ ವೇಳೆ ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್, ಸಚಿವ ಎಸ್‌ಎಸ್ ಮಲ್ಲಿಕಾರ್ಜುನ್ ಇದ್ದರು.



## ಬಿಕ್ಕಟ್ಟು ಎದುರಿಸಲು ಭಾರತ ಬದ್ಧ

ನವದೆಹಲಿ: ಇರಾನ್-ಅಮೆರಿಕ ಮತ್ತು ಇಸ್ರೇಲ್ ನಡುವಿನ ಪಶ್ಚಿಮ ಏಷ್ಯಾ ಸಂಘರ್ಷದಿಂದಾಗಿ ಭಾರತಕ್ಕೆ 'ಅಭೂತಪೂರ್ವ' ಸವಾಲುಗಳು ಎದುರಾಗಿದ್ದು, ಅವುಗಳೆಲ್ಲವನ್ನೂ ಎದುರಿಸಲು ಭಾರತ ಸಿದ್ಧವಿದೆ ಎಂದು ಪ್ರಧಾನಿ ಮೋದಿ ಘೋಷಣೆ ಮಾಡಿದ್ದಾರೆ.



ಇರಾನ್ ಯುದ್ಧದ ಕುರಿತು ಇದೇ ಮೊದಲ ಬಾರಿಗೆ ಲೋಕಸಭೆಯನ್ನುದ್ದೇಶಿಸಿ ಮಾತನಾಡಿದ ಪ್ರಧಾನಿ ಮೋದಿ, 'ಪಶ್ಚಿಮ ಏಷ್ಯಾದಲ್ಲಿ ನಡೆಯುತ್ತಿರುವ ಸಂಘರ್ಷವನ್ನು "ಆತಂಕಕಾರಿ" ಎಂದು ಕರೆದರು. ಅಂತೆಯೇ ಇದು ಭಾರತಕ್ಕೆ "ಅಭೂತಪೂರ್ವ" ಸವಾಲುಗಳನ್ನು ಸೃಷ್ಟಿಸಿದೆ ಮತ್ತು ಎಲ್ಲಾ ಕಡೆಯವರು ಶಾಂತಿಯನ್ನು ಪುನಃಸ್ಥಾಪಿಸಬೇಕು ಎಂದು ಮೋದಿ ಒತ್ತಾಯಿಸಿದರು.

'ಈ ಬಿಕ್ಕಟ್ಟು ಆರ್ಥಿಕ, ರಾಷ್ಟ್ರೀಯ ಭದ್ರತೆ ಮತ್ತು ಮಾನವೀಯ ಸವಾಲುಗಳನ್ನು ಒಡ್ಡಿದೆ ಎಂದರು. ಇಂಧನ ಬಿಕ್ಕಟ್ಟಿನ ಕುರಿತು ಮಾತನಾಡಿದ ಅವರು, 'ಭಾರತವು ತನ್ನ ಎಲ್‌ಪಿಜಿಯ 60% ಅನ್ನು ಆಮದು ಮಾಡಿಕೊಳ್ಳುತ್ತದೆ ಮತ್ತು ದೇಶೀಯ ಪೂರೈಕೆಗೆ ಆದ್ಯತೆ ನೀಡಲು ಮತ್ತು ದೇಶಾದ್ಯಂತ ಸುಗಮ ಪೆಟ್ರೋಲ್ ಮತ್ತು ಡೀಸೆಲ್ ಪೂರೈಕೆಯನ್ನು ಖಚಿತಪಡಿಸಿಕೊಳ್ಳಲು ಮತ್ತು ಸಾರ್ವಜನಿಕರಿಗೆ ತೊಂದರೆಗಳನ್ನು ಕಡಿಮೆ ಮಾಡಲು ಪ್ರಯತ್ನಗಳು ನಡೆಯುತ್ತಿವೆ ಎಂದು ಹೇಳಿದರು.

"ಪಶ್ಚಿಮ ಏಷ್ಯಾದ ಪರಿಸ್ಥಿತಿ ಚಿಂತಾಜನಕವಾಗಿದೆ. ಈ ಸಂಘರ್ಷವು ಮೂರು ವಾರಗಳಿಗೂ ಹೆಚ್ಚು ಕಾಲ ನಡೆಯುತ್ತಿದೆ. ಇದು ಜಾಗತಿಕ ಆರ್ಥಿಕತೆ ಮತ್ತು ಜನರ ಜೀವನದ ಮೇಲೆ ತೀವ್ರ ಪರಿಣಾಮ ಬೀರುತ್ತದೆ ಮತ್ತು ಅದಕ್ಕಾಗಿಯೇ ಈ ಸಂಘರ್ಷಕ್ಕೆ ಆರಂಭಿಕ ಪರಿಹಾರಕ್ಕಾಗಿ ಜಗತ್ತು ಎಲ್ಲಾ ಕಡೆಯವರನ್ನು ಒತ್ತಾಯಿಸುತ್ತಿದೆ" ಎಂದು ಮೋದಿ ಸಂಸತ್ತಿನಲ್ಲಿ ಹೇಳಿದರು.

"ಸರ್ಕಾರವು ಶಾಂತಿಗಾಗಿ ಎಲ್ಲಾ ಕಡೆಯವರಿಗೆ ಮನವಿ ಮಾಡುತ್ತಿದೆ. ಈ ಯುದ್ಧವು ಭಾರತಕ್ಕೆ ಅನಿರೀಕ್ಷಿತ ಸವಾಲುಗಳನ್ನು ಸೃಷ್ಟಿಸಿದೆ - ಆರ್ಥಿಕ, ರಾಷ್ಟ್ರೀಯ ಭದ್ರತೆ ಮತ್ತು ಮಾನವೀಯ" ಎಂದು ಅವರು ಹೇಳಿದರು. ಯುದ್ಧದ ಆರಂಭದಿಂದಲೂ ಹಾರ್ಮುಜ್ ಜಲಸಂಧಿಯ ಮೂಲಕ ಸರಕು ಸಾಗಣೆ ಒಂದು ಸವಾಲಾಗಿದೆ ಎಂದು ಹೇಳಿದ ಮೋದಿ, ಆದರೆ ಸರ್ಕಾರವು ಅನಿಲ ಮತ್ತು ಇಂಧನ ಪೂರೈಕೆಗಳು ಕನಿಷ್ಠ ಪರಿಣಾಮ ಬೀರುವಂತೆ ನೋಡಿಕೊಳ್ಳುತ್ತಿದೆ ಎಂದರು.

"ಯುದ್ಧ ಪ್ರಾರಂಭವಾದಾಗಿನಿಂದ, ಹಾರ್ಮುಜ್ ಜಲಸಂಧಿಯ ಮೂಲಕ ಹಡಗುಗಳ ಚಲನೆ ತುಂಬಾ ಸವಾಲಿನದ್ದಾಗಿದೆ. ಇದರ ಹೊರತಾಗಿಯೂ, ಪೆಟ್ರೋಲ್, ಡೀಸೆಲ್ ಮತ್ತು ಅನಿಲ ಪೂರೈಕೆಯ ಮೇಲೆ ತೀವ್ರ ಪರಿಣಾಮ ಬೀರದಂತೆ ನಮ್ಮ ಸರ್ಕಾರ ಪ್ರಯತ್ನಗಳನ್ನು ಮಾಡಿದೆ. ನಮಗೆಲ್ಲರಿಗೂ ತಿಳಿದಿರುವಂತೆ, ದೇಶವು ತನ್ನ ಎಲ್‌ಪಿಜಿ ಅಗತ್ಯದ 60% ಅನ್ನು ಆಮದು ಮಾಡಿಕೊಳ್ಳುತ್ತದೆ. ಪೂರೈಕೆಯಲ್ಲಿನ ಅನಿಶ್ಚಿತತೆಯಿಂದಾಗಿ, ಸರ್ಕಾರವು ದೇಶೀಯ ಎಲ್‌ಪಿಜಿ ಗ್ರಾಹಕರಿಗೆ ಆದ್ಯತೆ ನೀಡಿದೆ. ಅದೇ ಸಮಯದಲ್ಲಿ, ಎಲ್‌ಪಿಜಿಯ ದೇಶೀಯ ಉತ್ಪಾದನೆಯನ್ನು ಸಹ ಹೆಚ್ಚಿಸಲಾಗುತ್ತಿದೆ. ದೇಶಾದ್ಯಂತ ಪೆಟ್ರೋಲ್ ಮತ್ತು ಡೀಸೆಲ್ ಪೂರೈಕೆ ಸುಗಮವಾಗಿರುವುದನ್ನು ಖಚಿತಪಡಿಸಿಕೊಳ್ಳಲು ನಿರಂತರ ಪ್ರಯತ್ನಗಳನ್ನು ಮಾಡಲಾಗಿದೆ" ಎಂದು ಅವರು ಹೇಳಿದರು.

ಭಾರತವು ಈಗ 41 ದೇಶಗಳಿಂದ ಇಂಧನವನ್ನು ಆಮದು ಮಾಡಿಕೊಳ್ಳುತ್ತಿದೆ. ಇದು ಹಿಂದಿನ 27 ದೇಶಗಳಿಂದ ಹೆಚ್ಚಾಗಿದೆ ಮತ್ತು 5.3 ಮಿಲಿಯನ್ ಮೆಟ್ರಿಕ್ ಟನ್‌ಗಳಿಗಿಂತ ಹೆಚ್ಚಿನ ಕಾರ್ಯತಂತ್ರದ ಪೆಟ್ರೋಲಿಯಂ ನಿಕ್ಷೇಪಗಳನ್ನು ನಿರ್ಮಿಸಿದೆ, ಇದನ್ನು 6.5 ಮಿಲಿಯನ್ ಟನ್‌ಗಳಿಗಿಂತ ಹೆಚ್ಚು ವಿಸ್ತರಿಸುವ ಯೋಜನೆ ಇದೆ.

ಸಂಘರ್ಷ ವಲಯವು ಪ್ರಮುಖ ವ್ಯಾಪಾರ ಮಾರ್ಗವಾಗಿರುವುದರಿಂದ ಮತ್ತು ಸುಮಾರು ಒಂದು ಕೋಟಿ ಭಾರತೀಯರು ಗಲ್ಫ್ ದೇಶಗಳಲ್ಲಿ ವಾಸಿಸುತ್ತಿದ್ದಾರೆ ಮತ್ತು ಕೆಲಸ ಮಾಡುತ್ತಿದ್ದಾರೆ ಎಂಬ ಕಾರಣದಿಂದಾಗಿ ಈ ಪ್ರದೇಶವು ಮಹತ್ವದ್ದಾಗಿದೆ ಎಂದು ಪ್ರಧಾನಿ ಸದನಕ್ಕೆ ತಿಳಿಸಿದರು.

"ಭಾರತವು ಸಂಘರ್ಷದಿಂದ ಪ್ರಭಾವಿತವಾಗಿರುವ ದೇಶಗಳೊಂದಿಗೆ ವ್ಯಾಪಕವಾದ ವ್ಯಾಪಾರ ಸಂಬಂಧವನ್ನು ಹೊಂದಿದೆ ಮತ್ತು ಈ ಪ್ರದೇಶವು ನಮ್ಮ ಜಾಗತಿಕ ವ್ಯಾಪಾರಕ್ಕೆ ಪ್ರಮುಖ ಮಾರ್ಗವಾಗಿದೆ. ನಮ್ಮ ಕಚ್ಚಾ ತೈಲ ಮತ್ತು ಅನಿಲ ಅಗತ್ಯಗಳಲ್ಲಿ ಗಮನಾರ್ಹ ಭಾಗವನ್ನು ಈ ಪ್ರದೇಶದಿಂದಲೇ ಪೂರೈಸಲಾಗುತ್ತದೆ.

## ಹೆಚ್ಚುವರಿ ಟೋಲ್ ಕಟ್ಟಲು ಸಜ್ಜಾಗಿ

ನವದೆಹಲಿ/ಬೆಂಗಳೂರು: ಏಪ್ರಿಲ್ 1ರಿಂದ ದೇಶಾದ್ಯಂತ ರಾಷ್ಟ್ರೀಯ ಹೆದ್ದಾರಿಗಳಲ್ಲಿ ಟೋಲ್ ಶುಲ್ಕ ಹೆಚ್ಚಳ ಜಾರಿಗೆ ಬರಲಿದ್ದು, ವಾಹನ ಸವಾರರಿಗೆ ಮತ್ತೊಮ್ಮೆ ಹೆಚ್ಚುವರಿ ಆರ್ಥಿಕ ಹೊರೆ ಬೀಳಲಿದೆ.



ಪ್ರತಿ ವರ್ಷ ಏಪ್ರಿಲ್ ಮೊದಲ ದಿನದಿಂದಲೇ ಟೋಲ್ ದರಗಳನ್ನು ಪರಿಷ್ಕರಿಸುವ ಪದ್ಧತಿಯಂತೆ, ಈ ವರ್ಷವೂ ದರ ಏರಿಕೆ ಘೋಷಿಸಲಾಗಿದೆ. ಈ ದರಗಳು ಶೇಕಡಾ 4ರಿಂದ 5ರಷ್ಟು ಏರಿಕೆಯಾಗುವ ಸಾಧ್ಯತೆ ಇದೆ ಎಂದು ಮೂಲಗಳು ತಿಳಿಸಿವೆ.

ಈ ದರ ಏರಿಕೆ ಕಾರು, ಬಸ್, ಲಾರಿ ಸೇರಿದಂತೆ ಎಲ್ಲಾ ವಾಹನಗಳಿಗೆ ಅನ್ವಯವಾಗಲಿದೆ. ಹೆದ್ದಾರಿಗಳ ನಿರ್ವಹಣೆ, ದುರಸ್ತಿ ಮತ್ತು ಅಭಿವೃದ್ಧಿ ವೆಚ್ಚಗಳನ್ನು ಗಮನದಲ್ಲಿಟ್ಟುಕೊಂಡು ಈ ಪರಿಷ್ಕರಣೆ ಮಾಡಲಾಗುತ್ತದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಆದರೆ, ಈ ಕ್ರಮದಿಂದ ದಿನನಿತ್ಯ ಹೆದ್ದಾರಿ ಬಳಸುವ ಪ್ರಯಾಣಿಕರು ಮತ್ತು ಸಾರಿಗೆ ವಲಯದವರಿಗೆ ಹೆಚ್ಚಿನ ಹೊರೆ ಬೀಳುವ ಸಾಧ್ಯತೆ ಇದೆ. ಇದರ ಜೊತೆಗೆ ಫಾಸ್ಟ್‌ಟ್ಯಾಗ್ ಬಳಕೆದಾರರಿಗೂ ಕೆಲವು ಬದಲಾವಣೆಗಳು ಜಾರಿಗೆ ಬರುತ್ತಿವೆ.

ಫಾಸ್ಟ್‌ಟ್ಯಾಗ್ ಖಾತೆಯಲ್ಲಿ ಹಣ ಕೊರತೆಯಿದ್ದರೆ ಅಥವಾ ತಾಂತ್ರಿಕ ಸಮಸ್ಯೆಯಿಂದ ಪಾವತಿ ವಿಫಲವಾದರೆ, ದ್ವಿಗುಣ ಟೋಲ್ ಶುಲ್ಕ ವಿಧಿಸುವ ನಿಯಮವನ್ನು ಕಟ್ಟುನಿಟ್ಟಾಗಿ ಅನುಸರಿಸಲು ನಿರ್ಧರಿಸಲಾಗಿದೆ. ಇದರಿಂದ ವಾಹನ ಸವಾರರು ತಮ್ಮ ಖಾತೆಯಲ್ಲಿ ಸಮರ್ಪಕ ಹಣ ಇರಿಸುವುದು ಅತ್ಯಗತ್ಯವಾಗಿದೆ.

ಹೆದ್ದಾರಿಗಳಲ್ಲಿ ನಗದು ರಹಿತ ಪಾವತಿ ವ್ಯವಸ್ಥೆಯನ್ನು ಉತ್ತೇಜಿಸುವ ಉದ್ದೇಶದಿಂದ ಡಿಜಿಟಲ್ ಪಾವತಿಗಳಿಗೆ ಹೆಚ್ಚಿನ ಆದ್ಯತೆ ನೀಡಲಾಗುತ್ತಿದೆ. ಫಾಸ್ಟ್‌ಟ್ಯಾಗ್ ಹಾಗೂ ಯುಪಿಐ ಮೂಲಕ ಪಾವತಿ ಮಾಡುವ ವ್ಯವಸ್ಥೆಯನ್ನು ಇನ್ನಷ್ಟು ಬಲಪಡಿಸಲು ಈ ಕ್ರಮ ಕೈಗೊಳ್ಳಲಾಗಿದೆ ಎನ್ನಲಾಗಿದ್ದು, ಇದು ಟೋಲ್ ಪ್ಲಾಜಾಗಳಲ್ಲಿ ವಾಹನಗಳ ದಟ್ಟಣೆ ಕಡಿಮೆ ಮಾಡಲು ಸಹಾಯ ಮಾಡಲಿದೆ.

ಒಟ್ಟಾರೆ, ಈ ದರ ಏರಿಕೆ ಸಾಮಾನ್ಯ ಜನರ ದಿನನಿತ್ಯದ ಪ್ರಯಾಣ ವೆಚ್ಚವನ್ನು ಹೆಚ್ಚಿಸುವ ಸಾಧ್ಯತೆ ಇದೆ. ವಿಶೇಷವಾಗಿ ಪ್ರತಿದಿನ ಹೆದ್ದಾರಿ ಬಳಸುವ ಉದ್ಯೋಗಿಗಳು ಮತ್ತು ವ್ಯಾಪಾರಿಗಳಿಗೆ ಇದರ ಪರಿಣಾಮ ಹೆಚ್ಚು ಬೀರಲಿದೆ.

ರಾಷ್ಟ್ರೀಯ ಹೆದ್ದಾರಿಗಳಲ್ಲಿ ಟೋಲ್ ಶುಲ್ಕ ಹೆಚ್ಚಳವಾಗಿರುವ ಹಿನ್ನೆಲೆಯಲ್ಲಿ ರಾಜ್ಯದಲ್ಲಿರುವ ರಾಷ್ಟ್ರೀಯ ಹೆದ್ದಾರಿಗಳ ಶುಲ್ಕವೂ ಹೆಚ್ಚಳವಾಗಲಿದೆ. ಇದರಂತೆ ಬೆಂಗಳೂರು-ಮೈಸೂರು ಎಕ್ಸ್‌ಪ್ರೆಸ್‌ವೇ ಸೇರಿದಂತೆ ಒಂಬತ್ತು ಪ್ರಮುಖ ರಾಷ್ಟ್ರೀಯ ಹೆದ್ದಾರಿಗಳಲ್ಲಿ ಟೋಲ್ ಶುಲ್ಕಗಳು ಹೆಚ್ಚಾಗುತ್ತಿವೆ.

## 500ಕ್ಕೂ ಹೆಚ್ಚು ಜನರಿಗೆ ಕೆಲಸಕೊಡಿಸುವುದಾಗಿ ವಂಚನೆ: ದಂಪತಿ ಬಂಧನ

ಬೆಂಗಳೂರು: ಕೋರ್ಟ್‌ನಲ್ಲಿ ಕೆಲಸ ಕೊಡಿಸೋದಾಗಿ ಸುಮಾರು 500ಕ್ಕೂ ಹೆಚ್ಚು ಜನರಿಗೆ ವಂಚಿಸಿದ ದಂಪತಿಯನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

ಬಂಧಿತ ಆರೋಪಿಗಳನ್ನು ಜೈಸನ್ ಡಿಸೋಜಾ ಮತ್ತು ಲವೀನಾ ಎಂದು ಗುರುತಿಸಲಾಗಿದೆ. ಈ ಜೋಡಿ ನಿರೋದ್ಯೋಗಿಗಳು ಮತ್ತು ಖಾಸಗಿ ಕಂಪನಿಯಲ್ಲಿ ಕೆಲಸ ಮಾಡ್ತಿದ್ದ ಅಮಾಯಕರನ್ನು ಟಾರ್ಗೆಟ್ ಮಾಡಿ ವಂಚಿಸುತ್ತಿದ್ದರು. ಕೋರ್ಟ್‌ನಲ್ಲಿ 'ಡಿ' ಗ್ರೂಪ್ ಕೆಲಸ ಕೊಡಿಸೋದಾಗಿ ಒಬ್ಬೊಬ್ಬರಿಂದ 10 ರಿಂದ 25 ಲಕ್ಷ ರೂ. ವರೆಗೆ ಹಣ ಪಡೆದು ವಂಚಿಸಿದ್ದಾರೆ. ಹೀಗೆ ಸುಮಾರು ಐನೂರಕ್ಕೂ ಹೆಚ್ಚು ಜನರಿಂದ 25 ಕೋಟಿ ರೂ.ಗೂ ಹೆಚ್ಚು ಹಣ ಪಡೆದು ವಂಚಿಸಿದ್ದಾರೆ ಎನ್ನಲಾಗಿದೆ.

ನ್ಯಾಯಾಧೀಶರ ಸಹಿಯನ್ನೇ ನಕಲು ಮಾಡಿ ಆರ್ಡರ್ ಪ್ರತಿ ಎಂದು ಅಮಾಯಕರಿಗೆ ಈ ಜೋಡಿ ನಂಬಿಸಿತ್ತು. ಕೆಲಸ ಕೇಳಿದ್ರೆ ನಾಳೆ ನಾಡಿದ್ದು ಎಂದು ಕಥೆ ಹೇಳುತ್ತಿದ್ದರು. ಕೊನೆಗೆ ಫೋನ್ ರಿಸೀವ್ ಮಾಡುತ್ತಲೇ ಇರಲಿಲ್ಲ. ಮೋಸ ಹೋಗಿರೋದು ಗೊತ್ತಾಗಿ ಸಿಸಿಬಿಗೆ ಸಂತ್ರಸ್ಥರು ದೂರು ನೀಡಿದ್ದರು.

ಆರೋಪಿಗಳು ವಂಚನೆಗಾಗಿ ಒಂದು ಜಾಲವನ್ನೇ ಸೃಷ್ಟಿಸಿದ್ದರು. ಜನರನ್ನು ನಂಬಿಸಲು, ಹಣ ಪಡೆಯಲು ಏಜೆಂಟ್‌ಗಳನ್ನು ನೇಮಿಸಿಕೊಂಡಿದ್ದರು. ದಾಖಲೆ ಪರಿಶೀಲನೆ ಅಂತ ಖಾಸಗಿ ಹೋಟೆಲ್‌ಗೆ ಕರೆಸಿಕೊಂಡು ಬೇರೆಯವರಿಗೆ ಆಫರ್ ಲೆಟರ್ ಬಂದಿದೆ ಎಂದು ನಕಲಿ ಆಫರ್ ಲೆಟರ್ ತೋರಿಸಿ ವಂಚಿಸುತ್ತಿದ್ದರು. ಇಬ್ಬರನ್ನು ಬಂಧಿಸಿ ವಿಚಾರಣೆ ನಡೆಸಲಾಗುತ್ತಿದೆ.

ಈ ಸಂಬಂಧ ಬಸವೇಶ್ವರನಗರ ಪೊಲೀಸ್ ಠಾಣೆಯಲ್ಲೂ ಸಂತ್ರಸ್ಥರಿಂದ ದೂರು ದಾಖಲಾಗಿದೆ. ಈ ಹಿಂದೆ ಕೂಡ ಸರ್ಕಾರಿ ಕೆಲಸ ಕೊಡಿಸೋದಾಗಿ ದಂಪತಿ ವಂಚಿಸಿದ್ದರು. 2024 ರಲ್ಲಿ ಬಂಧನಕ್ಕೊಳಗಾಗಿ ರಿಲೀಸ್ ಆಗಿದ್ದರು. ಮತ್ತೆ ಅದೇ ಚಾಳಿ ಮುಂದುವರೆಸಿ ಪೊಲೀಸರ ಅತಿಥಿಗಳಾಗಿದ್ದಾರೆ.

## ಕಚ್ಚಾ ತೈಲ ಬೆಲೆ ದಿಢೀರ್ ಇಳಿಕೆ

ನವದೆಹಲಿ: ಇರಾನ್ ಮೇಲೆ ಅಮೆರಿಕ ದಾಳಿ ಮಾಡಿದ ಪರಿಣಾಮ ಗಗನಕ್ಕೇರಿದ್ದ ತೈಲ ಬೆಲೆಗಳು ಇದೀಗ ತಗ್ಗಿವೆ.

ಸೋಮವಾರ ಬ್ರೆಂಟ್ ಕ್ರೂಡ್ ಶೇ 11ರಷ್ಟು ಕಡಿಮೆ ಆಗಿದೆ. ಒಂದು ಬ್ಯಾರಲ್ ತೈಲದ ಬೆಲೆ 100 ಡಾಲರ್‌ಗಿಂತ ಕಡಿಮೆಗೆ ಇಳಿದಿದೆ. ತೈಲ ಬೆಲೆ ಏರಲು ಕಾರಣವಾಗಿದ್ದ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಟ್ರೂತ್ ಸೋಷಿಯಲ್‌ನಲ್ಲಿ ಪೋಸ್ಟ್ ಹಾಕಿದ ಬಳಿಕ ತೈಲ ಬೆಲೆ ಕೆಳ ಜಾರಿದೆ. ಇರಾನ್‌ನ ವಿದ್ಯುತ್ ಘಟಕಗಳು ಮತ್ತು ಇಂಧನ ಘಟಕಗಳ ಮೇಲೆ ದಾಳಿಯನ್ನು ಐದು ದಿನ ಮುಂದೂಡಿದ್ದೇವೆ. ಎರಡು ದಿನಗಳಿಂದ ಇರಾನ್ ಜೊತೆ ಉತ್ತಮ ಮಾತುಕತೆ ನಡೆಸಿರುವುದಾಗಿ ಟ್ರಂಪ್ ಹೇಳಿಕೊಂಡಿದ್ದಾರೆ.

ಇದರಿಂದ ಮಧ್ಯಪ್ರಾಚ್ಯದಲ್ಲಿ ಯುದ್ಧದ ಪರಿಸ್ಥಿತಿ ತಿಳಿಯಾಗುವ ಆಶಾಭಾವನೆ ಮೂಡಿರುವುದರಿಂದ ತೈಲ ಬೆಲೆ ಕಡಿಮೆಗೊಂಡಿರಬಹುದು. ಬ್ರೆಂಟ್ ಫ್ಯೂಚರ್ಸ್ ಮತ್ತು ಡಬ್ಲ್ಯುಟಿಐ ಫ್ಯೂಚರ್ಸ್ ಎರಡೂ ಕೂಡ ಶೇ. 10ಕ್ಕಿಂತಲೂ ಹೆಚ್ಚಿನ ಪ್ರಮಾಣದಷ್ಟು ಕುಸಿತ ಕಂಡಿವೆ.

ಸೋಮವಾರ ಒಂದು ಹಂತದಲ್ಲಿ ಬ್ರೆಂಟ್ ಫ್ಯೂಚರ್ಸ್ ಬ್ಯಾರಲ್‌ಗೆ 98 ಡಾಲರ್ ಬೆಲೆ ಹೊಂದಿತ್ತು. ಡಬ್ಲ್ಯುಟಿಐ ಕ್ರೂಡ್ ಫ್ಯೂಚರ್ಸ್ 91 ಡಾಲರ್ ಬೆಲೆ ಹೊಂದಿತ್ತು.

ಭಾರತ ಸಾರಥಿ
BHARATHA SARATHI KANNADA DAILY NEWS PAPER
24/03/2026
ಬೆಂಗಳೂರು | ಬೆಂ.ಗ್ರಾಮಾಂತರ | ತುಮಕೂರು | ಮೈಸೂರು | ಮಂಡ್ಯ | ರಾಮನಗರ | ಕೋಲಾರ | ಚಿಕ್ಕಬಳ್ಳಾಪುರ | ಚಿತ್ರದುರ್ಗ | ದಾವಣಗೆರೆ | ಶಿವಮೊಗ್ಗ | ಮಂಗಳೂರು | ಉಡುಪಿ | ಹುಬ್ಬಳ್ಳಿ | ಮಡಿಕೇರಿ | ಚಿಕ್ಕಮಗಳೂರು | ಹಾಸನ | ಬಳ್ಳಾರಿ
ಇ:ಪೇಪರ್: www.epaperbharathasarathi.com | ಇಮೇಲ್: desk.newsbox@gmail.com

# ವಿಸ್ತರಣೆ ಘೋಷಿಸಿದ ವ್ಯಾನ್ ಹ್ಯೂಸೆನ್




ಬೆಂಗಳೂರು

ಆದಿತ್ಯ ಬಿರ್ಲಾ ಲೈಫ್‌ಸ್ಟೈಲ್ ಬ್ರ್ಯಾಂಡ್ಸ್ ಲಿ.,ನ ಇನ್ನರ್ ವೇರ್ ಘಟಕವಾದ ವ್ಯಾನ್ ಹ್ಯೂಸೆನ್, ಜಯನಗರದಲ್ಲಿರುವ ತನ್ನ ಪ್ರಮುಖ ಮಳಿಗೆಯ ವಿಸ್ತರಣೆಯನ್ನು ಘೋಷಿಸಿದೆ. ಮಳಿಗೆಯು ಈಗ ಒಂದೇ ಸೂರಿನಡಿ ಪುರುಷರು ಮತ್ತು ಮಹಿಳೆಯರಿಗಾಗಿ ಅಧಿಕ-ಕಾರ್ಯಕ್ಷಮೆಯ ಇನ್ನರ್ ವೇರ್ನ ಸಂಪೂರ್ಣ ಶ್ರೇಣಿಯನ್ನು ತಂದಿದೆ.

ನವೀಕೃತಗೊಂಡಿರುವ ಜಯನಗರ ಮಳಿಗೆಯು, ಇಂದಿನ ನಗರ ಗ್ರಾಹಕರಿಗಾಗಿ ಒಂದು ಪರಿಕಲ್ಪಿಸಲಾದ ಗಮ್ಯವಾಗಿದೆ. ಇದು, ಇನ್ನರ್ ವೇರ್, ಲೌಂಜ್ ವೇರ್, ಮತ್ತು ಸೂಕ್ಷ್ಮ ಫಿಟ್‌ಗಳು ಹಾಗೂ ಪ್ರತಿನಿತ್ಯದ ಉಪಯುಕ್ತತೆಯನ್ನು ಆವಿಷ್ಕಾರದೊಡನೆ ಮೇಳೈಸುವ ಅಥ್ಲೀಶರ್ನ ವರ್ಧಿತ ಮಿಶ್ರಣವನ್ನು ಪ್ರದರ್ಶಿಸಿದೆ. ಪುರುಷರಿಗಾಗಿ ವೈವಿಧ್ಯಮಯವಾದ ಕಾರ್ಯಕ್ಷಮತೆ-ನಿರ್ದೇಶಿತ ಸ್ಟೈಲ್‌ಗಳ ಜೊತೆಜೊತೆಗೇ, ಮಹಿಳೆಯರಿಗಾಗಿ ಸಿಲ್ಹೂಟ್‌ಗಳು ಹಾಗೂ ಆಧಾರಾವಶ್ಯಕಗಳನ್ನು ಇಂಜಿನಿಯರ್ ಮಾಡಲಾಗಿರುವ ಕೊಡುಗೆಯು, ಕೆಲಸದಿಂದ ಹಿಡಿದು ವರ್ಕೌಟ್ ಹಾಗೂ ಅದರಾಚೆಯವರೆಗೆ, ವೇಗ-ಗತಿಯ ಜೀವನಶೈಲಿಗಳಿಗೆ ಪೂರಕವಾಗಿರುವ ವಿನ್ಯಾಸಗಳನ್ನು ಒದಗಿಸುತ್ತದೆ.

ವ್ಯಾಪ್ತಿಯಲ್ಲಿರುವ ಪ್ರಧಾನ ಮಳಿಗೆಯು, ಪುರುಷರು ಮತ್ತು ಮಹಿಳೆಯರಿಗಾಗಿ ವಿಶಿಷ್ಟ ವಲಯಗಳಿರುವ ಸ್ಟ್ರೀಮ್‌ಲೈನ್ ಮಾಡಲಾದ ಲೇಔಟ್ ಹೊಂದಿದೆ. ಪುರುಷರ ಅಸಾರ್ಟ್‌ಮೆಂಟ್, ಹೈಬ್ರಿಡ್ ದಿನಚರಿಗಾಗಿ ಸೂಕ್ತಗೊಳಿಸಲಾಗಿದ್ದು, ಧರಿಸುವ ಆರಾಮವನ್ನು, ಕಾರ್ಯಕ್ಷಮತೆ-ಕೇಂದ್ರಿತ ನಿರ್ಮಾಣದೊಂದಿಗೆ ಮೇಳೈಸಲಾಗಿದೆ.

# ಹೈ-ಆಕ್ಟೇನ್ ಸ್ಪರ್ಧೆ ಯಶಸ್ವಿ



ಮೊರ್ಜಿಮ್

ಗೋವಾದ ಮೊರ್ಜಿಮ್ ಸಮುದ್ರತೀರದಲ್ಲಿ ನಡೆದ ರಾಷ್ಟ್ರೀಯ ಮಟ್ಟದ ವಿಂಡ್ಸರ್ಫಿಂಗ್ ಮತ್ತು ಕೈಟ್ಬೋರ್ಡಿಂಗ್ ಚಾಂಪಿಯನ್ಶಿಪ್ ಯಶಸ್ವಿಯಾಗಿ ಸಮಾಪ್ತಿಯಾಯಿತು. ಮಾರ್ಚ್ 18ರಿಂದ 22ರವರೆಗೆ ಐದು ದಿನಗಳ ಕಾಲ ನಡೆದ ಈ ಹೈ-ಆಕ್ಟೇನ್ ಸ್ಪರ್ಧೆಯನ್ನು ಗೋವಾ ಪ್ರವಾಸೋದ್ಯಮ ಇಲಾಖೆ ಆಯೋಜಿಸಿತ್ತು. ಚಾಂಪಿಯನ್ಶಿಪ್ ಅಂತಿಮ ದಿನದಲ್ಲಿ ಗೋವಾ ಪ್ರವಾಸೋದ್ಯಮ ಸಚಿವ ರೋಹನ್ ಎ. ಖೌಂಟೆ ಭಾಗವಹಿಸಿ, ದೇಶದ ವಿವಿಧ ಭಾಗಗಳಿಂದ ಆಗಮಿಸಿದ ಕ್ರೀಡಾಪಟುಗಳೊಂದಿಗೆ ಸಂವಹನ ನಡೆಸಿದರು. ಸ್ಪರ್ಧೆಯ ರೋಮಾಂಚಕ ಕ್ಷಣಗಳನ್ನು ನೇರವಾಗಿ ವೀಕ್ಷಿಸಿದ ಅವರು, ಕೈಟ್ಬೋರ್ಡಿಂಗ್ ಕ್ರೀಡೆಯನ್ನು ಸ್ವತಃ ಅನುಭವಿಸಿ ಕ್ರೀಡಾಪಟುಗಳ ಕೌಶಲ್ಯವನ್ನು ಮೆಚ್ಚಿದರು. ಈ ಸಂದರ್ಭದಲ್ಲಿ ಮಾತನಾಡಿದ ಸಚಿವರು, "ಮೊರ್ಜಿಮ್ನಲ್ಲಿ ನಡೆದ ವಿಂಡ್ಸರ್ಫಿಂಗ್ ಮತ್ತು ಕೈಟ್ಬೋರ್ಡಿಂಗ್ ಸ್ಪರ್ಧೆಗಳು ಅತ್ಯಂತ ಪ್ರೇರಣಾದಾಯಕವಾಗಿವೆ. ಕ್ರೀಡಾಪಟುಗಳ ಶಕ್ತಿ, ವೇಗ ಮತ್ತು ನಿಖರತೆ ನಮ್ಮೆಲ್ಲರಿಗೂ ಹೆಮ್ಮೆ ತಂದಿದೆ. ಇಂತಹ ಕಾರ್ಯಕ್ರಮಗಳು ಕೇವಲ ಕ್ರೀಡಾ ಕ್ಷೇತ್ರವನ್ನಷ್ಟೇ ಅಲ್ಲದೆ, ಗೋವಾವನ್ನು ಸಾಹಸ ಮತ್ತು ಜಲ ಕ್ರೀಡಾ ಪ್ರವಾಸೋದ್ಯಮದ ಪ್ರಮುಖ ಕೇಂದ್ರವನ್ನಾಗಿ ರೂಪಿಸುತ್ತವೆ" ಎಂದು ಹೇಳಿದರು. ಅವರು ಮುಂದುವರಿದು, ರಾಜ್ಯದ ನೈಸರ್ಗಿಕ ಸಂಪನ್ಮೂಲಗಳನ್ನು ಬಳಸಿಕೊಂಡು ವಿಶ್ವಮಟ್ಟದ ಕ್ರೀಡಾ ವೇದಿಕೆಗಳನ್ನು ನಿರ್ಮಿಸುವತ್ತ ಸರ್ಕಾರ ಬದ್ಧವಾಗಿದೆ ಎಂದು ತಿಳಿಸಿದರು. ಚಾಂಪಿಯನ್ಶಿಪ್‌ನಲ್ಲಿ ಸಾಧನೆಗೈದ ವಿಜೇತ ಕ್ರೀಡಾಪಟುಗಳಿಗೆ ಪ್ರಶಸ್ತಿ ನೀಡಿ ಸನ್ಮಾನಿಸಲಾಯಿತು. ಈ ಸ್ಪರ್ಧೆ ರಾಷ್ಟ್ರೀಯ ಶ್ರೇಯಾಂಕ ವೇದಿಕೆಯಾಗಿ ಕಾರ್ಯನಿರ್ವಹಿಸಿ, ಏಷ್ಯನ್ ಕ್ರೀಡಾಕೂಟ ಸೇರಿದಂತೆ ಅಂತರರಾಷ್ಟ್ರೀಯ ಮಟ್ಟದಲ್ಲಿ ಭಾರತವನ್ನು ಪ್ರತಿನಿಧಿಸುವ ಪ್ರತಿಭಾವಂತ ಕ್ರೀಡಾಪಟುಗಳನ್ನು ಗುರುತಿಸುವಲ್ಲಿ ಪ್ರಮುಖ ಪಾತ್ರವಹಿಸಿದೆ.

ಒಟ್ಟಾರೆ, ಈ ಚಾಂಪಿಯನ್ಶಿಪ್ ಭಾರತದಲ್ಲಿ ಜಲ ಕ್ರೀಡೆಗಳ ಬೆಳವಣಿಗೆಗೆ ಮತ್ತೊಂದು ಮೈಲುಗಲ್ಲಾಗಿ ಗುರುತಿಸಿಕೊಂಡಿದೆ.

# ಸರ್ಕಾರಿ ಜಾಗ ಕಬಳಿಕೆ ವಿರುದ್ಧ ಆರ್‌ಬಿಐ ಬಡಾವಣೆಯ ಕಲ್ಯಾಣ ಸಂಘ ಕಾನೂನು ಹೋರಾಟ

ಬೆಂಗಳೂರು

ಕೊತ್ತನೂರು ಗ್ರಾಮದ ಆರ್‌ಬಿಐ ಬಡಾವಣೆಯಲ್ಲಿ ಗ್ರೇಟರ್ ಬೆಂಗಳೂರು ಪ್ರಾಧಿಕಾರಕ್ಕೆ (ಜಿಬಿಎ)ಸೇರಿದ ಜಾಗವನ್ನು ಕೆಲವು ಕಿಡಿಗೇಡಿಗಳು ಸುಳ್ಳು ದಾಖಲೆ ಸೃಷ್ಟಿಸಿ ತಮ್ಮ ಕಬಳಿಕೆ ಮಾಡುತ್ತಿರುವುದನ್ನು ಸರಕಾರ ತಕ್ಷಣ ತಡೆಯಬೇಕೆಂದು ಆರ್‌ಬಿಐ ಬಡಾವಣೆಯ ಕಲ್ಯಾಣ ಸಂಘ ಆಗ್ರಹಿಸಿದೆ.

ಪಾರ್ಕ್‌ಗೆ ಸೇರಿದ ಜಾಗವನ್ನು ಕೆಲವು ವ್ಯಕ್ತಿಗಳು ಆಕ್ರಮವಾಗಿ ಕಬಳಿಕೆ ಮಾಡಿ ಅನಧಿಕೃತವಾಗಿ ಶೆಡ್ ನಿರ್ಮಾಣ ಮಾಡಿಕೊಂಡಿದ್ದಾರೆ. ಇದಕ್ಕೆ ಅನಧಿಕೃತವಾಗಿ ಜಿಬಿಎಯಿಂದ ಖಾತೆಯನ್ನು ಸಹ ಸೃಷ್ಟಿಸಿದ್ದಾರೆ. ಇದು ಸಾರ್ವಜನಿಕ ಆಸ್ತಿ ಎಂಬುದು ಸಾರ್ವಜನಿಕರಿಗೆ ಚೆನ್ನಾಗಿ ತಿಳಿದಿದ್ದು, ಕೆಲವು ಪ್ರಭಾವಿ ರಾಜಕೀಯ ವ್ಯಕ್ತಿಗಳ ಹೆಸರು ದುರುಪಯೋಗ ಮಾಡಿಕೊಂಡು ಈ ರೀತಿಯಲ್ಲಿ ಕಬಳಕೆ ಮಾಡುತ್ತಿದ್ದಾರೆ. ಈ ಪ್ರಕರಣದಲ್ಲಿ ಮೇಲು ನೋಟಕ್ಕೆ ಸರ್ಕಾರಿ ಅಧಿಕಾರಿಗಳು ಶಾಮೀಲಾಗಿರುವುದು ಕಂಡು ಬಂದಿದ್ದು, ರಾಜ್ಯ ಸರ್ಕಾರ ಕೂಡ ಪರೋಕ್ಷವಾಗಿ ಸಾಥ್ ನೀಡುತ್ತಿದೆ ಎಂದು ಸಂಘದ ಪದಾಧಿಕಾರಿಗಳು ಆರೋಪಿಸಿದ್ದಾರೆ. ಈ ಬಗ್ಗೆ ರಾಜ್ಯ ಸರಕಾರ ಕ್ರಮ ಜರುಗಿಸಬೇಕೆಂದು ಆರ್ ಬಿಐ



ಬಡಾವಣೆಯ ಕಲ್ಯಾಣ ಸಂಘ ಜಿಬಿಎ ಬೆಂಗಳೂರು ದಕ್ಷಿಣ ವಲಯಕ್ಕೆ ದೂರು ನೀಡಿ ಆಗ್ರಹಿಸಿದೆ.

ಆರ್‌ಬಿಐ ಬಡಾವಣೆಯ ಕಲ್ಯಾಣ ಸಂಘ ಸದಸ್ಯ ಉಮೇಶ್ ಮಾತನಾಡಿ, "ಸರ್ಕಾರಕ್ಕೆ ಬೇಕಿರುವ ಜಾಗವನ್ನು ಅನಧಿಕೃತರ ಹೆಸರಿಗೆ ಖಾತೆಯನ್ನು ಮಾಡಿಕೊಡಲಾಗಿದೆ. ಕಬ್ಜ ಮಾಡಿರುವ ಸ್ಥಳವನ್ನು ಜಿಬಿಎ ಕಾರ್ಯನಿರ್ವಾಹಕ ಅಭಿಯಂತರು ಕೂಡಲೇ ಕ್ರಮವಹಿಸಿ ಸಾರ್ವಜನಿಕರ ಹಿತಾಸಕ್ತಿಯಿಂದ ಸ್ಥಳವನ್ನು ಬಿಡಿಸಿಕೊಡಬೇಕು. ಅಲ್ಲದೆ, ಅಕ್ರಮವಾಗಿ ಖಾತೆ ಮಾಡಿಕೊಟ್ಟಿರುವ ಅಧಿಕಾರಿಗಳ ವಿರುದ್ಧವೂ ಕ್ರಮ ಜರುಗಿಸಬೇಕೆಂದು" ಆಗ್ರಹಿಸಿದ್ದಾರೆ. "ಈ ಜಾಗವು ಸರಕಾರಕ್ಕೆ ಸೇರಿದ ಜಾಗವಾಗಿದೆ. ಆದರೆ, ಕೆಲವು ಖಾಸಗಿ ವ್ಯಕ್ತಿಗಳಾದ ಕಾಂತರಾಜು, ರವಿ ಮಳಿಮಠ್ ಪಾಟೀಲ್, ಹೇಮರಾಜ್ ಬೋಗಸ್ ದಾಖಲೆಗಳನ್ನು ಸೃಷ್ಟಿಮಾಡಿಕೊಂಡು ಜಾಗ ಕಬಳಿಕೆ ಮಾಡಿದ್ದಾರೆ. ಸಾರ್ವಜನಿಕರು ಪ್ರಶ್ನಿಸಿದರೆ, ಇದನ್ನು ಪ್ರಶ್ನಿಸಿದರೆ, ನಾವು ರಾಜಕೀಯ ಹಿನ್ನೆಲೆ ಉಳ್ಳವರು ಎಂದು ದರ್ಪ ತೋರಿಸುತ್ತಾರೆ. ಹೀಗಾಗಿ ಸರಕಾರ ಜಾಗವನ್ನು ತಮ್ಮ ಸಪರ್ದಿಗೆ ಪಡೆಯಬೇಕೆಂದು ಆಗ್ರಹಿಸಿದ್ದಾರೆ.

# ಆಫ್ ಲೈನ್ ಮಳಿಗೆ 'ಅಲ್ಫಾರ್ಝ್-ಇ-ಹೀರ್' ಉದ್ಘಾಟನೆ

ಬೆಂಗಳೂರು

ಜಿವಾದ ಚಿನ್ನ ಮತ್ತು ಪ್ರಯೋಗಾಲಯದಲ್ಲಿ ರೂಪಿಸಿದ ವಜ್ರಾಭರಣ ಬ್ರಾಂಡ್ ಹೀರ್ ಬೈ ಜಿವಾ ತನ್ನ ಮೊದಲ ಆಫ್ ಲೈನ್ ಮಳಿಗೆ 'ಅಲ್ಫಾರ್ಝ್-ಇ-ಹೀರ್' ಅನ್ನು ಕವಿತೆ, ಕಥೆಗಳು ಮತ್ತು ಕ್ರಿಯೇಟರ್ ಗಳು, ಫ್ಯಾಷನ್ ಉತ್ಸಾಹಿಗಳು ಮತ್ತು ವೃದ್ಧಿಸುತ್ತಿರುವ ಹೀರ್ ಸಮುದಾಯದೊಂದಿಗೆ ಪ್ರಾರಂಭಿಸಿತು.

ಈ ಪ್ರಾರಂಭೋತ್ಸವಕ್ಕೆ ಪ್ರಿಯಾ ಮಾಲಿಕ್ ಅವರ ಶಾಯರಿ ನೈಟ್ ಆಯೋಜಿಸಲಾಗಿದ್ದು ಅದು ಅಭಿವ್ಯಕ್ತಿ, ವೈಯಕ್ತಿಕತೆ ಮತ್ತು ಕಥೆ ಹೇಳುವಿಕೆಯೊಂದಿಗೆ ಎಲ್ಲರನ್ನೂ ರಂಜಿಸಿತು. ಈ ಸಂಭ್ರಮಾಚರಣೆಯು ಲೈವ್ಲಿ ಟ್ರಿವಿಯಾ ನೈಟ್ ಮತ್ತು ಪ್ರಾರಂಭೋತ್ಸವದ ಪಾರ್ಟಿಯೊಂದಿಗೆ ಅತಿಥಿಗಳು ಹೀರ್ ನ ಆಭರಣ ಸಂಗ್ರಹಗಳನ್ನು ವೀಕ್ಷಿಸುವ ಅನುಭವ ಪಡೆದರು. ಸಾಂಪ್ರದಾಯಿಕ ಮಳಿಗೆ ಪ್ರಾರಂಭಕ್ಕಿಂತ ಭಿನ್ನವಾಗಿ ರೂಪಿಸಲಾಗಿದ್ದ 'ಅಲ್ಫಾರ್ಝ್-ಇ-ಹೀರ್' ಆಭರಣವು ಬರೀ ಅಲಂಕರಣವಲ್ಲ, ಬದಲಿಗೆ ಅದು ವೈಯಕ್ತಿಕ ಅಭಿವ್ಯಕ್ತಿಯ ಮಾದರಿಯಾಗಿದೆ ಎಂದು ತೋರಿಸಿದೆ. ಕವಿತೆ, ಸಂವಹನಗಳು ಮತ್ತು ಸಮುದಾಯ



ಕ್ಷಣಗಳ ಮೂಲಕ ಪ್ರಾರಂಭೋತ್ಸವವು ಹೀರ್ ಗುರುತನ್ನು ಸಂಭ್ರಮಿಸುವ ಹಲವು ಧ್ವನಿಗಳು ಮತ್ತು ಕಥೆಗಳನ್ನು ಸಂಭ್ರಮಿಸಿತು. ಈ ಹೊಸ ಮಳಿಗೆಯು ಗ್ರಾಹಕರಿಗೆ ಹೀರ್ ಬೈ ಜಿವಾದ ಚಿನ್ನ ಮತ್ತು ಪ್ರಯೋಗಾಲಯದಲ್ಲಿ ತಯಾರಿಸಿದ ವಜ್ರಾಭರಣ ಸಂಗ್ರಹದೊಂದಿಗೆ ವಿಶಿಷ್ಟ ರೀಟೇಲ್ ಪರಿಸರ ಹೊಂದಿದ್ದು ಅದು ಬ್ರಾಂಡ್ ನ ಸಮಕಾಲೀನ ಮತ್ತು ಅಭಿವ್ಯಕ್ತಿಶೀಲ ಸ್ಫೂರ್ತಿಯನ್ನು ಬಿಂಬಿಸುತ್ತದೆ..

# ರಾಷ್ಟ್ರವ್ಯಾಪಿ ವಿಸ್ತರಣೆಗೆ 'ಹೌಸ್ ಆಫ್ ಹಾನ್ಸೆಟ್ 108' ಯೋಜನೆ

ಬೆಂಗಳೂರು

ನಗರ ವಸತಿ ಕ್ಷೇತ್ರದಲ್ಲಿ ತಂತ್ರಜ್ಞಾನಾಧಾರಿತ ಪರಿವರ್ತನೆಗೆ ಮುಂದಾಗಿರುವ ಬೆಂಗಳೂರು ಮೂಲದ ಪ್ರಾಪ್ಟೆಕ್ ಸ್ಟಾರ್ಟ್‌ಅಪ್ 'ಹೌಸ್ ಆಫ್ ಹಾನ್ಸೆಟ್ 108', ತನ್ನ ಸೇವೆಗಳನ್ನು ರಾಷ್ಟ್ರದ ಪ್ರಮುಖ ನಗರಗಳಿಗೆ ವಿಸ್ತರಿಸುವ ಮಹತ್ವಾಕಾಂಕ್ಷಿ ಯೋಜನೆಯನ್ನು ಘೋಷಿಸಿದೆ.

ಪ್ರಸ್ತುತ ಬೆಂಗಳೂರು, ಹೈದರಾಬಾದ್ ಮತ್ತು ಮೈಸೂರು ನಗರಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಈ ಸಂಸ್ಥೆ, ವಿನ್ಯಾಸ, ನಿರ್ಮಾಣ ಮತ್ತು ತಂತ್ರಜ್ಞಾನಗಳ ಸಮಗ್ರ ಸಂಯೋಜನೆಯ ಮೂಲಕ ಮನೆ ನಿರ್ಮಾಣ ಕ್ಷೇತ್ರದಲ್ಲಿ ಹೊಸ ಮಾದರಿಯನ್ನು ರೂಪಿಸುತ್ತಿದೆ. ಟೆಕ್-ಸಹಾಯಕ ವಿನ್ಯಾಸ, ಫ್ಯಾಕ್ಟರಿ ಬೆಂಬಲಿತ ಉತ್ಪಾದನೆ ಮತ್ತು ಸಂರಚಿತ ಕಾರ್ಯಗತಗೊಳಿಸುವಿಕೆಯ ಮೂಲಕ ಗ್ರಾಹಕರಿಗೆ ಸುಗಮ ಮತ್ತು ಪಾರದರ್ಶಕ ಸೇವೆಯನ್ನು ಒದಗಿಸುವುದು ಸಂಸ್ಥೆಯ ಪ್ರಮುಖ ಗುರಿಯಾಗಿದೆ.



ವಸತಿ ನಿರ್ಮಾಣ ಕ್ಷೇತ್ರದಲ್ಲಿ ಸಾಮಾನ್ಯವಾಗಿ ಕಾಣಿಸಿಕೊಳ್ಳುವ ಅಸಂಘಟಿತ ವ್ಯವಸ್ಥೆ, ಸಮಯ ವಿಳಂಬ ಮತ್ತು ವೆಚ್ಚದ ಅನಿಶ್ಚಿತತೆಯನ್ನು ನಿವಾರಿಸಲು 'ಹೌಸ್ ಆಫ್ ಹಾನ್ಸೆಟ್ 108' ಒಂದು ಸಮಗ್ರ ಪರಿಹಾರವಾಗಿ ಹೊರಹೊಮ್ಮಿದೆ.

ಆರ್ಕಿಟೆಕ್ಚರ್, ಇಂಟೀರಿಯರ್ ವಿನ್ಯಾಸ ಮತ್ತು ನಿರ್ಮಾಣ ಸೇವೆಗಳನ್ನು ಒಂದೇ ವೇದಿಕೆಯಲ್ಲಿ ಒದಗಿಸುವ ಮೂಲಕ, ಗ್ರಾಹಕರಿಗೆ ಟರ್ನ್ಕೀ ಪರಿಹಾರಗಳನ್ನು ನೀಡುತ್ತಿದೆ.

ಡಿಜಿಟಲ್ ಯೋಜನಾ ವ್ಯವಸ್ಥೆಗಳು, ಪ್ರಕ್ರಿಯೆ ಆಧಾರಿತ ಕಾರ್ಯಪ್ರವಾಹಗಳು ಮತ್ತು ಕೇಂದ್ರಿತ ಸಮನ್ವಯ ವ್ಯವಸ್ಥೆಗಳ ನೆರವಿನಿಂದ ಮನೆ ನಿರ್ಮಾಣ ಪ್ರಕ್ರಿಯೆಯಲ್ಲಿ ಹೆಚ್ಚಿನ ಹೊಣೆಗಾರಿಕೆ, ಸಮಯ ಶಿಸ್ತು ಮತ್ತು ಗುಣಮಟ್ಟವನ್ನು ಖಚಿತಪಡಿಸಲು ಸಂಸ್ಥೆ ಪ್ರಯತ್ನಿಸುತ್ತಿದೆ.

ಕಂಪನಿಯ ಗ್ರೂಪ್ ಸಿಇಒ ಸಂದೀಪ್ ಮಾತನಾಡಿ, "ಭಾರತದಲ್ಲಿ ಮನೆ ನಿರ್ಮಾಣ ಇನ್ನೂ ಬಹುತೇಕ ಅಸಂಘಟಿತವಾಗಿದೆ. ಗ್ರಾಹಕರು ಅನೇಕ ವಿತರಕರೊಂದಿಗೆ ಕೆಲಸ ಮಾಡಬೇಕಾಗುತ್ತದೆ. ನಾವು ತಂತ್ರಜ್ಞಾನ ಮತ್ತು ಸಂರಚಿತ ಪ್ರಕ್ರಿಯೆಗಳ ಮೂಲಕ ಈ ಅನುಭವವನ್ನು ಸುಲಭ, ಸ್ಪಷ್ಟ ಮತ್ತು ಗ್ರಾಹಕ ಕೇಂದ್ರಿತವಾಗಿಸಲು ಪ್ರಯತ್ನಿಸುತ್ತಿದ್ದೇವೆ," ಎಂದು ಹೇಳಿದರು.

ಹೊಸ ಮನೆ ನಿರ್ಮಾಣ, ನವೀಕರಣ ಹಾಗೂ ಇಂಟೀರಿಯರ್ ಫಿಟ್‌ಔಟ್ ಸೇವೆಗಳಿಗೆ ಹೆಚ್ಚುತ್ತಿರುವ ಬೇಡಿಕೆಯನ್ನು ಗಮನದಲ್ಲಿಟ್ಟುಕೊಂಡು, ಸಂಸ್ಥೆ ತನ್ನ ಕಾರ್ಯಪದ್ಧತಿಯನ್ನು ದೇಶದ ಇತರೆ ವೇಗವಾಗಿ ಬೆಳೆಯುತ್ತಿರುವ ನಗರಗಳಲ್ಲಿ ಅನುಷ್ಠಾನಗೊಳಿಸಲು ಸಜ್ಜಾಗಿದೆ.

# ಇಂದ್ರಿಯ ಮಳಿಗೆ ಆರಂಭ

ಹುಬ್ಬಳ್ಳಿ

ಇಂದ್ರಿಯ, ಆದಿತ್ಯ ಬಿರ್ಲಾ ಜ್ಯುವೆಲ್ಲರಿ, ಹುಬ್ಬಳ್ಳಿಯ ಕೊಪ್ಪಿಕರ್ ರಸ್ತೆಯಲ್ಲಿರುವ ತನ್ನ ಹೊಸ ಮಳಿಗೆಯ ಬಿಡುಗಡೆಯೊಂದಿಗೆ ತನ್ನ ಪ್ರಬಲ ರಾಷ್ಟ್ರೀಯ ಬೆಳವಣಿಗೆಯನ್ನು ಮುಂದುವರಿಸಿದೆ.

ಈ ತೆರೆಯುವಿಕೆಯು ಕರ್ನಾಟಕದಲ್ಲಿ ಬ್ರ್ಯಾಂಡ್‌ನ 5ನೇ ಮಳಿಗೆಯಾಗಿದ್ದು ದಕ್ಷಿಣ ಭಾರತದಲ್ಲಿ ತನ್ನ ಹೆಜ್ಜೆಗುರುತನ್ನು ಇನ್ನಷ್ಟು ಬಲಪಡಿಸುವ ಮೂಲಕ ಅತಿಮುಖ್ಯವಾದ ಬೆಳೆಯುತ್ತಿರುವ ನಗರ ಕೇಂದ್ರಗಳಿಗೆ ಅದರ ವಿಶಿಷ್ಟ ಆಭರಣ ರೀಟೇಲ್ ಅನುಭವವನ್ನು ತರುವಲ್ಲಿ ಅದರ ಬದ್ಧತೆಯನ್ನು ಪುನರುಚ್ಚರಿಸಿದೆ.

ಹುಬ್ಬಳ್ಳಿಯು, ಉತ್ತರ ಕರ್ನಾಟಕದ ಪ್ರಮುಖ ವಾಣಿಜ್ಯ ಹಾಗೂ ಜೀವನಶೈಲಿ ಕೇಂದ್ರಗಳ ಪೈಕಿ ಒಂದಾಗಿ ನಿರಂತರವಾಗಿ ವಿಕಸನಗೊಳ್ಳುತ್ತಿದ್ದು, ವಧು, ಹಬ್ಬ, ಮತ್ತು ತತ್ಕಾಲೀನ ಸೂಕ್ಷ್ಮ ಆಭರಣಗಳಿಗೆ ಬೇಡಿಕೆ ಹೆಚ್ಚಾಗುತ್ತಿದೆ. ನಗರದ ಸುಪ್ರಸಿದ್ಧ




ರೀಟೇಲ್ ಮತ್ತು ವಾಣಿಜ್ಯ ಪೈಕಿ ಒಂದಾದ ಕೊಪ್ಪಿಕರ್ ರಸ್ತೆಯಲ್ಲಿರುವ ಹೊಸ ಮಳಿಗೆಯು, ಪ್ರಬಲ ಗೋಚರತೆ ಮತ್ತು ಪ್ರವೇಶಸಾಧ್ಯತೆಯನ್ನು ಹೊಂದಿರುವುದರಿಂದ, ಈ ಪ್ರದೇಶದಾದ್ಯಂತ ಶಾಪರ್ ಗಳು ಮತ್ತು ಆಭರಣ ಉತ್ಸಾಹಿಗಳಿಗೆ ಅನುಕೂಲ ಗಮ್ಯವಾಗಿ ತನ್ನ ಸ್ಥಾನವನ್ನು ಭದ್ರಪಡಿಸಿಕೊಳ್ಳುತ್ತದೆ.

ಮಳಿಗೆಯು, ವಧು, ಹಬ್ಬ, ತತ್ಕಾಲೀನ ಮತ್ತು ಪ್ರತಿನಿತ್ಯದ ಸಂಗ್ರಹಗಳಾದ್ಯಂತ ಬಂಗಾರ, ಪೋಲ್ಕಿ ಮತ್ತು ವಜ್ರಾಭರಣಗಳ 32,000ಕ್ಕಿಂತ ಹೆಚ್ಚಿನ ಅತ್ಯಂತ ಎಚ್ಚರಿಕೆಯಿಂದ ರಚಿಸಲ್ಪಟ್ಟ ವಿನ್ಯಾಸಗಳನ್ನು ಒದಗಿಸುವುದರಿಂದ, ಅದು ಮಾರುಕಟ್ಟೆಯಲ್ಲಿ ಲಭ್ಯವಿರುವ ಅತ್ಯಂತ ವಿಶಾಲವಾದ ಸಂಗ್ರಹವನ್ನು ಹೊಂದಿದೆ. ರೀಟೇಲ್ ಅನುಭವವು, ವಿಶೇಷವಾದ ವಧುವಿನ ಲೌಂಜ್ ಮತ್ತು ಪ್ರತಿಯೊಂದು ಸೃಷ್ಟಿಯ ಹಿಂದಿರುವ ಸೂಕ್ಷ್ಮ ಕಲಾವಂತಿಕೆಯನ್ನು ಪ್ರದರ್ಶಿಸುವ ಕಾರಿಗರಿ ಒಳಗೊಂಡಂತೆ, ಅತ್ಯಂತ ಆಲೋಚನಾಪೂರ್ವಕವಾಗಿ ಯೋಜಿಸಲಾದ ಪ್ರದೇಶಗಳ ಮೂಲಕ ವರ್ಧಿತಗೊಳ್ಳುತ್ತದೆ.

ಇಂದ್ರಿಯಾದ ವಿನ್ಯಾಸ-ನಿರ್ದೇಶಿತ ಮತ್ತು ಅನುಭವ-ಮೊದಲು ಸಿದ್ಧಾಂತವನ್ನು ಪ್ರತಿಫಲಿಸುವ ಮಳಿಗೆಯು, ಭವ್ಯವಾದ ಸೌಂದರ್ಯವನ್ನು ತಲ್ಲೀನ ಮತ್ತು ತೊಡಗಿಕೊಳ್ಳುವಂತಹ ಗ್ರಾಹಕ ಸಂವಾದಗಳನ್ನು ಮೇಳೈಸಿದೆ.

# ಪಿಲಿಯನ್ ರೈಡರ್ ಟು ರೈಡರ್ ಯಶಸ್ವಿ

ಹುಬ್ಬಳ್ಳಿ

ದೇಶದ ಮುಂಚೂಣಿ ನಾನ್-ಬ್ಯಾಂಕಿಂಗ್ ಹಣಕಾಸು ಸಂಸ್ಥೆಗಳ ಪೈಕಿ ಒಂದಾದ ಎಲ್ & ಟಿ ಫೈನಾನ್ಸ್ ಲಿ., ಹುಬ್ಬಳ್ಳಿಯ ಕೆಎಲ್‌ಇ ಸೊಸೈಟಿಯ ಜಗದ್ಗುರು ಗಂಗಾಧರ ಕಾಲೇಜಿನಲ್ಲಿ ತನ್ನ ಪಿಲಿಯನ್ ರೈಡರ್ ಟು ರೈಡರ್ ಕಾರ್ಯಕ್ರಮವನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದೆ.

ವಿಶೇಷವಾದ ದ್ವಿಚಕ್ರ ವಾಹನ ಕಲಿಕೆಯ ಮೂಲಕ ವೈಯಕ್ತಿಕ ಸ್ವಾತಂತ್ರ್ಯವನ್ನು ಅನಾವರಣಗೊಳಿಸುವುದಕ್ಕೆ ನಿಬದ್ಧವಾದ ಸರ್ಕಾರೇತರ ಸಂಸ್ಥೆಯಾದ ಆತ್ಮನಿರ್ಭರ್ ದೊಂದಿಗಿನ ಸಹಭಾಗಿತ್ವದೊಂದಿಗೆ ಎಲ್‌ಟಿಎಫ್, ಮಹಿಳೆಯರು, ನಿಜವಾದ ಸ್ವಾತಂತ್ರ್ಯ ಮತ್ತು ಸಂಚಾರ ಸಾಮರ್ಥ್ಯವನ್ನು ಸಾಧಿಸಲು ಬಲನೀಡುತ್ತಿದೆ.

ಈ ಉಪಕ್ರಮವು ಎಲ್‌ಟಿಎಫ್‌ಗೆ ಒಂದು ಪ್ರಮುಖ ಟಚ್‌ಪಾಯಿಂಟ್ ಆಗಿದ್ದು, ಮುಂದಿನ ಪೀಳಿಗೆಗಾಗಿ ಒಂದು ವಿಶ್ವಸನೀಯ ಸಹಾಯಕನಾಗಿ ತನ್ನ ಬದ್ಧತೆಯನ್ನು ಪುನರುಚ್ಚರಿಸಿದೆ.

ಸಾರ್ವಜನಿಕ ಸಾರಿಗೆಯಿಂದ ವೈಯಕ್ತಿಕ ದ್ವಿಚಕ್ರ ವಾಹನ ಸಂಚಾರದವರೆಗೆ ನೆರವು ನೀಡುವ ಮೂಲಕ ಈ ಕಾರ್ಯಕ್ರಮವು ಯುವ ಪಯಣಿಗರಲ್ಲಿ, ದೀರ್ಘಕಾಲಿಕ ಸ್ವಾತಂತ್ರ್ಯ ಮತ್ತು ಆತ್ಮ ನಿರ್ಭರತೆಯನ್ನು ಮೂಡಿಸಿದೆ.

ಕಾರ್ಯಕ್ರಮವು, ತನ್ನ ಮಹಿಳಾ ಭಾಗೀದಾರರು ಆತ್ಮವಿಶ್ವಾಸವುಳ್ಳ ಸ್ವತಂತ್ರ ಚಾಲಕರಾಗಿ ಪರಿವರ್ತನೆಗೊಂಡಿದ್ದನ್ನು ಕಂಡಿತು.

ರೈಡಿಂಗ್‌ನ ಯಾಂತ್ರಿಕ ಕೌಶಲ್ಯದಾಚೆ ಎಲ್‌ಟಿಎಫ್, ಪ್ರತಿಯೊಬ್ಬ ಭಾಗೀದಾರರೂ ತಮ್ಮ ಅಧಿಕೃತ ಕಲಿಯುವವರ ಪರವಾನಗಿಯನ್ನು ಪಡೆದುಕೊಳ್ಳಲೂ ನೆರವಾಗಿತ್ತು.

ಸುರಕ್ಷಿತವಾದ, ದೀರ್ಘಕಾಲ ಇರುವಂತಹ ಮತ್ತು ಆಧುನಿಕ ಕಲಿಕಾ ಅನುಭವವನ್ನು



ಖಾತರಿಪಡಿಸಲು ಕಾರ್ಯಕ್ರಮವು ವಾಸ್ತವ ತರಬೇತಿಗಾಗಿ ಸುಪ್ರಸಿದ್ಧ ಪ್ರಾರಂಭಿಕ ಕಲಿಕಾ ಅಭ್ಯರ್ಥಿ-ಸ್ನೇಹಿ ಮಾಡಲ್‌ಗಳನ್ನು ಬಳಸಿತ್ತು. ಭೌತಿಕ ಚಾಲನಾ ಕೌಶಲ್ಯಗಳಾಚೆ, ಪಠ್ಯಕ್ರಮವು ಜವಾಬ್ದಾರಿಯುತ ನಾಗರಿಕತ್ವಕ್ಕೆ ಆದ್ಯತೆ ನೀಡಿತ್ತು; ಪ್ರದಾನ ಸಮಾರಂಭದ ತರುವಾಯ ರಸ್ತೆ ಸುರಕ್ಷತೆ ಮತ್ತು ಚಾಲನಾ ಮಾಡ್ಯೂಲ್ ಇತ್ತು. ಈ ಅಧಿವೇಶನವು ವಿದ್ಯಾರ್ಥಿಗಳಿಗೆ, ಸಂಚಾರ ನಿಯಮಗಳು ಹಾಗೂ ರಸ್ತೆ ನೈತಿಕತೆಗಳಕುರಿತು ಶಿಕ್ಷಣ ಒದಗಿಸಿ ಅವರು ಕೇವಲ ಸಂಚಾರ ಸಮರ್ಥರಾಗಿರುವುದು ಮಾತ್ರವಲ್ಲದೆ, ಸುರಕ್ಷತಾ-ಪ್ರಜ್ಞೆಯುಳ್ಳವನ್ನಾಗಿರುವುದನ್ನೂ ಖಾತರಿಪಡಿಸಿತ್ತು. ಪೂರ್ಣಗೊಂಡ ಬಳಿಕ ಭಾಗೀದಾರರಿಗೆ ತರಬೇತಿ ಪ್ರಮಾಣ ಪತ್ರಗಳನ್ನು ನೀಡಲಾಯಿತು.

ಎಲ್‌ಟಿಎಫ್‌ದ ಅರ್ಬನ್ ಸೆಕ್ಯೂರ್ಡ್ ಅಸೆಟ್ಸ್ ಅಂಡ್ ಥರ್ಡ್ ಪಾರ್ಟಿ ಪ್ರಾಡಕ್ಟ್ಸ್ ವಿಭಾಗದ ಚೀಫ್ ಎಕ್ಸಿಕ್ಯೂಟಿವ್ ಜಿನೇಶ್ ಶಾ, "ಎಲ್‌ಟಿಎಫ್‌ನಲ್ಲಿ ನಮ್ಮ ಪಾತ್ರವು ಸಾಂಪ್ರದಾಯಿಕ ಸಾಲ ನೀಡುವಿಕೆಯಾಚೆ ವಿಸ್ತರಿಸುತ್ತದೆ; ನಾವು ನೆರವಿನ ರೂವಾರಿಗಳಾಗಿದ್ದೇವೆ. ಪಿಲಿಯನ್ ರೈಡರ್ ಟು ರೈಡರ್ ಉಪಕ್ರಮವು ಮೊಬಿಲಿಟಿಯನ್ನು ಮುನ್ನಡೆಸಿ ಮುಂದಿನ ಪೀಳಿಗೆಯವರು ತಮ್ಮ ಸ್ವಂತ ಪಯಣಗಳ ನಿಯಂತ್ರಣವನ್ನು ತಾವೇ ಕೈಗೆತ್ತಿಕೊಳ್ಳುವಂತ ಸಬಲಗೊಳಿಸಬೇಕೆನ್ನುವ ನಮ್ಮ ಬದ್ಧತೆಗೆ ಒಂದು ಶಕ್ತಿಶಾಲಿ ಪುರಾವೆಯಾಗಿದೆ. 100ಕ್ಕಿಂತ ಹೆಚ್ಚಿನ ಮಹಿಳೆಯರಿಗೆ ದ್ವಿಚಕ್ರ ವಾಹನ ತರಬೇತಿ ನೀಡುವ ಮೂಲಕ ನಾವು ಅವರು ಶಿಸ್ತಿನ, ಸುರಕ್ಷತಾ-ಪ್ರಜ್ಞೆಯುಳ್ಳ ಚಾಲಕರಾಗಿ ರಸ್ತೆಗಿಳಿಯುವುದನ್ನು ಖಾತರಿಪಡಿಸಿದ್ದೇವೆ." ಎಂದು ಹೇಳಿದರು. ಜವಾಬ್ದಾರಿಯುತ ಸಂಚಾರಕ್ಕೆ ನಮ್ಮ ಬದ್ಧತೆಯು ನಮ್ಮ ವ್ಯಾಪಾರ ಅತ್ಯುತ್ಕೃಷ್ಟತೆಯಲ್ಲಿ ಪ್ರತಿಫಲಿತವಾಗುತ್ತದೆ. ನಮ್ಮ ದ್ವಿಚಕ್ರ ವಾಹನ ಹಣಕಾಸು ನೆರವಿನ ವ್ಯಾಪಾರವು, ಮೊದಲ ಮೂರು ಉತ್ಪನ್ನ ಕೇಂದ್ರದ ಪೈಕಿ ಒಂದಾಗಿದ್ದು, ಈ ವರ್ಗದಲ್ಲಿ ಮುಂಚೂಣಿ ಹಣಕಾಸು ನೆರವಿನ ಸಂಸ್ಥೆಯಾಗಿ ನಾವು ಉದ್ದಿಮೆಯೊಂದಿಗೆ ಹೋಲಿಸಿದರೆ, ಅತ್ಯುತ್ಕೃಷ್ಟವಾದ ಶೂನ್ಯ ಡಿಪಿಡಿ(ಡೇಸ್ ಪಾಸ್ಟ್ ಡ್ಯೂ)ದೊಂದಿಗೆ ಒಂದು ಪ್ರಧಾನ ಪೋರ್ಟ್‌ಫೋಲಿಯೋ ಕಾಪಾಡಿಕೊಂಡು ಬಂದಿದ್ದೇವೆ.

# "ನಿಮ್ಮ ಕಾಣದ ಶಕ್ತಿ" ಅಭಿಯಾನ ಅನಾವರಣ




ಬೆಂಗಳೂರು

ಅಜ್ಮಲ್ ದುಬೈ ತನ್ನ ಬ್ರಾಂಡ್ ಅಂಬಾಸಿಡರ್ ಆಗಿ ರಣವೀರ್ ಸಿಂಗ್ ಅವರನ್ನು ನೇಮಕ ಮಾಡಿರುವುದಾಗಿ ಘೋಷಿಸಿದೆ, ಇದು ತನ್ನ ಇತ್ತೀಚಿನ ಅಭಿಯಾನವಾದ "ನಿಮ್ಮ ಕಾಣದ ಶಕ್ತಿ" ಯನ್ನು ಪ್ರಾರಂಭಿಸುವುದರೊಂದಿಗೆ ದಿಟ್ಟ ಹೊಸ ಅಧ್ಯಾಯವನ್ನು ಗುರುತಿಸುತ್ತದೆ. ಪೀಳಿಗೆಯ ಪ್ರದರ್ಶಕ ಮತ್ತು ಅಂತಿಮ ಪ್ರದರ್ಶನಕಾರ ಎಂದು ಕರೆಯಲ್ಪಡುವ ರಣವೀರ್ ಸಿಂಗ್, ಸುಗಂಧ ದ್ರವ್ಯದ ಮೂಲಕ ಒಬ್ಬರ ವ್ಯಕ್ತಿತ್ವವನ್ನು ಆಚರಿಸುವ ಬ್ಯಾಂಡ್‌ನ ತತ್ವಶಾಸ್ತ್ರವನ್ನು ಸಂಪೂರ್ಣವಾಗಿ ಸಾಕಾರಗೊಳಿಸುತ್ತಾರೆ.

ಈ ಸಹಯೋಗವು ಅಜ್ಮಲ್ ಅವರ ಸುಗಂಧ ದ್ರವ್ಯದಲ್ಲಿ ಶ್ರೀಮಂತ ಪರಂಪರೆಯನ್ನು ಮತ್ತು ಹೊಸ ಪೀಳಿಗೆಯ ಸುಗಂಧ ದ್ರವ್ಯ ಉತ್ಸಾಹಿಗಳೊಂದಿಗೆ ಪ್ರತಿಧ್ವನಿಸುವ ಸಮಕಾಲೀನ ಧ್ವನಿಯನ್ನು ಒಟ್ಟುಗೂಡಿಸುತ್ತದೆ. ಅವರ ತಾರಾಪಟ್ಟದ ಪ್ರಮಾಣವನ್ನು ಪ್ರತಿಬಿಂಬಿಸುವ ಕ್ಷಣದಲ್ಲಿ, ಈ ಅಭಿಯಾನವು ಇಂದು ದೇಶಾದ್ಯಂತ 575+ ಪಿವಿಆರ್ ಪರದೆಗಳನ್ನು ಆಕ್ರಮಿಸಿಕೊಂಡಿದೆ.

"ನಿಮ್ಮ ಕಾಣದ ಶಕ್ತಿ" ಅಭಿಯಾನವು ಮೂರು ಐಕಾನಿಕ್ ಅಜ್ಮಲ್ ದುಬೈ ಸುಗಂಧ ದ್ರವ್ಯಗಳನ್ನು ಹೈಲೈಟ್ ಮಾಡುತ್ತದೆ, ಪ್ರತಿಯೊಂದೂ ಆಧುನಿಕ ಅಭಿವ್ಯಕ್ತಿಯ ವಿಶಿಷ್ಟ ಮುಖವನ್ನು ಪ್ರತಿನಿಧಿಸುತ್ತದೆ. ಅರಿಸ್ಟೋಕ್ರಾಟ್ ಒಂದು ಸಂಸ್ಕರಿಸಿದ ವುಡಿ-ತಾಜಾ ಪುಲ್ಲಿಂಗ ಸುಗಂಧವಾಗಿದ್ದು ಅದು ರಚನೆ ಮತ್ತು ಆಳವನ್ನು ಪ್ರತಿಬಿಂಬಿಸುವ ಔದ್‌ನ ಸುಗಂಧವನ್ನು ಹೊಂದಿದೆ; ಔರಮ್ ಸಮ್ಮರ್ ಒಂದು ರೋಮಾಂಚಕ ಹಣ್ಣಿನಂತಹ-ಹೂವಿನ ಯುನಿಸೆಕ್ಸ್ ಪರಿಮಳವಾಗಿದ್ದು ಅದು ಉಷ್ಣತೆ ಮತ್ತು ಪ್ರಯತ್ನವಿಲ್ಲದ ಮೋಡಿಯನ್ನು ಸೆರೆಹಿಡಿಯುತ್ತದೆ; ವಿಸಲ್ ಲೇಲ್ ಎಂಬುದು ಆತ್ಮೀಯ, ಸ್ಮರಣೀಯ ಕ್ಷಣಗಳಿಗಾಗಿ ವಿನ್ಯಾಸಗೊಳಿಸಲಾದ ಇಂದ್ರಿಯ ಮರದ ಸುಗಂಧ ದ್ರವ್ಯವಾಗಿದೆ.

ಒಟ್ಟಾಗಿ, ಈ ಸುಗಂಧ ದ್ರವ್ಯಗಳು ವರ್ಚಸ್ಸು ಮತ್ತು ಆತ್ಮವಿಶ್ವಾಸದ ಹಲವು ಆಯಾಮಗಳನ್ನು ಸೆರೆಹಿಡಿಯುತ್ತವೆ, ರಣವೀರ್ ಸಿಂಗ್ ಅವರನ್ನು ಬ್ಯಾಂಡ್‌ನ ಪರಿಪೂರ್ಣ ಮುಖವನ್ನಾಗಿ ಮಾಡುವ ಗುಣಗಳು.

ಅಜ್ಮಲ್ ದುಬೈನ ಬ್ರಾಂಡ್ ರಾಯಭಾರಿ ರಣವೀರ್ ಸಿಂಗ್, "ಅಜ್ಮಲ್ ದುಬೈ ಪರಂಪರೆ, ಕರಕುಶಲತೆ ಮತ್ತು ಸುಗಂಧವು ವ್ಯಕ್ತಿತ್ವದ ವಿಸ್ತರಣೆಯಾಗಿದೆ ಎಂಬ ಕಲ್ಪನೆಯನ್ನು ಪ್ರತಿನಿಧಿಸುತ್ತದೆ, ಅದು ನನಗೆ ವೈಯಕ್ತಿಕವಾಗಿ ಸಂಪರ್ಕ ಹೊಂದಿದೆ.

"ನಿಮ್ಮ ಕಾಣದ ಶಕ್ತಿ" ಅಭಿಯಾನವು ಅರಿಸ್ಟೋಕ್ರಾಟ್, ಔರಮ್ ಸಮ್ಮರ್ ಮತ್ತು ವಿಸಲ್ ಲೇಲ್‌ನಂತಹ ಸುಗಂಧ ದ್ರವ್ಯಗಳ ಮೂಲಕ ಆ ಚೈತನ್ಯವನ್ನು ಪ್ರತಿಬಿಂಬಿಸುತ್ತದೆ, ಪ್ರತಿಯೊಂದೂ ವಿಶ್ವಾಸ, ಶಕ್ತಿ ಮತ್ತು ಅನ್ಯೋನ್ಯತೆಯ ವಿಭಿನ್ನ ಬದಿಯನ್ನು ಪ್ರತಿನಿಧಿಸುತ್ತದೆ. ನನಗೆ, ಇವು ಕೇವಲ ಸುಗಂಧ ದ್ರವ್ಯಗಳಲ್ಲ; ಅವು ಜನರು ತಮ್ಮದೇ ಆದ ಕಾಣದ ಶಕ್ತಿಗೆ ಹೆಜ್ಜೆ ಹಾಕಲು ಅನುವು ಮಾಡಿಕೊಡುವ ಅನುಭವಗಳಾಗಿವೆ."

# ಮೆರಿಲ್‌ನ ಟ್ರೀಟಮೆಂಟ್ ಜರೂರಿ ಹೈ' ಆಂದೋಲನದಲ್ಲಿ ಎಂಎಸ್ ಧೋನಿ




ಬೆಂಗಳೂರು

ಮಾಜಿ ಭಾರತೀಯ ಕ್ರಿಕೆಟ್ ನಾಯಕ ಎಂಎಸ್ ಧೋನಿ ಮೆರಿಲ್‌ನ ರಾಷ್ಟ್ರವ್ಯಾಪಿ ಸಾರ್ವಜನಿಕ ಆರೋಗ್ಯ ಆಂದೋಲನವಾದ "ಟ್ರೀಟಮೆಂಟ್ ಜರೂರಿ ಹೈ" ಅನ್ನು ಆಧರಿಸಿದ್ದು, ಇದು ಸಕಾಲಿಕ ರೋಗನಿರ್ಣಯ ಮತ್ತು ಸುಧಾರಿತ ವೈದ್ಯಕೀಯ ಚಿಕಿತ್ಸೆಗಳ ಪ್ರವೇಶದ ಬಗ್ಗೆ ಜಾಗೃತಿ ಮೂಡಿಸಲು ಪ್ರಾರಂಭಿಸಲಾಗಿದೆ.

ಈ ದೊಡ್ಡ ಆಂದೋಲನದ ಕೇಂದ್ರೀಕೃತ ವಿಸ್ತರಣೆಯಾಗಿ, ""ಬಚ್ಪನ್ ಶುಡ್ ನಾಟ್ ರಿಟೈರ್ " ಟ್ರೀಟಮೆಂಟ್ ಜರೂರಿ ಹೈ ಧ್ಯೇಯದ ಅಡಿಯಲ್ಲಿ ಸಮರ್ಪಿತ ಹಿರಿಯ ನಾಗರಿಕರ ಆರೋಗ್ಯ ಉಪಕ್ರಮವನ್ನು ಮೆರಿಲ್ ಪರಿಚಯಿಸಿದೆ.

ಇದರಿಂದ ಆರಂಭಿಕ ಪತ್ತೆ, ತಡೆಗಟ್ಟುವ ತಪಾಸಣೆ ಮತ್ತು ನವೀನ ಚಿಕಿತ್ಸಾ ಆಯ್ಕೆಗಳಿಗೆ ಪ್ರವೇಶವು ಹೃದಯ, ಮೂಳೆಚಿಕಿತ್ಸೆ ಮತ್ತು ಇತರ ವಯಸ್ಸಿಗೆ ಸಂಬಂಧಿಸಿದ ಪರಿಸ್ಥಿತಿಗಳಲ್ಲಿ ಫಲಿತಾಂಶಗಳನ್ನು ಗಮನಾರ್ಹವಾಗಿ ಸುಧಾರಿಸಬಹುದು – ಅಂತಿಮವಾಗಿ ಇದು ಹಿರಿಯ ನಾಗರಿಕರ ಜೀವನದ ಗುಣಮಟ್ಟವನ್ನು ಕಾಪಾಡುತ್ತದೆ ಎಂದು ಕ್ಯಾಂಪೇನ್ ದೃಢಪಡಿಸುತ್ತದೆ.

ಜೊತೆಗೆ ಕ್ಯಾಂಪೇನ್ ಸರಳವಾದ ಆದರೆ ಶಕ್ತಿಯುತವಾದ ನಂಬಿಕೆಯನ್ನು ಪ್ರತಿಪಾದಿಸುತ್ತದೆ – ವಯಸ್ಸು ಮುಂದುವರೆದರೂ, ತಮಾಷೆಯ ಮನೋಭಾವ, ಕುತೂಹಲ ಮತ್ತು ಸಂತೋಷವು ಎಂದಿಗೂ ಮಸುಕಾಗಬಾರದು. ಜೀವನದ ಪ್ರತಿಯೊಂದು ಹಂತದಲ್ಲೂ ಘನತೆ ಮತ್ತು ಉತ್ಸಾಹವನ್ನು ಕಾಪಾಡಿಕೊಳ್ಳುವ ಮಹತ್ವವನ್ನು ಈ ಸಂವಾದವು ಎತ್ತಿ ತೋರಿಸುತ್ತದೆ.

ವಿಶೇಷವಾಗಿ ಭಾರತವು ತನ್ನ ವೃದ್ಧ ಜನಸಂಖ್ಯೆಯಲ್ಲಿ ಜೀವನಶೈಲಿ-ಸಂಬಂಧಿತ ಪರಿಸ್ಥಿತಿಗಳಲ್ಲಿ ಸ್ಥಿರವಾದ ಏರಿಕೆಯನ್ನು ಕಾಣುತ್ತಿದೆ.

ಗಮನ ಮತ್ತು ಬೆಂಬಲವನ್ನು ಪಡೆಯುವುದನ್ನು ಖಚಿತಪಡಿಸಿಕೊಳ್ಳುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ, ವಿಶೇಷವಾಗಿ ಯುವ ಪೀಳಿಗೆಗೆ ಇದೆ. ಆಗ ಟ್ರೀಟಮೆಂಟ್ ಜರೂರಿ ಹೈ ನಂತಹ ಉಪಕ್ರಮಗಳು ಆ ದಿಕ್ಕಿನಲ್ಲಿ ಒಂದು ಹೆಜ್ಜೆಯಾಗಿದೆ ಮತ್ತು ನಾನು ಇದರ ಭಾಗವಾಗಲು ಸಂತೋಷಪಡುತ್ತೇನೆ" ಎಂದು ಒತ್ತಿ ಹೇಳಿದರು.

## 15 ಸಿಲಿಂಡರ್ ಜಪ್ತಿ; ನಿಯಮ ಉಲ್ಲಂಘಿಸಿದವರ ವಿರುದ್ಧ ಕಠಿಣ ಕ್ರಮಕ್ಕೆ ಡಿಸಿ ಸೂಚನೆ

ಚಿಕ್ಕಬಳ್ಳಾಪುರ

ಜಿಲ್ಲೆಯಾದ್ಯಂತ ಗೃಹ ಬಳಕೆ ಅಡುಗೆ ಅನಿಲ ಸಿಲಿಂಡರ್‌ಗಳನ್ನು ವಾಣಿಜ್ಯ ಉದ್ದೇಶಗಳಿಗಾಗಿ ಅಕ್ರಮವಾಗಿ ಬಳಸುತ್ತಿದ್ದ ಹೋಟೆಲ್ ಮತ್ತು ವಿವಿಧ ಉದ್ದಿಮೆಗಳ ಮೇಲೆ ಆಹಾರ ಹಾಗೂ ಪೊಲೀಸ್ ಇಲಾಖೆ ಜಂಟಿ ಕಾರ್ಯಾಚರಣೆ ನಡೆಸಿ, 15 ಸಿಲಿಂಡರ್‌ಗಳನ್ನು ವಶಪಡಿಸಿಕೊಂಡಿದೆ.

ಜಂಟಿ ಕಾರ್ಯಾಚರಣೆ ಮತ್ತು ಜಪ್ತಿ:

ಜಿಲ್ಲೆಯ ವಿವಿಧ ಭಾಗಗಳಲ್ಲಿರುವ ಹೋಟೆಲ್, ರೆಸ್ಟೋರೆಂಟ್, ಚಿಕನ್ ಸೆಂಟರ್ ಹಾಗೂ ಟೀ ಅಂಗಡಿಗಳ ಮೇಲೆ ಅಧಿಕಾರಿಗಳ ತಂಡ ಏಕಾಏಕಿ ದಾಳಿ ನಡೆಸಿತು. ಈ ಸಂದರ್ಭದಲ್ಲಿ ಕಡಿಮೆ ದರದಲ್ಲಿ ಸಿಗುವ ಗೃಹ ಬಳಕೆ ಸಿಲಿಂಡರ್‌ಗಳನ್ನು ವಾಣಿಜ್ಯ ಉದ್ದೇಶಕ್ಕೆ ಬಳಸುತ್ತಿರುವುದು ಪತ್ತೆಯಾಗಿದೆ. ಕಾರ್ಯಾಚರಣೆಯ ವೇಳೆ ಒಟ್ಟು 15 ಅಕ್ರಮ ಸಿಲಿಂಡರ್‌ಗಳನ್ನು ಜಪ್ತಿ ಮಾಡಲಾಗಿದ್ದು, ನಿಯಮ ಉಲ್ಲಂಘಿಸಿದ ಮಾಲೀಕರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ.

ಕಠಿಣ ಕಾಯ್ದೆಯಡಿ ಮೊಕದ್ದಮೆ ದಾಖಲು:

ಅಕ್ರಮವಾಗಿ ಸಿಲಿಂಡರ್ ಬಳಸುತ್ತಿದ್ದವರ ಮೇಲೆ ಅಗತ್ಯ ವಸ್ತುಗಳ ಕಾಯ್ದೆ–1955 ಹಾಗೂ LPG (ನಿಯಂತ್ರಣ, ಪೂರೈಕೆ ಮತ್ತು ವಿತರಣೆ) ಆದೇಶ 2000 ರ ಅನ್ವಯ ಗಂಭೀರ ಪ್ರಕರಣಗಳನ್ನು ದಾಖಲಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ವಾಣಿಜ್ಯ ಉದ್ದೇಶಕ್ಕೆ ವಾಣಿಜ್ಯ ಸಿಲಿಂಡರ್‌ಗಳನ್ನೇ ಬಳಸಬೇಕು ಎಂಬ ನಿಯಮವಿದ್ದರೂ, ಲಾಭದ ಆಸೆಗೆ ಬಿದ್ದು ಗೃಹ ಬಳಕೆ ಸಿಲಿಂಡರ್ ಬಳಸುವುದು ಶಿಕ್ಷಾರ್ಹ ಅಪರಾಧವಾಗಿದೆ.

ಜಿಲ್ಲಾಧಿಕಾರಿಗಳ ಕಡಕ್ ಎಚ್ಚರಿಕೆ:

ಈ ಕುರಿತು ಪ್ರತಿಕ್ರಿಯಿಸಿರುವ ಜಿಲ್ಲಾಧಿಕಾರಿ ಜಿ. ಪ್ರಭು ಅವರು, "ಗೃಹ ಬಳಕೆಗಾಗಿ ಮೀಸಲಿರುವ ಅಡುಗೆ ಅನಿಲವನ್ನು ವಾಣಿಜ್ಯ ಉದ್ದೇಶಗಳಿಗೆ ಬಳಸುವುದು ಕಾನೂನುಬಾಹಿರ. ಸಾರ್ವಜನಿಕರು ಮತ್ತು ಉದ್ಯಮಿಗಳು ನಿಯಮಗಳನ್ನು ಪಾಲಿಸಬೇಕು. ಒಂದು ವೇಳೆ ನಿಯಮ ಮೀರಿ ಅಕ್ರಮ ಬಳಕೆ ಮುಂದುವರಿಸಿದಲ್ಲಿ, ಅಂತಹವರ ವಿರುದ್ಧ ಕಟ್ಟುನಿಟ್ಟಿನ ಕಾನೂನು ಕ್ರಮ ಜರುಗಿಸಲಾಗುವುದು," ಎಂದು ಎಚ್ಚರಿಕೆ ನೀಡಿದ್ದಾರೆ.

## ಅಯ್ಯಪ್ಪ ಸ್ವಾಮಿ ದೇವಸ್ಥಾನ ನೂತನ ಸಮಿತಿ ಅಧ್ಯಕ್ಷರ ಆಯ್ಕೆ



ಬಂಗಾರಪೇಟೆ

ನಗರದ ಶ್ರೀ ಅಯ್ಯಪ್ಪ ಸ್ವಾಮಿ ದೇವಸ್ಥಾನದ ಸೇವಾ ಸಮಿತಿಯ ನೂತನ ಅಧ್ಯಕ್ಷರಾಗಿ ಕೊಡುಗೈ ದಾನಿ ಹಾಗೂ ಮಾಜಿ ಪುರಸಭೆ ಸದಸ್ಯ ಎಸ್. ವೆಂಕಟೇಶ್ ಅವರನ್ನು ಸರ್ವಾನುಮತದಿಂದ ಆಯ್ಕೆ ಮಾಡಲಾಗಿದೆ. ಶನಿವಾರ ದೇವಸ್ಥಾನದ ಸಭಾಂಗಣದಲ್ಲಿ ನಡೆದ ಸಮಿತಿಯ ಮಹತ್ವದ ಸಭೆಯಲ್ಲಿ ಈ ತೀರ್ಮಾನ ಕೈಗೊಳ್ಳಲಾಯಿತು.

ತ್ವರಿತ ಅಭಿವೃದ್ಧಿಗೆ ಒತ್ತು: ಆಯ್ಕೆಯ ನಂತರ ಮಾತನಾಡಿದ ನೂತನ ಅಧ್ಯಕ್ಷ ಎಸ್. ವೆಂಕಟೇಶ್ ಅವರು, "ದೇವಸ್ಥಾನದ ಅಭಿವೃದ್ಧಿ ಕಾರ್ಯಗಳಿಗೆ ಹೆಚ್ಚಿನ ವೇಗ ನೀಡಲಾಗುವುದು. ಬಾಕಿ ಇರುವ ಕೆಲಸಗಳನ್ನು ಶೀಘ್ರವಾಗಿ ಪೂರ್ಣಗೊಳಿಸಿ, ಭಕ್ತರ ದರ್ಶನಕ್ಕೆ ಅನುಕೂಲ ಮಾಡಿಕೊಡಲಾಗುವುದು. ವಿಶೇಷವಾಗಿ ಕುಡಿಯುವ ನೀರು, ಸ್ವಚ್ಛತೆ, ಬೆಳಕಿನ ವ್ಯವಸ್ಥೆ ಹಾಗೂ ಭಕ್ತರು ಕುಳಿತುಕೊಳ್ಳುವ ಸೌಲಭ್ಯಗಳ ಮೇಲೆ ಹೆಚ್ಚಿನ ಗಮನ ಹರಿಸಲಾಗುವುದು," ಎಂದು ತಿಳಿಸಿದರು.

ನೂತನ ಪದಾಧಿಕಾರಿಗಳ ಪಟ್ಟಿ:

ಉಪಾಧ್ಯಕ್ಷರು: ಬಿ.ವಿ. ವೆಂಕಟಾಚಲಗೌಡ

ಪ್ರಧಾನ ಕಾರ್ಯದರ್ಶಿ: ವಿ. ರವಿಕುಮಾರ್

ಸಹ ಕಾರ್ಯದರ್ಶಿ: ಟಿ.ವಿ. ಮಹದೇವ್

ಖಜಾಂಚಿ: ಎಂ.ಎಸ್. ಹೇಮಂತ್ ಕುಮಾರ್

ಈ ಸಂದರ್ಭದಲ್ಲಿ ಸಮಿತಿ ಸದಸ್ಯರಾದ ಗೋವಿಂದ, ಪಲ್ಲವಿ ಮಣಿ, ಆರ್.ವಿ. ಶ್ರೀಧರ್, ಸೋಮಣ್ಣ, ಕರವೇ ಮುಖಂಡ ತಿಮ್ಮಾಪುರ ನಾಗರಾಜ್ ಸೇರಿದಂತೆ ಅನೇಕ ಮುಖಂಡರು ಹಾಜರಿದ್ದರು. ನೂತನವಾಗಿ ಆಯ್ಕೆಯಾದ ಪದಾಧಿಕಾರಿಗಳನ್ನು ಭಕ್ತರು ಹಾಗೂ ಸಾರ್ವಜನಿಕರು ಅಭಿನಂದಿಸಿ, ಸ್ವಾಗತಿಸಿದರು.

## ಹೊನ್ನಾವರದ ಯುವ ಪ್ರತಿಭೆ ಶ್ರೀಲಕ್ಷ್ಮಿ ಭಟ್ ಸಾಧನೆಗಳ ಸುರಿಮಳೆ

ಬೆಂ. ಬಹುಮುಖ ಪ್ರತಿಭೆಯುಳ್ಳ ಯುವ ನಿರ್ದೇಶಕಿ ಶ್ರೀಲಕ್ಷ್ಮಿ ಭಟ್ ತಮ್ಮ ವಿಶಿಷ್ಟ ಸಾಧನೆಗಳ ಮೂಲಕ ಗಮನ ಸೆಳೆಯುತ್ತಿದ್ದಾರೆ. ತಾಯಿ ವಿದ್ಯಾ ಭಟ್ ತಂದೆ ಗೌರೀಶ್ ಭಟ್ ರವರ ಮುದ್ದಿನ ಮಗಳು ಅತಿ ಕಿರಿಯ ಮಹಿಳಾ ನಿರ್ದೇಶಕಿಯಾಗಿ ಗುರುತಿಸಿಕೊಂಡಿರುವ ಅವರು ಪ್ರಕೃತಿ, ಸೃಷ್ಟಿ, ನಥಂಕಾ, ಯು–ಟರ್ನ್, ಋತು ಎಂಬ ನಾಲ್ಕು ಭಾಷೆಗಳ ಐದು ಸಿನಿಮಾಗಳನ್ನು ನಿರ್ದೇಶಿಸಿ ಅಪಾರ ಮೆಚ್ಚುಗೆ ಪಡೆದಿದ್ದಾರೆ. ಕಥೆ, ಚಿತ್ರಕಥೆ, ಸಂಭಾಷಣೆ, ಸಾಹಿತ್ಯ ಹಾಗೂ ನಿರ್ದೇಶನ ಚಿಟಟ ಕ್ಷೇತ್ರಗಳಲ್ಲಿಯೂ ತಮ್ಮ ಪ್ರತಿಭೆಯನ್ನು ಮೆರೆದಿದ್ದಾರೆ.

ಈ ಸಾಧನೆಗಾಗಿ ಕರ್ನಾಟಕ ಬುಕ್ ಆಫ್ ರೆಕಾರ್ಡ್, ಇಂಡಿಯಾ ಬುಕ್ ಆಫ್ ರೆಕಾರ್ಡ್, ಏಷ್ಯಾ ಬುಕ್ ಆಫ್ ರೆಕಾರ್ಡ್ ಹಾಗೂ ಲಂಡನ್ ಬುಕ್ ಆಫ್ ರೆಕಾರ್ಡ್‌ಗಳಲ್ಲಿ ತಮ್ಮ ಹೆಸರನ್ನು ದಾಖಲಿಸಿಕೊಂಡಿದ್ದಾರೆ. ಯುವ ನಿರ್ದೇಶಕಿಯಾಗಿ ರಾಷ್ಟ್ರ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ 30ಕ್ಕೂ ಹೆಚ್ಚು ಪ್ರಶಸ್ತಿಗಳನ್ನು ಪಡೆದಿದ್ದಾರೆ.



ಶ್ರೀಲಕ್ಷ್ಮಿ ಭಟ್ ಬಾಲ ಕಲಾವಿದೆಯಾಗಿಯೂ ಖ್ಯಾತಿ ಗಳಿಸಿದ್ದು, 23 ಸಿನಿಮಾಗಳು ಹಾಗೂ 7 ಮೆಗಾ ಧಾರಾವಾಹಿಗಳಲ್ಲಿ (1300ಕ್ಕೂ ಹೆಚ್ಚು ಎಪಿಸೋಡ್‌ಗಳು) ಅಭಿನಯಿಸಿದ್ದಾರೆ. ಬಾಲ ಕಲಾವಿದೆಯಾಗಿಯೂ 27ಕ್ಕೂ ಹೆಚ್ಚು ಪ್ರಶಸ್ತಿಗಳನ್ನು ಪಡೆದುಕೊಂಡಿದ್ದಾರೆ.

ಕ್ರೀಡಾ ಕ್ಷೇತ್ರದಲ್ಲಿಯೂ ತಮ್ಮ ಮುದ್ರೆ ಮೂಡಿಸಿರುವ ಅವರು ರೈಫಲ್ ಶೂಟಿಂಗ್‌ನಲ್ಲಿ ಬ್ರಾಂಜ್ ಪದಕ ಹಾಗೂ ಪಿಸ್ತೂಲ್ ಶೂಟಿಂಗ್‌ನಲ್ಲಿ ಕರ್ನಾಟಕ ರಾಜ್ಯ ಮಟ್ಟದಲ್ಲಿ ಬೆಳ್ಳಿ ಪದಕ, ದಕ್ಷಿಣ ವಲಯದಲ್ಲಿ ಚಿನ್ನ ಮತ್ತು ಬೆಳ್ಳಿ ಪದಕಗಳನ್ನು ಗೆದ್ದಿದ್ದಾರೆ. ರಾಷ್ಟ್ರೀಯ ಮಟ್ಟದ ಚೆಸ್ ಟೂರ್ನಮೆಂಟ್‌ನಲ್ಲಿಯೂ ಜಯಗಳಿಸಿದ್ದಾರೆ.

ಲೇಖಕಿಯಾಗಿಯೂ ಗುರುತಿಸಿಕೊಂಡಿರುವ ಅವರು "ಮುದ್ರ ಸಂಕಲ್ಪ" (ಕನ್ನಡ) ಪುಸ್ತಕವನ್ನು ಬರೆಯುತ್ತಿದ್ದು ಮುದ್ರಣದ ಹಂತದಲ್ಲಿದೆ. ಜೊತೆಗೆ "ಸ್ಟೂಡೆಂಟ್ ಕೀ ಸಕ್ಸಸ್ ಇನ್ ಅಲ್ಫಾಬೆಟ್ಸ್" ಪುಸ್ತಕವೂ ಶೀಘ್ರದಲ್ಲೇ ಪ್ರಕಟವಾಗಲಿದೆ.

ಸಂಗೀತ ಕ್ಷೇತ್ರದಲ್ಲಿ ಫ್ಲೂಟ್, ಸಿತಾರ್, ತಬಲಾ, ವೀಣೆ, ವೈಲಿನ್, ಪಖಾವಜ್, ಕೀಬೋರ್ಡ್, ಗಿಟಾರ್, ಮಂಜೀರಾ ಸೇರಿದಂತೆ 9 ವಾದ್ಯಗಳನ್ನು ಅಭ್ಯಾಸ ಮಾಡುತ್ತಿರುವ ಅವರು ನಾದಾಂಕ ಸಾಹಿತ್ಯ ನಿರ್ದೇಶನ ಭರತನಾಟ್ಯ ನೃತ್ಯಗಾರ್ತಿಯೂ ಆಗಿದ್ದಾರೆ.

ಶೈಕ್ಷಣಿಕ ಕ್ಷೇತ್ರದಲ್ಲಿಯೂ ರಾಷ್ಟ್ರೀಯ ಮಟ್ಟದ ಒಲಿಂಪಿಯಾಡ್ ಸ್ಪರ್ಧೆಗಳಲ್ಲಿ 56ಕ್ಕೂ ಹೆಚ್ಚು ಚಿನ್ನ ಹಾಗೂ 24ಕ್ಕೂ ಹೆಚ್ಚು ಬೆಳ್ಳಿ ಪದಕಗಳನ್ನು ಪಡೆದಿದ್ದಾರೆ.

ಸಾಮಾಜಿಕ ಸೇವೆಯಲ್ಲಿಯೂ ತೊಡಗಿಸಿಕೊಂಡಿರುವ ಶ್ರೀಲಕ್ಷ್ಮಿ ಭಟ್, ಶ್ರೀಮಾಧವ ಸೇವಾ ಟ್ರಸ್ಟ್ ಜೊತೆಗೂಡಿ ಆಟಿಸಂ ಮತ್ತು ಬೌದ್ಧಿಕ ಅಸಮರ್ಥತೆ ಹೊಂದಿರುವ ಮಕ್ಕಳಿಗೆ ಕಲೆ ಮತ್ತು ಹಸ್ತಕಲೆಯನ್ನು ಬೋಧಿಸುತ್ತಿದ್ದಾರೆ. ಅನಾಥಾಶ್ರಮಗಳು ಮತ್ತು ಹಿಂದುಳಿದ ಮಕ್ಕಳಿಗೆ ಓದು ಬರಹ ಕಲಿಸುವ ಕಾರ್ಯದಲ್ಲಿಯೂ ತೊಡಗಿಸಿಕೊಂಡಿದ್ದು, ವೃದ್ಧಾಶ್ರಮಗಳಿಗೆ ಭೇಟಿ ನೀಡಿ ಹಿರಿಯ ನಾಗರಿಕರಿಗೆ ಸೇವೆ ಸಲ್ಲಿಸುತ್ತಿದ್ದಾರೆ.

ಬಹುಮುಖ ಪ್ರತಿಭೆಯ ಮೂಲಕ ಸಮಾಜಕ್ಕೆ ಮಾದರಿಯಾಗಿರುವ ಶ್ರೀಲಕ್ಷ್ಮಿ ಭಟ್, ನೂರಾರು ಸಮಾಜಮುಖಿ ಕಾರ್ಯಕ್ರಮಗಳಲ್ಲಿ ಭಾಗಿಯಾಗಿ ಯುವಜನತೆಗೆ ಸ್ಫೂರ್ತಿದಾಯಕ ಮಾತುಗಳನ್ನಾಡಿ ಅಭಿಮಾನಿಗಳ ಮತ್ತು ಸಾರ್ವಜನಿಕರಿಗೆ ಪ್ರೀತಿ ಪಾತ್ರರಾಗಿದ್ದಾರೆ.

## ಬೆಂಗಳೂರು: ವಿಶ್ವ ಗುಬ್ಬಚ್ಚಿ ದಿನಾಚರಣೆ ವಿಶೇಷವಾಗಿ ಆಚರಣೆ





ಬೆಂಗಳೂರು ನಗರದ Freedom Park ನಲ್ಲಿ ವಿಶ್ವ ಗುಬ್ಬಚ್ಚಿ ದಿನವನ್ನು ವಿಶೇಷವಾಗಿ ಆಚರಿಸಲಾಯಿತು. "ಬೆಂಗಳೂರಿಗೆ ಮತ್ತೆ ಗುಬ್ಬಚ್ಚಿಗಳ ಚಿಲಿಪಿಲಿ ಧ್ವನಿ ತರುವೆವು" ಎಂಬ ಉದ್ದೇಶದೊಂದಿಗೆ ಸಾರ್ವಜನಿಕರಿಗೆ ಗುಬ್ಬಚ್ಚಿ ಗೂಡುಗಳನ್ನು ವಿತರಿಸುವ ಮೂಲಕ ಕಾರ್ಯಕ್ರಮಕ್ಕೆ ವಿಶಿಷ್ಟ ಮೆರಗು ನೀಡಲಾಯಿತು.

ಈ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಗಂಡಸಿ ಸದಾನಂದ ಸ್ವಾಮಿ (ಅಧ್ಯಕ್ಷರು ಸುವರ್ಣ ಕರ್ನಾಟಕ ಡಿಜಿಟಲ್ ಮೀಡಿಯಾ ಅಸೋಸಿಯೇಷನ್, ಸಂಪಾದಕರು ಭಾರತ ಸಾರಥಿ ಕನ್ನಡ ದಿನಪತ್ರಿಕೆ), ಶ್ರೀಲಕ್ಷ್ಮಿ ಭಟ್ (ಕಿರಿಯ ನಿರ್ದೇಶಕಿ, ಯುವ ಕಲಾವಿದೆ ಹಾಗೂ ಲೇಖಕಿ), ಗುರುಪ್ರಸಾದ್ ಕೆ.ಆರ್ (ಐಟಿ ನಿರ್ದೇಶಕರು ಹಾಗೂ ನೈಸರ್ಗಿಕ ಶಿಕ್ಷಣ ತಜ್ಞರು) ಭಾಗವಹಿಸಿದರು.

ಗುಬ್ಬಚ್ಚಿಗಳ ಸಂರಕ್ಷಣೆಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವ ಉದ್ದೇಶದಿಂದ Bengaluru Hudugaru Team ಮತ್ತು InfiWorld Foundation ವತಿಯಿಂದ ಈ ಕಾರ್ಯಕ್ರಮವನ್ನು ಆಯೋಜಿಸಲಾಗಿದ್ದು, ತಂಡದ ಪದಾಧಿಕಾರಿಗಳಾದ ವಿನೋದ್ ಕರ್ತವ್ಯ, ಶ್ರೀಶೈಲ ವಿ. ಕೆ ಸೇರಿದಂತೆ 30ಕ್ಕೂ ಹೆಚ್ಚು ಸದಸ್ಯರು ಉಪಸ್ಥಿತರಿದ್ದರು.

ಗುಬ್ಬಚ್ಚಿ ಗೂಡುಗಳನ್ನು ಅಳವಡಿಸುವ ಹಾಗೂ ವಿತರಿಸುವ ಕಾರ್ಯದಲ್ಲಿ ಉತ್ತರ ಕನ್ನಡ ಜಿಲ್ಲೆಯ ಯಲ್ಲಾಪುರ ರೇಂಜ್‌ನ ACF ಶ್ರೀ ಸಂಗಮೇಶ್ ಅವರು ವಿಶೇಷವಾಗಿ ವಿನ್ಯಾಸಗೊಳಿಸಿದ ಗುಬ್ಬಚ್ಚಿ ಗೂಡನ್ನು ಬಳಸಲಾಯಿತು.

ನಗರದಲ್ಲಿ ದಿನದಿಂದ ದಿನಕ್ಕೆ ಕಡಿಮೆಯಾಗುತ್ತಿರುವ ಗುಬ್ಬಚ್ಚಿಗಳ ಸಂಖ್ಯೆಯನ್ನು ಹೆಚ್ಚಿಸುವುದು ಹಾಗೂ ಪರಿಸರ ಸಂರಕ್ಷಣೆ ಬಗ್ಗೆ ಅರಿವು ಮೂಡಿಸುವ ನಿಟ್ಟಿನಲ್ಲಿ ಈ ಕಾರ್ಯಕ್ರಮವನ್ನು ಸಂಭ್ರಮದಿಂದ ಆಚರಿಸಲಾಯಿತು.

## 'ಯರಗೋಳ ಯೋಜನೆಗೆ ಧಕ್ಕೆ ತರಬೇಡಿ'

ಬೂದಿಕೋಟೆ



"ಮೈಸೂರು ಮಹಾರಾಜರು ಬೂದಿಕೋಟೆ ಭಾಗದ ರೈತರಿಗಾಗಿ ನಿರ್ಮಿಸಿರುವ ಮಾರ್ಕಂಡೇಯ ಜಲಾಶಯದ ನೀರನ್ನು ಮಾಲೂರು ತಾಲ್ಲೂಕಿನ ಕುಡಿಯುವ ನೀರಿನ ಯೋಜನೆಗೆ ಬಿಟ್ಟುಕೊಡುವ ಪ್ರಶ್ನೆಯೇ ಇಲ್ಲ" ಎಂದು ಬಂಗಾರಪೇಟೆ ಶಾಸಕ ಎಸ್.ಎನ್. ನಾರಾಯಣಸ್ವಾಮಿ ಸ್ಪಷ್ಟಪಡಿಸಿದರು.

ಶನಿವಾರ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮಾರ್ಕಂಡೇಯ ಡ್ಯಾಂ ಅಡಿಯಲ್ಲಿ 2,400 ಎಕರೆ ಅಚ್ಚುಕಟ್ಟು ಪ್ರದೇಶವಿದ್ದು, ಇಲ್ಲಿನ ರೈತರು ಭತ್ತ ಬೆಳೆದು ಈ ಭಾಗವನ್ನು 'ಭತ್ತದ ಕಣಜ' ಎಂದು ಹೆಸರುವಾಸಿಯಾಗಿಸಿದ್ದಾರೆ. ಈ ನೀರು ಸಂಪೂರ್ಣವಾಗಿ ಕೃಷಿಗೆ ಮೀಸಲಾಗಿದೆ. ಈ ಹಿಂದೆಯೂ ಇಂತಹ ಪ್ರಯತ್ನ ನಡೆದಾಗ ನಾನು ಅಂದಿನ ಸಚಿವ ಎಚ್.ಕೆ. ಪಾಟೀಲ್ ಅವರಿಗೆ ಮನವಿ ಮಾಡಿ ಯೋಜನೆಯನ್ನು ತಡೆದಿದ್ದೆ ಎಂದು ಸ್ಮರಿಸಿದರು.

ಯರಗೋಳ ಯೋಜನೆಗೆ ಅಪಾಯ:

"ಯರಗೋಳ ಜಲಾಶಯದ ಮೂಲಕ ಕೋಲಾರ, ಮಾಲೂರು ಮತ್ತು ಬಂಗಾರಪೇಟೆ ಪಟ್ಟಣಗಳಿಗೆ ನೀರು ಒದಗಿಸಲಾಗುತ್ತಿದೆ. ಮಾರ್ಕಂಡೇಯ ಡ್ಯಾಂ ತುಂಬಿ ಹರಿದರೆ ಮಾತ್ರ ಯರಗೋಳಕ್ಕೆ ನೀರು ಸಿಗಲು ಸಾಧ್ಯ. ಒಂದು ವೇಳೆ ಈ ಮೂಲವನ್ನೇ ಬಳಸಿಕೊಂಡರೆ ಸಾವಿರಾರು ಕೋಟಿ ರೂಪಾಯಿ ವೆಚ್ಚದ ಯರಗೋಳ ಯೋಜನೆ ಸಂಪೂರ್ಣ ವಿಫಲವಾಗುತ್ತದೆ" ಎಂದು ಆತಂಕ ವ್ಯಕ್ತಪಡಿಸಿದರು.

ಸೌಜನ್ಯಕ್ಕಾದರೂ ಚರ್ಚಿಸಿಲ್ಲ:

ಮಾಲೂರು ಶಾಸಕ ನಂಜೇಗೌಡ ಅವರು ಹಿರಿಯರಾಗಿದ್ದರೂ, ಈ ವಿಷಯದ ಬಗ್ಗೆ ನನ್ನೊಂದಿಗೆ ಸೌಜನ್ಯಕ್ಕಾದರೂ ಚರ್ಚಿಸಿಲ್ಲ. ಏಕಪಕ್ಷೀಯ ನಿರ್ಧಾರ ಕೈಗೊಳ್ಳುವುದು ಸರಿಯಲ್ಲ. ಮಾಲೂರು ತಾಲ್ಲೂಕಿಗೆ ಕೆ.ಸಿ. ವ್ಯಾಲಿ ನೀರು ಬರಲು ನಾನೇ ಕಾರಣನಾಗಿದ್ದೇನೆ. ನನಗೆ ಎರಡು ತಾಲ್ಲೂಕುಗಳ ಹಿತಾಸಕ್ತಿ ಮುಖ್ಯ. ಹೀಗಾಗಿ ರೈತರ ನಡುವೆ ವೈಷಮ್ಯ ತರದೆ, ಹಿರಿಯರ ಸಮ್ಮುಖದಲ್ಲಿ ಚರ್ಚಿಸಿ ಈ ಸಮಸ್ಯೆಯನ್ನು ಬಗೆಹರಿಸಿಕೊಳ್ಳೋಣ ಎಂದು ಮಾಲೂರು ಶಾಸಕರಿಗೆ ಮನವಿ ಮಾಡಿದರು.

## 23ಕ್ಕೆ ಸಿದ್ದಗಂಗಾ ಆಸ್ಪತ್ರೆಯ ವಾರ್ಷಿಕೋತ್ಸವ

ಮಧುಗಿರಿ

ಪಟ್ಟಣದ ಆಸ್ಪತ್ರೆ ಬೀದಿಯಲ್ಲಿ ಎಚ್.ಸಿ. ಬಸವರಾಜು ಹಾಗೂ ಎಚ್.ಸಿ. ವೀರಭದ್ರಪ್ಪ ಅವರ ಸ್ಮರಣಾರ್ಥ ಸ್ಥಾಪಿಸಲಾಗಿರುವ ಶ್ರೀ ಸಿದ್ದಗಂಗಾ ಹಾಸ್ಪಿಟಲ್ ಡಯಾಲಿಸಿಸ್ ಸೆಂಟರ್ ಮತ್ತು ಶ್ರೀ ಶಾರದಾದೇವಿ ಕಣ್ಣಿನ ಆಸ್ಪತ್ರೆಯ ಮಧುಗಿರಿ ಶಾಖೆಯ ಪ್ರಥಮ ವಾರ್ಷಿಕೋತ್ಸವ ಸಮಾರಂಭವು ಇದೇ 23ರ ಸೋಮವಾರ ಬೆಳಗ್ಗೆ 11 ಗಂಟೆಗೆ ಆಯೋಜಿಸಲಾಗಿದೆ.

ಈ ಕಾರ್ಯಕ್ರಮವನ್ನು ಮಾಜಿ ಸಚಿವರು ಹಾಗೂ ಹಾಲಿ ಶಾಸಕರಾದ ಕೆ.ಎನ್. ರಾಜಣ್ಣನವರು ಉದ್ಘಾಟಿಸಲಿದ್ದಾರೆ. ಕಾರ್ಯಕ್ರಮದ ದಿವ್ಯ ಸಾನಿಧ್ಯವನ್ನು ತುಮಕೂರು ಸಿದ್ದಗಂಗಾ ಮಠದ ಅಧ್ಯಕ್ಷರಾದ ಶ್ರೀ ಸಿದ್ದಲಿಂಗ ಮಹಾಸ್ವಾಮೀಜಿ ಹಾಗೂ ಪಾವಗಡ ಶ್ರೀರಾಮಕೃಷ್ಣ ಸೇವಾಶ್ರಮದ ಅಧ್ಯಕ್ಷರಾದ ಸ್ವಾಮಿ ಜಪಾನಂದಜೀ ಮಹಾರಾಜ್ ವಹಿಸಲಿದ್ದಾರೆ.

ಸಮಾರಂಭದಲ್ಲಿ ಉಪ ವಿಭಾಗಾಧಿಕಾರಿ ಗೋಟೂರು ಶಿವಪ್ಪ, ಡಿವೈಎಸ್ಪಿ ಬಿ. ಮಂಜುನಾಥ್, ಸಿದ್ದಗಂಗಾ ಮೆಡಿಕಲ್ ಕಾಲೇಜಿನ ಕಾರ್ಯದರ್ಶಿ ಟಿ.ಎಂ. ಸ್ವಾಮಿ, ನಿರ್ದೇಶಕ ಡಾ. ಎಸ್. ಪರಮೇಶ್ ಸೇರಿದಂತೆ ಹಲವು ವೈದ್ಯಕೀಯ ತಜ್ಞರು ಭಾಗವಹಿಸಲಿದ್ದಾರೆ. ವಿಶೇಷವಾಗಿ ಚರ್ಮರೋಗ ತಜ್ಞ ಡಾ. ಎಚ್.ವಿ. ನಟರಾಜ್, ನೆಫ್ರಾಲಜಿಸ್ಟ್ ಡಾ. ಅರುಣ್ ಹಾಗೂ ದಾನಿಗಳಾದ ಎಚ್.ಬಿ. ಶಿವಕುಮಾರ್, ಎನ್.ಎಂ. ಶಿವಕುಮಾರ್ ಸೇರಿದಂತೆ ಮಧುಗಿರಿಯ ಗಣ್ಯರು ಉಪಸ್ಥಿತರಿರಲಿದ್ದಾರೆ.

ಕಳೆದ ಒಂದು ವರ್ಷದಿಂದ ಮಧುಗಿರಿ ಭಾಗದ ಜನರಿಗೆ ಡಯಾಲಿಸಿಸ್ ಹಾಗೂ ಕಣ್ಣಿನ ಚಿಕಿತ್ಸೆಯಲ್ಲಿ ಅತ್ಯುತ್ತಮ ಸೇವೆ ನೀಡುತ್ತಿರುವ ಈ ಸಂಸ್ಥೆಯು, ಈ ವಾರ್ಷಿಕೋತ್ಸವದ ಮೂಲಕ ಮತ್ತಷ್ಟು ಜನಸ್ನೇಹಿ ಆರೋಗ್ಯ ಯೋಜನೆಗಳನ್ನು ರೂಪಿಸುವ ಗುರಿ ಹೊಂದಿದೆ ಎಂದು ಆಸ್ಪತ್ರೆಯ ಸಿಇಓ ಡಾ. ಎಂ.ಎನ್. ಸಂಜೀವ್ ಕುಮಾರ್ ತಿಳಿಸಿದ್ದಾರೆ.

## ಎಸ್‌ಎಸ್‌ಎಲ್‌ಸಿ ಪರೀಕ್ಷೆಗೆ ಭರ್ಜರಿ ತಯಾರಿ

ವಿಜಯಪುರ

2026–27 ನೇ ಸಾಲಿನ ಎಸ್. ಎಸ್.ಎಲ್.ಸಿ ಪರೀಕ್ಷೆಯಲ್ಲಿ, ಉತ್ತಮ ಫಲಿತಾಂಶವನ್ನು ತರಬೇಕೆನ್ನುವ ಉದ್ದೇಶದಿಂದ ವಿದ್ಯಾರ್ಥಿಗಳಿಗೆ ವಿಶೇಷ ತರಗತಿಗಳನ್ನು ಆರಂಭಿಸಿ, ವಿದ್ಯಾರ್ಥಿಗಳನ್ನು ಪರೀಕ್ಷೆಗೆ ಸಜ್ಜುಗೊಳಿಸಲಾಗುತ್ತಿದೆ ಎಂದು ನಾರಾಯಣಪುರ ಪ್ರೌಢಶಾಲೆಯ ಮುಖ್ಯಶಿಕ್ಷಕ ಪಿ.ಎಂ.ಕೊಟ್ರೇಶ್ ಹೇಳಿದರು.

ಹೋಬಳಿಯ ನಾರಾಯಣಪುರ ಸರಕಾರಿ ಪ್ರೌಢಶಾಲೆಯ ಆವರಣದಲ್ಲಿ, ಎಸ್.ಎಸ್.ಎಲ್.ಸಿ. ವಿದ್ಯಾರ್ಥಿಗಳಿಗಾಗಿ ಆಯೋಜಿಸಿದ್ದ ವಿಶೇಷ ತರಗತಿಗೆ ಚಾಲನೆ ನೀಡಿ ಅವರು ಮಾತನಾಡಿದರು.

ಇಲಾಖೆಯು ನೀಡಿರುವ ಮಾರ್ಗಸೂಚಿಗಳಂತೆ, ವಿದ್ಯಾರ್ಥಿಗಳ ಕಲಿಕಾಮಟ್ಟವನ್ನು ವೃದ್ಧಿಗೊಳಿಸಲು, ಶಾಲಾಭಿವೃದ್ಧಿ ಸಮಿತಿಯ ಸಹಯೋಗದಲ್ಲಿ, ವಿಷಯವಾರು ಶಿಕ್ಷಕರು, ಯೋಜನೆ ರೂಪಿಸಿದ್ದೇವೆ.

## ಎರಡು ಕೋಟಿ ವೆಚ್ಚದಲ್ಲಿ ಸರ್ಕಾರಿ ಆಸ್ಪತ್ರೆಗೆ ನವೀಕರಣ ಭಾಗ್ಯ

ಕುಣಿಗಲ್

ಪಟ್ಟಣದ ಸರ್ಕಾರಿ ಸಾರ್ವಜನಿಕ ಆಸ್ಪತ್ರೆಯನ್ನು ಎರಡು ಕೋಟಿ ರೂ. ವೆಚ್ಚದಲ್ಲಿ ದುರಸ್ತಿ ಮಾಡುವ ಮೂಲಕ ನವೀಕರಣ ಕಾಮಗಾರಿ ಕೈಗೊಳ್ಳಲಾಗಿದೆ ಎಂದು ಶಾಸಕ ಡಾ. ಹೆಚ್ .ಡಿ. ರಂಗನಾಥ್ ತಿಳಿಸಿದರು.

ಇಲ್ಲಿನ ಸರ್ಕಾರಿ ಸಾರ್ವಜನಿಕ ಆಸ್ಪತ್ರೆ ಆವರಣದಲ್ಲಿ ಏರ್ಪಡಿಸಿದ್ದ ಶಂಕುಸ್ಥಾಪನ ಕಾರ್ಯಕ್ರಮದಲ್ಲಿ ಮಾತನಾಡುತ್ತಾ ಹಲವಾರು ವರ್ಷಗಳಿಂದ ತುಂಬಾ ಹಳೆಯದಾದ ಕಟ್ಟಡವಾಗಿದ್ದು ಈ ಕಟ್ಟಡವನ್ನು ಸುಮಾರು ಎರಡು ಕೋಟಿ ವೆಚ್ಚದಲ್ಲಿ ಆಸ್ಪತ್ರೆ ದುರಸ್ತಿ ನವೀಕರಣ ಟೈಲ್ಸ್ ಜೊತೆಗೆ ಶೌಚಾಲಯ ಸೇರಿದಂತೆ ಎರಡು ಕೋಟಿ ವೆಚ್ಚದಲ್ಲಿ ಈ ಕಾರ್ಯ ಕೈಗೊಳ್ಳಲಾಗಿದೆ, ಆಸ್ಪತ್ರೆಯ ಆವರಣದಲ್ಲಿ ನಿರ್ಮಾಣಗೊಂಡಿರುವ ಇನ್ಫೋಸ್ ಸಂಸ್ಥೆಯವರು ಸುಮಾರು 70 ಕೋಟಿ ವೆಚ್ಚದಲ್ಲಿ ತಾಯಿ ಮಗು ಹಾಸ್ಪಿಟಲ್ ನಿರ್ಮಾಣ ಕಟ್ಟಡ ಪೂರ್ಣಗೊಂಡಿದ್ದು ಇದಕ್ಕೆ ಬೇಕಾದ ಯಂತ್ರೋಪಕರಣ ಮತ್ತು ಸಿಬ್ಬಂದಿಯನ್ನು ನೀಡುವಂತೆ ಮುಖ್ಯಮಂತ್ರಿ ರವರೊಂದಿಗೆ ಚರ್ಚಿಸಿ ಮನವಿ ಮಾಡಲಾಗಿದೆ ಮುಂದಿನ ಆರ್ಥಿಕ ಪರಿಸ್ಥಿತಿ ನೋಡಿಕೊಂಡು

## 1.13 ಎಕರೆ ಜಮೀನು ಆಶ್ರಯ ಯೋಜನೆಗೆ ಮೀಸಲು: ಡಿಸಿ ಯಶವಂತ್ ಗುರುಕರ್

ರಾಮನಗರ



"ಪರಿಸರ ರಾಯಭಾರಿ ಸಾಲುಮರದ ತಿಮ್ಮಕ್ಕ ಅವರು ವಾಸವಿದ್ದ ಮಾಗಡಿ ತಾಲ್ಲೂಕಿನ ಹುಲಿಕಲ್ ಗ್ರಾಮದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ನಿವೇಶನ ಹಾಗೂ ಹಕ್ಕುಪತ್ರ ನೀಡಲು 1.13 ಎಕರೆ ಜಮೀನನ್ನು ಆಶ್ರಯ ಯೋಜನೆಯಡಿ ಕಾಯ್ದಿರಿಸಲು ಅಧಿಕೃತ ಜ್ಞಾಪನ ಹೊರಡಿಸಲಾಗಿದೆ" ಎಂದು ಜಿಲ್ಲಾಧಿಕಾರಿ ಯಶವಂತ್ ವಿ. ಗುರುಕರ್ ತಿಳಿಸಿದರು.

ನಗರದ ಡಿಸಿ ಕಚೇರಿ ಸಭಾಂಗಣದಲ್ಲಿ ಬುಧವಾರ ನಡೆದ 'ಜಿಲ್ಲಾ ಜಾಗೃತಿ ಮತ್ತು ಉಸ್ತುವಾರಿ ಸಮಿತಿ' ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಹುಲಿಕಲ್ ಗ್ರಾಮದ ಸರ್ವೆ ನಂಬರ್ 127ರಲ್ಲಿನ ಈ ಜಮೀನನ್ನು ಅರ್ಹ ಫಲಾನುಭವಿಗಳಿಗೆ ಹಂಚಿಕೆ ಮಾಡಲು ಮಾಗಡಿ ತಹಶೀಲ್ದಾರ್ ಸಲ್ಲಿಸಿದ್ದ ಪ್ರಸ್ತಾವನೆಗೆ ಅನುಮೋದನೆ ನೀಡಲಾಗಿದೆ ಎಂದರು.

ತಾಲ್ಲೂಕಿನ ಕುಂಭಾಪುರ ಗ್ರಾಮದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಪರಿಶಿಷ್ಟ ಸಮುದಾಯದವರು ವಾಸಿಸುತ್ತಿದ್ದು, ಅಲ್ಲಿನ ಮೂಲಸೌಕರ್ಯ ವೃದ್ಧಿಗೆ ಡಿಸಿ ಸೂಚಿಸಿದರು. 2026– 27ನೇ ಸಾಲಿನ ತಾಲ್ಲೂಕು ಪಂಚಾಯತ್ ಅನುದಾನದಲ್ಲಿ ಗ್ರಾಮಕ್ಕೆ ಸುಸಜ್ಜಿತ ರಸ್ತೆ ನಿರ್ಮಾಣ ಮಾಡಿಕೊಡುವಂತೆ ಜಿಲ್ಲಾ ಪಂಚಾಯತ್ ಮುಖ್ಯ ಯೋಜನಾಧಿಕಾರಿ ಚಿಕ್ಕಸುಬ್ಬಯ್ಯ ಅವರಿಗೆ ಆದೇಶಿಸಿದರು.

ಗಂಗಾ ಕಲ್ಯಾಣ ಯೋಜನೆಯಡಿ ಕೊಳವೆಬಾವಿ ಕೊರೆಯುವ ವಿಚಾರದಲ್ಲಿ ಸಾರ್ವಜನಿಕರಿಂದ ಕೇಳಿಬಂದಿರುವ ಆಕ್ಷೇಪಣೆಗಳ ಕುರಿತು ಸಭೆಯಲ್ಲಿ ಸುದೀರ್ಘ ಚರ್ಚೆ ನಡೆಯಿತು. ಈ ಸಭೆಯಲ್ಲಿ ಉಪ ವಿಭಾಗಾಧಿಕಾರಿ ಬಿನೋಯ್, ಅಪರ ಪೊಲೀಸ್ ವರಿಷ್ಠಾಧಿಕಾರಿ ರಾಜೇಂದ್ರ, ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕ ಶಿವಕುಮಾರ್, ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

## ಎರಡು ಕೋಟಿ ವೆಚ್ಚದಲ್ಲಿ ಸರ್ಕಾರಿ ಆಸ್ಪತ್ರೆಗೆ ನವೀಕರಣ ಭಾಗ್ಯ

ಕುಣಿಗಲ್

ಪಟ್ಟಣದ ಸರ್ಕಾರಿ ಸಾರ್ವಜನಿಕ ಆಸ್ಪತ್ರೆಯನ್ನು ಎರಡು ಕೋಟಿ ರೂ. ವೆಚ್ಚದಲ್ಲಿ ದುರಸ್ತಿ ಮಾಡುವ ಮೂಲಕ ನವೀಕರಣ ಕಾಮಗಾರಿ ಕೈಗೊಳ್ಳಲಾಗಿದೆ ಎಂದು ಶಾಸಕ ಡಾ. ಹೆಚ್ .ಡಿ. ರಂಗನಾಥ್ ತಿಳಿಸಿದರು. ಇಲ್ಲಿನ ಸರ್ಕಾರಿ ಸಾರ್ವಜನಿಕ ಆಸ್ಪತ್ರೆ ಆವರಣದಲ್ಲಿ ಏರ್ಪಡಿಸಿದ್ದ ಶಂಕುಸ್ಥಾಪನ ಕಾರ್ಯಕ್ರಮದಲ್ಲಿ ಮಾತನಾಡುತ್ತಾ ಹಲವಾರು ವರ್ಷಗಳಿಂದ ತುಂಬಾ ಹಳೆಯದಾದ ಕಟ್ಟಡವಾಗಿದ್ದು ಈ ಕಟ್ಟಡವನ್ನು ಸುಮಾರು ಎರಡು ಕೋಟಿ ವೆಚ್ಚದಲ್ಲಿ ಆಸ್ಪತ್ರೆ ದುರಸ್ತಿ ನವೀಕರಣ ಟೈಲ್ಸ್ ಜೊತೆಗೆ ಶೌಚಾಲಯ ಸೇರಿದಂತೆ ಎರಡು ಕೋಟಿ ವೆಚ್ಚದಲ್ಲಿ ಈ ಕಾರ್ಯ ಕೈಗೊಳ್ಳಲಾಗಿದೆ, ಆಸ್ಪತ್ರೆಯ ಆವರಣದಲ್ಲಿ ನಿರ್ಮಾಣಗೊಂಡಿರುವ ಇನ್ಫೋಸ್ ಸಂಸ್ಥೆಯವರು ಸುಮಾರು 70 ಕೋಟಿ ವೆಚ್ಚದಲ್ಲಿ ತಾಯಿ ಮಗು ಹಾಸ್ಪಿಟಲ್ ನಿರ್ಮಾಣ ಕಟ್ಟಡ ಪೂರ್ಣಗೊಂಡಿದ್ದು ಇದಕ್ಕೆ ಬೇಕಾದ ಯಂತ್ರೋಪಕರಣ ಮತ್ತು ಸಿಬ್ಬಂದಿಯನ್ನು ನೀಡುವಂತೆ ಮುಖ್ಯಮಂತ್ರಿ ರವರೊಂದಿಗೆ ಚರ್ಚಿಸಿ ಮನವಿ ಮಾಡಲಾಗಿದೆ ಮುಂದಿನ ಆರ್ಥಿಕ ಪರಿಸ್ಥಿತಿ ನೋಡಿಕೊಂಡು ವ್ಯವಸ್ಥೆ ಕೈಗೊಳ್ಳುತ್ತಾರೆ ಎಂದು ಭರವಸೆ ನೀಡಿದ್ದಾರೆ,

ನಮ್ಮ ತಂದೆಯ ಕನಸಿನಂತೆ ಕುಣಿಗಲ್ ಕ್ಷೇತ್ರದಲ್ಲಿ ಸರ್ಕಾರಿ ಮೆಡಿಕಲ್ ಕಾಲೇಜ್ ಅಥವಾ ಖಾಸಗಿ ಮೆಡಿಕಲ್ ಕಾಲೇಜ್ ಮುಂದಿನ ದಿನಗಳಲ್ಲಿ ಆರಂಭಿಸಲು ಚಿಂತಿಸಲಾಗಿದ್ದು ಈ ಬಗ್ಗೆ ಈಗಾಗಲೇ ಮುಖ್ಯಮಂತ್ರಿ ಯೊಂದಿಗೆ ಚರ್ಚಿಸಿ ಸರ್ಕಾರಿ ಮೆಡಿಕಲ್ ಕಾಲೇಜ್ ನೀಡುವಂತೆ ಕೋರಿದ್ದು ಆರ್ಥಿಕ ಸಮಸ್ಯೆ ಉಂಟಾದರೆ ಖಾಸಗಿ ಮೆಡಿಕಲ್ ಕಾಲೇಜಿನ ಆರಂಭಿಸಲಾಗುವುದು ಪಿ. ಪಿ.ಪಿ. ಉಪಯೋಗ ಎಲ್ಲಾ ತಜ್ಞ ವೈದ್ಯರು ಸಿಟಿ ಸ್ಕ್ಯಾನ್ ಎಂ .ಆರ್. ಐ. ಉಚಿತ ಆಪರೇಷನ್ ಸರ್ಜರಿಗಳನ್ನ ಈ ಆಸ್ಪತ್ರೆಯಲ್ಲಿ ಬಡವರಿಗೆ ದುರ್ಬಲರಿಗೆ ಅನುಕೂಲ ಮಾಡಿಕೊಡಬಹುದೆಂದು ತಿಳಿಸುತ್ತಾ ಇನ್ಫೋಸಿಸ್ ಕಂಪನಿಯವರು ನಿರ್ಮಿಸಿ ಕೊಟ್ಟಿರುವ ತಾಯಿ ಮತ್ತು ಮಕ್ಕಳ ಆಸ್ಪತ್ರೆಯನ್ನು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಮುಖ್ಯಮಂತ್ರಿ ಗದ್ದಿಗೆ ಏರಿದ ನಂತರ ಆರಂಭಿಸಲಾಗುವುದು ಸಾರ್ವಜನಿಕ ಆಸ್ಪತ್ರೆಯನ್ನು ಸಮರ್ಪಕವಾಗಿ ಸಾರ್ವಜನಿಕರು ಬಳಸಿಕೊಳ್ಳಬೇಕೆಂದು ಮನವಿ ಮಾಡಿದರು.

## ಗ್ರಾಮೀಣ ಶಾಲೆಗಳ ಬಲವರ್ಧನೆಗೆ ಭಾರತ್ ಸುಧಾರ್ ಸಂಸ್ಥೆ ಗ್ರೀನ್‌ಬೋರ್ಡ್ ವಿತರಣೆ

ಕೋಲಾರ

ಗ್ರಾಮೀಣ ಪ್ರದೇಶದ ಸರ್ಕಾರಿ ಶಾಲೆಗಳ ಪ್ರಗತಿ ಮತ್ತು ಬಲವರ್ಧನೆಗೆ ಸಂಘ ಸಂಸ್ಥೆಗಳ ಸಹಕಾರ ಅಗತ್ಯವಾಗಿದ್ದು, ಯಾವುದೇ ಮಗು ಶಿಕ್ಷಣದಿಂದ ವಂಚಿತವಾಗದಂತೆ ಅಗತ್ಯ ಸೌಲಭ್ಯಗಳನ್ನು ಒದಗಿಸಲು ಹೃದಯವಂತಿಕೆ ಮಾತ್ರವಲ್ಲ ಅದು ಪ್ರತಿಯೊಬ್ಬರ ಕರ್ತವ್ಯವೂ ಆಗಬೇಕು ಎಂದು ಭಾರತ್ ಸುಧಾರ್ ಸಂಸ್ಥೆಯ ಕಿರಣ್ ಅಭಿಪ್ರಾಯಪಟ್ಟರು.

ಶಿಕ್ಷಕ ಗೆಳೆಯರ ಬಳಗದ ಆಶ್ರಯದಲ್ಲಿ ನಗರದಲ್ಲಿ ಕೋಲಾರ ಜಿಲ್ಲೆಯ ಐವತ್ತು ಸರ್ಕಾರಿ ಶಾಲೆಗಳಿಗೆ ತಮ್ಮ ಸಂಸ್ಥೆಯಿಂದ ಗ್ರೀನ್ ಬೋರ್ಡ್ ವಿತರಿಸಿ ಅವರು ಮಾತನಾಡುತ್ತಿದ್ದರು.

ಸರ್ಕಾರಿ ಶಾಲೆಗಳನ್ನು ಉಳಿಸುವ ಕೆಲಸವಾಗಬೇಕು, ಇದು ಪ್ರತಿಯೊಬ್ಬ ನಾಗರೀಕರ ಜವಾಬ್ದಾರಿಯೂ ಆಗಬೇಕು ಎಂದ ಅವರು, ಈ ಶಾಲೆಗಳಿಗೆ ಖಾಸಗಿ ಶಾಲೆಗಳಿಗೆ ಪೈಪೋಟಿ ನೀಡುವ ರೀತಿಯಲ್ಲಿ ಸೌಲಭ್ಯಗಳನ್ನು ಒದಗಿಸಿ ಶಕ್ತಿ ತುಂಬಬೇಕು ಎಂದರು.

ಈಗಾಗಲೇ ನಮ್ಮ ಸಂಸ್ಥೆಯಿಂದ ಜಿಲ್ಲೆಯ ಮುಳಬಾಗಿಲಿನ ನಾಲ್ಕು



ಸರ್ಕಾರಿ ಶಾಲೆಗಳಿಗೆ ಸುಣ್ಣ ಬಣ್ಣ ಮಾಡಲಾಗಿದೆ,ಬಂಗಾರಪೇಟೆಯ ಮಾಗುಂದಿಯಲ್ಲಿ ಶಾಲಾ ಕಟ್ಟಡ ನಿರ್ಮಾಣ ಮಾಡಲಾಗುತ್ತಿದೆ, ಎರಡು ಶಾಲೆಗಳಲ್ಲಿ ಶೌಚಾಲಯ ನಿರ್ಮಾಣ ಕಾರ್ಯ ಪ್ರಗತಿಯಲ್ಲಿದೆ ಮತ್ತು ಜೂನ್ ಒಳಗೆ ಕೆಲವು ಶಾಲೆಗಳಿಗೆ ಡೆಸ್ಕ್ ವಿತರಿಸಲಾಗುವುದು ಎಂದು ತಿಳಿಸಿದರು.

ನಮ್ಮ ಸಂಸ್ಥೆ ಮಕ್ಕಳಿಗಾಗಿ ಅನೇಕ ಕಾರ್ಯಕ್ರಮಗಳನ್ನು ಗೆಳೆಯರ ಬಳಗದ ಸಹಯೋಗದಲ್ಲಿ ಹಮ್ಮಿಕೊಂಡಿದೆ ಎಂದ ಅವರು, ಸರ್ಕಾರಿ ಶಾಲೆಗಳಲ್ಲಿ ಸೌಲಭ್ಯಗಳ ಕೊರತೆಯಾಗದಂತೆ ಕ್ರಮವಹಿಸಲಾಗುತ್ತಿದೆ, ಮತ್ತಷ್ಟು ನೆರವು ಹರಿಸುವ ಮೂಲಕ ಜಿಲ್ಲೆಯ ಸರ್ಕಾರಿ ಶಾಲೆಗಳಿಗೆ ನೆರವು ಮುಂದುವರೆಸುವುದಾಗಿ ತಿಳಿಸಿದರು.

ಬಂಗಾರಪೇಟೆ ಕ್ಷೇತ್ರ ಶಿಕ್ಷಣಾಧಿಕಾರಿ ಶಶಿಕಲಾ ಮಾತನಾಡಿ, ಶಿಕ್ಷಕ ಗೆಳೆಯರ ಬಳಗದ ಪದಾಧಿಕಾರಿಗಳ ನಿಸ್ವಾರ್ಥ ಸೇವೆ ಶ್ಲಾಘನೀಯ, ಭಾರತ್ ಸುಧಾರ್ ಸಂಸ್ಥೆಯಂತಹ ಅನೇಕ ದಾನಿಗಳನ್ನು ಹುಡುಕಿ ಶಾಲೆಗಳಿಗೆ ನೆರವು ಹರಿಸುವ ಇವರ ಪ್ರಯತ್ನ ಹಲವಾರು ವರ್ಷಗಳಿಂದ ಮುಂದುವರೆದಿದ್ದು, ಸರ್ಕಾರಿ ಶಾಲೆಗಳನ್ನು ಉಳಿಸುವ ಇವರ ಬದ್ಧತೆ ಮೆಚ್ಚುವಂತದ್ದು ಎಂದರು.

ಗೆಳೆಯರ ಬಳಗ ಬಂಗಾರಪೇಟೆಯಲ್ಲಿ ಸರ್ಕಾರಿ ಶಾಲೆಗಳ ಸಬಲೀಕರಣಕ್ಕೆ ಸಾಕಷ್ಟು ಸಹಾಯ ಹಸ್ತ ನೀಡುತ್ತಿದೆ ಇದಕ್ಕೆ ಇಲಾಖೆಯಿಂದ ಸಂಪೂರ್ಣ ಸಹಕಾರ ನೀಡಲಾಗುತ್ತಿದೆ ಎಂದ ಅವರು, ಶಾಲೆಗಳಿಗೆ ಸುಣ್ಣ,ಬಣ್ಣ ಬಳಿಯುವ ಕಾರ್ಯದಲ್ಲಿ ನಿಮ್ಮೊಂದಿಗೆ ನಾನು ಬ್ರೆಷ್ ಹಿಡಿದು ಕೆಲಸ ಮಾಡುವುದಾಗಿ ತಿಳಿಸಿದರು.

ಶಿಕ್ಷಕ ಗೆಳೆಯರ ಬಳಗದ ಅಧ್ಯಕ್ಷ ನಾರಾಯಣಸ್ವಾಮಿ ಮಾತನಾಡಿ, ಭಾರತ್ ಸುಧಾರ್ ಸಂಸ್ಥೆ ನಮಗೆ ಸಿಕ್ಕಿರುವುದು ನಮ್ಮ ಅದೃಷ್ಟ. ಇಂತಹ ಅನೇಕ ಸಂಸ್ಥೆಗಳು ಸರ್ಕಾರಿ ಶಾಲೆಗಳಿಗಾಗಿ ಕೆಲಸ ಮಾಡುತ್ತಿವೆ ನಮ್ಮ ಬಳಗದಿಂದ ಎಲ್ಲ ರೀತಿಯ ಸಹಕಾರ ನೀಡುವುದರ ಜೊತೆಗೆ ನಿಮ್ಮ ಜೊತೆ ನಾವೂ ನಿಲ್ಲುತ್ತೇವೆ ಸ್ವಯಂ ಸೇವಕರಾಗಿ ಕೆಲಸ ಮಾಡುತ್ತೇವೆ ಎಂದರು.

ಶಿಕ್ಷಕ ಗೆಳೆಯರ ಬಳಗ ಜಿಲ್ಲೆಯ ಎಲ್ಲಾ ಸರ್ಕಾರಿ ಶಾಲೆಗಳಿಗೆ ನೋಟ್ ಪುಸ್ತಕ ಬ್ಯಾಗ್, ಸಮವಸ್ತ್ರ, ವಾಟರ್‌ಫಿಲ್ಟರ್, ಸ್ಮಾರ್ಟ್ ಬೋರ್ಡ್ ಹೀಗೆ ನೂರಾರು ರೀತಿಯ ಕೊಡುಗೆ ನೀಡಿದೆ, ಇಂತಹ ಸಾಮಾಜಿಕ ಕಾರ್ಯಗಳಿಗೆ ಅನೇಕ ದಾನಿಗಗಳು, ಸಂಸ್ಥೆಗಳು ನೆರವಾಗಿ ನಿಂತಿವೆ, ಅವರ ನಂಬಿಕೆಗೆ ಚ್ಯುತಿ ಬಾರದಂತೆ ನಾವು ಕೆಲಸ ಮಾಡಿದ್ದೇವೆ ಎಂದರು.

ಬಂಗಾರಪೇಟೆ ಶಿಕ್ಷಕರ ಸಂಘದ ಅಧ್ಯಕ್ಷ ಆಂಜಿನೇಗೌಡ ಮಾತನಾಡಿ, ಸರ್ಕಾರಿ ಶಾಲೆಗಳು ಉಳಿಯಬೇಕಾದರೆ ನಮ್ಮ ಜೊತೆ ಇಂತಹ ಸಂಘ ಸಂಸ್ಥೆಗಳು ಕೈ ಜೋಡಿಸಬೇಕು ಭಾರತ್ ಸುಧಾರ್ ಸಂಸ್ಥೆ ಗೆಳೆಯರ ಬಳಗದೊಂದಿಗೆ ಸೇರಿ ಕೋಲಾರ ಜಿಲ್ಲೆಯಾದ್ಯಂತ ಅನೇಕ ಕೆಲಸಗಳನ್ನು ಮಾಡಿದ್ದು, ಬಂಗಾರಪೇಟೆಯಲ್ಲಿ ಸಾಕಷ್ಟು ಕೆಲಸ ಮಾಡುತ್ತಿದೆ ಎಂದರು.

ಗೆಳೆಯರ ಬಳಗದ ಕಾರ್ಯದರ್ಶಿ ವೀರಣ್ಣಗೌಡ ಕಾರ್ಯಕ್ರಮ ನಿರೂಪಿಸಿ, ಮುಂದಿನ ತಿಂಗಳು ಕೋಲಾರ ತಾಲ್ಲೂಕಿನ ಪ್ರಾಥಮಿಕ ಶಾಲೆಗಳಿಗೂ ಗ್ರೀನ್ ಬೋರ್ಡ್ ಕೊಡಲು ಸಂಸ್ಥೆ ಮನಸ್ಸು ಮಾಡಬೇಕು ಎಂದು ಮನವಿ ಮಾಡಿ, ನೀವು ನೀಡಿದ ನೆರವನ್ನು ಅತ್ಯಂತ ಬದ್ಧತೆಯಿಂದ ಶಾಲೆಗಳಿಗೆ ತಲುಪಿಸುವ ಕೆಲಸ ಮಾಡುತ್ತಿದ್ದೇವೆ ಎಂದು ತಿಳಿಸಿದರು.

ಈ ಕಾರ್ಯಕ್ರಮದಲ್ಲಿ ಶಿಕ್ಷಕ ಗೆಳೆಯರ ಬಳಗದ ಖಜಾಂಚಿ ಮಾಗುಂದಿ ಶ್ರೀನಿವಾಸ್,ಭಾರತ್ ಸುಧಾರ್ ಸಂಸ್ಥೆಯ ಶಶಿಕಾಂತ್ ರಮೇಶ್, ಕೊಳಮೂರು ಶಾಲೆಯ ರಮೇಶ್, ಎನ್‌ಟಿಜಿಎಸ್‌ಎಮ್ ಶಾಲೆ ಸೇರಿದಮತೆ ಐವತ್ತು ಶಾಲೆಗಳ ಮುಖ್ಯಶಿಕ್ಷಕರು ಹಾಜರಿದ್ದರು.

ಶಿಕ್ಷಕ ಗೆಳೆಯರ ಬಳಗದ ಖಜಾಂಚಿ ಮಾಗುಂದು ಶ್ರೀನಿವಾಸ್ ಸ್ವಾಗತಿಸಿ ಮುನಿನಾರಾಯಣಪ್ಪ ವಂದಿಸಿದರು. ಶಾಲೆಗಳಿಗೆ ಒದಗಿಸಿದ ಗ್ರೀನ್ ಬೋರ್ಡ್‌ಗಳನ್ನು ಶಿಕ್ಷಕರು ಸ್ವೀಕರಿಸಿದರು.

3S ಭಾರತ ಸಾರಥಿ
24/03/2026
BHARATHA SARATHI KANNADA DAILY NEWS PAPER
ಬೆಂಗಳೂರು । ಬೆಂ.ಗ್ರಾಮಾಂತರ । ತುಮಕೂರು । ಮೈಸೂರು । ಮಂಡ್ಯ । ರಾಮನಗರ । ಕೋಲಾರ । ಚಿಕ್ಕಬಳ್ಳಾಪುರ । ಚಿತ್ರದುರ್ಗ । ದಾವಣಗೆರೆ । ಶಿವಮೊಗ್ಗ । ಮಂಗಳೂರು । ಉಡುಪಿ । ಹುಬ್ಬಳ್ಳಿ । ಮಡಿಕೇರಿ । ಚಿಕ್ಕಮಗಳೂರು । ಹಾಸನ । ಬಳ್ಳಾರಿ
ಇ:ಪೇಪರ್: www.epaperbharathasarathi.com | ಇಮೇಲ್: desk.newsbox@gmail.com




ಶ್ರೀನಿವಾಸಪುರ ಪಟ್ಟಣದ ರಂಗ ರಸ್ತೆಯಲ್ಲಿನ ದ್ರೌಪದಮ್ಮ ಗುಡಿಯ ಸಮೀಪ ಶನಿವಾರ ನಡೆದ ವಸಂತೋತ್ಸವ ಕಾರ್ಯಕ್ರಮವು ಸಾರ್ವಜನಿಕರ ವಿಶೇಷ ಗಮನ ಸೆಳೆಯಿತು. ಕರಗ ಹೊತ್ತ ಪೂಜಾರಿ ಹೋಳೂರು ವೆಂಕಟೇಶ್ ಅವರು ಪ್ರದರ್ಶಿಸಿದ ಸಾಹಸಮಯ ನೃತ್ಯ ನೋಡುಗರನ್ನು ಮಂತ್ರಮುಗ್ಧರನ್ನಾಗಿಸಿತು. ಸ್ಥಳೀಯ ಸಂಪ್ರದಾಯದಂತೆ ದ್ರೌಪದಮ್ಮ ದೇವಿಯ ಆಶೀರ್ವಾದದೊಂದಿಗೆ ವಸಂತೋತ್ಸವವು ಬಹಳ ವಿಜೃಂಭಣೆಯಿಂದ ನೆರವೇರಿತು.



ತಿಪಟೂರು ನಗರದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ದೊಡ್ಮನೆ ಅಭಿಮಾನಿ ಬಳಗದ ವತಿಯಿಂದ ಪುನೀತ್ ರಾಜಕುಮಾರ್ ರವರ 51ನೇ ಹುಟ್ಟುಹಬ್ಬದ ಸಲುವಾಗಿ ಈ ದಿನ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ, ಕುರುಬರಹಳ್ಳಿಯಲ್ಲಿ ಮಕ್ಕಳಿಗೆ ಲೇಖನ ಸಾಮಗ್ರಿಗಳು ಹಾಗೂ ವಿವಿಧ ಕಲಿಕಾ ಉಪಕರಣಗಳು ಮತ್ತು ಶಾಲಾ ಬ್ಯಾಗ್ ವಿತರಣೆ ಆಟೋಪಕರಣಗಳ ವಿತರಣೆ ಮಾಡುವುದರ ಮೂಲಕ ಆಚರಿಸಲಾಯಿತು.

# ಡಿವಿಜಿ ಸಾಹಿತ್ಯಕ್ಕೆ ಸಾವಿಲ್ಲ, ಅದು ಎಂದಿಗೂ ಅಮರ: ಟಿ.ಎಸ್. ನಾಗೇಂದ್ರ ಬಾಬು

ಚಿಕ್ಕಬಳ್ಳಾಪುರ

"ಕನ್ನಡ ಭಾಷೆ ಮತ್ತು ಸಾಹಿತ್ಯಕ್ಕೆ 'ಮಂಕುತಿಮ್ಮನ ಕಗ್ಗ'ದ ಮೂಲಕ ವಿಶ್ವಮನ್ನಣೆ ತಂದುಕೊಟ್ಟ ಶ್ರೇಷ್ಠ ದಾರ್ಶನಿಕ ಸಾಹಿತಿ ಡಿ.ವಿ. ಗುಂಡಪ್ಪನವರು. ಸಾಹಿತಿಗೆ ಸಾವು ಸಂಭವಿಸಬಹುದು, ಆದರೆ ಅವರು ಸೃಷ್ಟಿಸಿದ ಸಾಹಿತ್ಯಕ್ಕೆ ಎಂದಿಗೂ ಸಾವಿಲ್ಲ, ಅದು ಅಮರ," ಎಂದು ಹಿರಿಯ ಪತ್ರಕರ್ತ ಹಾಗೂ ಸಾಹಿತಿ ಟಿ.ಎಸ್. ನಾಗೇಂದ್ರ ಬಾಬು ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಆಯೋಜಿಸಲಾಗಿದ್ದ ಡಿವಿಜಿ ಜಯಂತಿ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಅವರು ಮಾತನಾಡಿದರು.



ಬದುಕಿನ ಸಂದೇಶ ನೀಡಿದ 'ಕಗ್ಗ': "ಜನಸಾಮಾನ್ಯರ ಬದುಕನ್ನು, ಜೀವನ ನಡೆಸಬೇಕಾದ ದಾರಿಯನ್ನು ಅತ್ಯಂತ ಸರಳವಾಗಿ ವಿಶ್ಲೇಷಿಸಿ, ತಮ್ಮ ಸಾಹಿತ್ಯದ ಮೂಲಕ ಜಗತ್ತಿಗೆ ಸಾರಿದವರು ಡಿವಿಜಿ. ಇಂದಿನ ಯುವ ಜನಾಂಗ ಅವರ ಸಾಹಿತ್ಯದ ಆದರ್ಶಗಳನ್ನು ಅಳವಡಿಸಿಕೊಂಡರೆ ಉತ್ತಮ ಸಮಾಜ ನಿರ್ಮಾಣ ಸಾಧ್ಯ," ಎಂದರು. ಅಲ್ಲದೆ, ಡಿವಿಜಿ ಅವರು ಸ್ಥಾಪಿಸಿದ ರಾಜ್ಯ ಕಾರ್ಯನಿರತ ಪತ್ರಕರ್ತರ ಸಂಘವು ಇಂದು ಶತಮಾನೋತ್ಸವದ ಸಂಭ್ರಮದ ಸನಿಹದಲ್ಲಿದೆ. ಇಂದಿನ ಯುವ ಪತ್ರಕರ್ತರು ಡಿವಿಜಿ ಅವರ ತತ್ವ ಮತ್ತು ಪತ್ರಿಕಾ ಧರ್ಮವನ್ನು ಪಾಲಿಸಬೇಕು ಎಂದು ಕರೆ ನೀಡಿದರು.

ಪತ್ರಕರ್ತರಿಗೆ ಮುಕ್ತ ಮನಸ್ಸು ಇರಲಿ: ಕಾರ್ಯಕ್ರಮದ ಕುರಿತು ಮಾತನಾಡಿದ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಡಾ. ಕೋಡಿ ರಂಗಪ್ಪ, "ಪತ್ರಕರ್ತರು ಸಂಕುಚಿತ ಮನೋಭಾವನೆಯನ್ನು ಬದಿಗೊತ್ತಿ ಮುಕ್ತವಾಗಿ ಆಲೋಚಿಸಬೇಕು. ನಮ್ಮ ಮನಸ್ಸು ಶುದ್ಧವಾಗಿದ್ದರೆ ಮಾತ್ರ ಸಮಾಜದ ಓರೆಕೋರೆಗಳನ್ನು ತಿದ್ದಲು ಸಾಧ್ಯ," ಎಂದು ಅಭಿಪ್ರಾಯಪಟ್ಟರು.

ಸಭೆಯ ಅಧ್ಯಕ್ಷತೆ ವಹಿಸಿದ್ದ ವಿ. ರವಿಕುಮಾರ್ ಹಾಗೂ ಜಿಲ್ಲಾ ಕಾರ್ಯದರ್ಶಿ ಎಂ. ಆನಂದ್ ಮಾತನಾಡಿದರು. ಈ ಸಂದರ್ಭದಲ್ಲಿ ಲೇಖಕ ಸರ್ದಾರ್ ಚಾಂದ್ ಪಾಷಾ, ಶಿಡ್ಲಘಟ್ಟ ಕಸಾಪ ಅಧ್ಯಕ್ಷ ಪಟೇಲ್ ನಾರಾಯಣಸ್ವಾಮಿ, ಸಮತಾ ಸೈನಿಕ ದಳದ ರಾಜ್ಯಾಧ್ಯಕ್ಷ ಜಿ.ಸಿ. ವೆಂಕಟರವಣಪ್ಪ, ರೈತ ಮುಖಂಡ ನರಸಿಂಹಯ್ಯ ಸೇರಿದಂತೆ ಜಿಲ್ಲಾ ಕಾರ್ಯಕಾರಣಿ ಸಮಿತಿ ಸದಸ್ಯರಾದ ಜಿಲಾನಿ, ಕೆ.ಪಿ. ನವಮೋಹನ್, ಎನ್. ಚಂದ್ರೇಗೌಡ ಮತ್ತಿತರರು ಉಪಸ್ಥಿತರಿದ್ದರು.

# ನೀರಿನ ಬಿಲ್ ಬಡ್ಡಿ ಮನ್ನಾ!

ಬೆಂಗಳೂರು

ದೀರ್ಘಕಾಲದಿಂದ ನೀರಿನ ಬಿಲ್ ಬಾಕಿ ಉಳಿಸಿಕೊಂಡಿರುವ ಬೆಂಗಳೂರು ನಾಗರಿಕರಿಗೆ ಜಲಮಂಡಳಿಯು ಸಿಹಿ ಸುದ್ದಿ ನೀಡಿದೆ. ಬಾಕಿ ಮೊತ್ತದ ಮೇಲಿನ ಬಡ್ಡಿಯನ್ನು ಸಂಪೂರ್ಣವಾಗಿ ಮನ್ನಾ ಮಾಡುವ ಒನ್ ಟೈಮ್ ಸೆಟಲ್‌ಮೆಂಟ್ ಯೋಜನೆಯನ್ನು ಏಪ್ರಿಲ್ ತಿಂಗಳಿನಿಂದ ಜಾರಿಗೆ ತರಲಾಗುವುದು ಎಂದು ಉಪಮುಖ್ಯಮಂತ್ರಿ ಹಾಗೂ ಬೆಂಗಳೂರು ನಗರಾಭಿವೃದ್ಧಿ ಸಚಿವ ಡಿ.ಕೆ. ಶಿವಕುಮಾರ್ ಶನಿವಾರ ಪ್ರಕಟಿಸಿದ್ದಾರೆ.

ಏಪ್ರಿಲ್‌ನಿಂದ 3 ತಿಂಗಳ ಕಾಲ ಅವಕಾಶ: ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ವ್ಯಾಪ್ತಿಯಲ್ಲಿರುವ ಗ್ರಾಹಕರಿಗಾಗಿ ಈ ವಿಶೇಷ ಯೋಜನೆಯನ್ನು ಏಪ್ರಿಲ್ 2026 ರಿಂದ ಜೂನ್ 2026ರ ವರೆಗೆ (ಒಟ್ಟು 3 ತಿಂಗಳು) ಜಾರಿಯಲ್ಲಿ ಇರಿಸಲಾಗುವುದು. ಗ್ರಾಹಕರು ಈ ಅವಧಿಯಲ್ಲಿ ತಮ್ಮ ಬಿಲ್‌ನ ಅಸಲು ಮೊತ್ತವನ್ನು ಪಾವತಿಸಿದರೆ, ಶೇ. 100 ರಷ್ಟು ಬಡ್ಡಿಯನ್ನು ಮನ್ನಾ ಮಾಡಲಾಗುವುದು.

ಯೋಜನೆಯ ಹಿನ್ನೆಲೆ ಮತ್ತು ಅಂಕಿ–ಅಂಶ:

ಜಲಮಂಡಳಿಯ ಮಾಹಿತಿಯಂತೆ ಬೆಂಗಳೂರಿನಲ್ಲಿ ಒಟ್ಟು 11 ಲಕ್ಷ ನೀರಿನ ಸಂಪರ್ಕಗಳಿದ್ದು, ಈ ಪೈಕಿ 5.11 ಲಕ್ಷ ಗ್ರಾಹಕರು ಬಿಲ್ ಬಾಕಿ ಉಳಿಸಿಕೊಂಡಿದ್ದಾರೆ.

ಒಟ್ಟು ಬಾಕಿ ಮೊತ್ತ: ರೂ. 851.33 ಕೋಟಿ.

ಅಸಲು ಮೊತ್ತ: ರೂ. 539.43 ಕೋಟಿ.

ಮನ್ನಾ ಆಗಲಿರುವ ಬಡ್ಡಿ: ರೂ. 311.90 ಕೋಟಿ.

ಯಾರಿಗೆಲ್ಲ ಈ ಸೌಲಭ್ಯ ಅನ್ವಯ? ಈ ಯೋಜನೆಯು ಕೇವಲ ಮನೆಗಳಿಗೆ ಮಾತ್ರವಲ್ಲದೆ, ವಾಣಿಜ್ಯ ಮತ್ತು ಕೈಗಾರಿಕಾ ವಿಭಾಗದ ಎಲ್ಲಾ ವರ್ಗದ ಗ್ರಾಹಕರಿಗೂ ಅನ್ವಯವಾಗಲಿದೆ. ಅಲ್ಲದೆ, ಸರ್ಕಾರಿ ಇಲಾಖೆಗಳು ಮತ್ತು ಸಂಸ್ಥೆಗಳು ಸಹ ಈ ಯೋಜನೆಯಡಿ ಬಾಕಿ ಪಾವತಿಸಿ ಬಡ್ಡಿ ಮನ್ನಾ ಸೌಲಭ್ಯ ಪಡೆಯಬಹುದಾಗಿದೆ.

ಪಾವತಿ ಹೇಗೆ? ಗ್ರಾಹಕರಿಗೆ ಅನುಕೂಲವಾಗುವಂತೆ ಜಲಮಂಡಳಿಯು ಪ್ರತಿ ಬಾಕಿದಾರರ ಆರ್‌ಆರ್ ಸಂಖ್ಯೆ, ಅಸಲು ಮೊತ್ತ ಮತ್ತು ಮನ್ನಾ ಆಗುವ ಬಡ್ಡಿಯ ವಿವರಗಳನ್ನು ನೀಡಲಿದೆ. ಗ್ರಾಹಕರು ಜಲಮಂಡಳಿ ಕಿಯೋಸ್ಕ್, ಆನ್‌ಲೈನ್ ಪೋರ್ಟಲ್ ಅಥವಾ ಡಿಜಿಟಲ್ ಪಾವತಿ ವಿಧಾನಗಳ ಮೂಲಕ ಸುಲಭವಾಗಿ ಹಣ ಪಾವತಿಸಬಹುದು.

"ನಗರದ ಲಕ್ಷಾಂತರ ಗ್ರಾಹಕರ ಆರ್ಥಿಕ ಹೊರೆ ತಗ್ಗಿಸುವ ಮತ್ತು ಮಂಡಳಿಯ ಆರ್ಥಿಕ ಸ್ಥಿತಿ ಬಲಪಡಿಸುವ ಉದ್ದೇಶದಿಂದ ಈ ಯುಗಾದಿ ಕೊಡುಗೆ ನೀಡಲಾಗುತ್ತಿದೆ. ಸಾರ್ವಜನಿಕರು ಈ ಸುವರ್ಣಾವಕಾಶವನ್ನು ಬಳಸಿಕೊಳ್ಳಬೇಕು," ಎಂದು ಡಿ.ಕೆ. ಶಿವಕುಮಾರ್ ಅವರು ಮನವಿ ಮಾಡಿದ್ದಾರೆ.

# ಗೋರಕ್ಷಕರ ಮೇಲೆ ಹಲ್ಲೆ ಖಂಡಿಸಿ 24ಕ್ಕೆ ತಿಪಟೂರು ಬಂದ್

ತಿಪಟೂರು

ತಾಲೂಕಿನ ಗಾಂಧಿನಗರದ ಸಮೀಪ ಅಕ್ರಮ ಗೋವುಗಳ ಸಾಗಾಣಿಕೆ ತಡೆಯಲು ಮುಂದಾದ ಹಿಂದೂಪರ ಸಂಘಟನೆಗಳ ಪದಾಧಿಕಾರಿಗಳ ಮೇಲೆ ಅನ್ಯಕೋಮಿನ ಯುವಕರು ಹಲ್ಲೆ ನಡೆಸಿದ್ದು, ಇದನ್ನು ಖಂಡಿಸಿ ವಿವಿಧ ಸಂಘಟನೆಗಳು ಹಾಗೂ ಬಿಜೆಪಿ ಮುಖಂಡರು ಮಾರ್ಚ್ 24ರ ಮಂಗಳವಾರ ಸ್ವಯಂಪ್ರೇರಿತ 'ತಿಪಟೂರು ಬಂದ್'ಗೆ ಕರೆ ನೀಡಿವೆ.



ಘಟನೆಯ ವಿವರ: ರಂಜಾನ್ ಹಬ್ಬದ ಹಿನ್ನೆಲೆಯಲ್ಲಿ ಅಕ್ರಮವಾಗಿ ಗೋವುಗಳನ್ನು ಸಾಗಿಸಲಾಗುತ್ತಿದೆ ಎಂಬ ಖಚಿತ ಮಾಹಿತಿ ಮೇರೆಗೆ ಬಜರಂಗದಳದ ತಾಲ್ಲೂಕು ಸಂಚಾಲಕ ಪ್ರಜ್ವಲ್, ಬಲಿಜ ನ್ಯೂಸ್‌ನ ಗೌತಮ್, ಹಿಂದೂಪರ ಸಂಘಟನೆಯ ಆನಂದ್, ಶಿವಪ್ಪ ಮತ್ತು ಸಚಿನ್ ಅವರು ಅನಗೊಂಡನಹಳ್ಳಿ ಮಾರ್ಗದ ರಸ್ತೆಯಲ್ಲಿ ವಾಹನವನ್ನು ತಡೆದಿದ್ದರು. ಈ ಸಂದರ್ಭದಲ್ಲಿ ಪೊಲೀಸರಿಗೆ ಮಾಹಿತಿ ನೀಡುತ್ತಿದ್ದಾಗ, ನೂರಾರು ಅನ್ಯಕೋಮಿನ ಯುವಕರು ಏಕಾಏಕಿ ಸ್ಥಳಕ್ಕೆ ಧಾವಿಸಿ ಕಾರ್ಯಕರ್ತರ ಮೇಲೆ ಮನಬಂದಂತೆ ಹಲ್ಲೆ ನಡೆಸಿದ್ದಾರೆ ಎನ್ನಲಾಗಿದೆ.

ಸ್ಥಳಕ್ಕೆ ಆಗಮಿಸಿದ 118 ಪೊಲೀಸ್ ಸಿಬ್ಬಂದಿಗಳು ಗಾಯಾಳುಗಳನ್ನು ತಕ್ಷಣವೇ ಆಸ್ಪತ್ರೆಗೆ ದಾಖಲಿಸಿದ್ದಾರೆ.

ಡಿವೈಎಸ್ಪಿ ಕಚೇರಿ ಮುಂಭಾಗ ಪ್ರತಿಭಟನೆ: ಹಲ್ಲೆ ನಡೆಸಿದವರನ್ನು ಕೂಡಲೇ ಬಂಧಿಸಬೇಕು ಮತ್ತು ಗಾಂಧಿನಗರದಲ್ಲಿರುವ ಅಕ್ರಮ ಕಸಾಯಿಖಾನೆಗಳನ್ನು ಮುಚ್ಚಿಸಬೇಕು ಎಂದು ಆಗ್ರಹಿಸಿ ಬಿಜೆಪಿ ಹಾಗೂ ಹಿಂದೂಪರ ಸಂಘಟನೆಯ ಮುಖಂಡರು ಡಿವೈಎಸ್ಪಿ ಕಚೇರಿ ಮುಂಭಾಗ ಬೃಹತ್ ಪ್ರತಿಭಟನೆ ನಡೆಸಿದರು.

ಮುಖಂಡ ಬಾಳೆಕಾಯಿ ನಟರಾಜು ಮಾತನಾಡಿ, "ಕಾರ್ಯಕರ್ತರು ಮಾಹಿತಿ ನೀಡಿದರೂ ಪೊಲೀಸ್ ಇಲಾಖೆ ಸ್ಥಳಕ್ಕೆ ಬರಲು ವಿಳಂಬ ಮಾಡಿದ್ದೇ ಈ ಮಾರಣಾಂತಿಕ ಹಲ್ಲೆಗೆ ಕಾರಣ," ಎಂದು ಗಂಭೀರ ಆರೋಪ ಮಾಡಿದರು.

ಬಂದ್ ಬೆಂಬಲಕ್ಕೆ ಮನವಿ: ಮಂಗಳವಾರ ನಡೆಯಲಿರುವ ಬಂದ್‌ಗೆ ಪಟ್ಟಣದ ವರ್ತಕರು ಮತ್ತು ಸಾರ್ವಜನಿಕರು ಬೆಂಬಲ ನೀಡಬೇಕೆಂದು ಸಂಘಟನೆಗಳು ಮನವಿ ಮಾಡಿವೆ. ಪ್ರತಿಭಟನೆಯಲ್ಲಿ ಬಿಜೆಪಿ ಮುಖಂಡರಾದ ಗಂಗರಾಜು, ವಿಶ್ವದೀಪು, ಗಾಡಿ ಮಂಜುನಾಥ್, ಮಡೇನೂರು ವಿನಯ್, ಕೃಷ್ಣ (ಶಿವಾಜಿ), ನಾಗೇಶ್ ಸೇರಿದಂತೆ ಅನೇಕ ಪದಾಧಿಕಾರಿಗಳು ಭಾಗವಹಿಸಿದ್ದರು.

# ಪಾವಗಡ ಸಮಾಜ ಕಲ್ಯಾಣ ಇಲಾಖೆ ಅಧಿಕಾರಿ ಕಚೇರಿಯಲ್ಲೇ ಆತ್ಮಹತ್ಯೆ

ಪಾವಗಡ



"ನಿವೃತ್ತಿಗೆ ಇನ್ನು ಕೆಲವೇ ದಿನಗಳಿರುವಾಗ ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕ ಮಲ್ಲಿಕಾರ್ಜುನಯ್ಯ (60) ಅವರು ಕಚೇರಿಯಲ್ಲೇ ನೇಣಿಗೆ ಶರಣಾಗಿರುವ ಘಟನೆ ಇಡೀ ತಾಲ್ಲೂಕನ್ನು ಬೆಚ್ಚಿಬೀಳಿಸಿದೆ. ಮೇಲಾಧಿಕಾರಿಯ ಮಾನಸಿಕ ಕಿರುಕುಳವೇ ಈ ಸಾವಿಗೆ ನೇರ ಕಾರಣ ಎಂಬ ಗಂಭೀರ ಆರೋಪ ಕೇಳಿಬಂದಿದ್ದು, ಇಲಾಖೆಯ ಜಂಟಿ ನಿರ್ದೇಶಕ ಕೃಷ್ಣಪ್ಪ ವಿರುದ್ಧ ಪ್ರಕರಣ ದಾಖಲಾಗಿದೆ."

ಘಟನೆಯ ಹಿನ್ನೆಲೆ:

ಕಳೆದ ಮೂರು ವರ್ಷಗಳಿಂದ ಪಾವಗಡದಲ್ಲಿ ಸೇವೆ ಸಲ್ಲಿಸುತ್ತಿದ್ದ ಮಲ್ಲಿಕಾರ್ಜುನಯ್ಯ ಅವರು ಇದೇ ಮಾರ್ಚ್ 31ರಂದು ನಿವೃತ್ತಿ ಹೊಂದಬೇಕಿತ್ತು. ಶುಕ್ರವಾರ ಸಂಜೆ ಸಿಬ್ಬಂದಿಗಳೆಲ್ಲ ಮನೆಗೆ ತೆರಳಿದ ಬಳಿಕ, ಕಚೇರಿಯ ಮೀಟಿಂಗ್ ಹಾಲ್‌ನಲ್ಲಿ ಅವರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಮೂಲತಃ ತಾಲ್ಲೂಕಿನ ಗುಂಡರ್ಲಹಳ್ಳಿ ನಿವಾಸಿಯಾದ ಇವರ ನಿಧನದಿಂದ ಕುಟುಂಬದ ಆಕ್ರಂದನ ಮುಗಿಲು ಮುಟ್ಟಿದೆ.

ಮರಣಪತ್ರ ಮತ್ತು ವಿಡಿಯೋ ಸಾಕ್ಷ್ಯ:

ಆತ್ಮಹತ್ಯೆಗೂ ಮುನ್ನ ಮಲ್ಲಿಕಾರ್ಜುನಯ್ಯ ಅವರು ವಿಡಿಯೋ ಮತ್ತು ಡೆತ್ ನೋಟ್ ಮೂಲಕ ತಮ್ಮ ನೋವನ್ನು ಹಂಚಿಕೊಂಡಿದ್ದಾರೆ.

ವಿಡಿಯೋ ಸಂದೇಶ: "ನನ್ನ ಕುಟುಂಬ ನನ್ನನ್ನು ಚೆನ್ನಾಗಿ ನೋಡಿಕೊಂಡಿದೆ. ಆದರೆ ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕ (ಎಆ) ಕೃಷ್ಣಪ್ಪ ನನಗೆ ಅತಿಯಾದ ತೊಂದರೆ ಕೊಟ್ಟಿದ್ದಾರೆ. ಅವರಿಗೆ ದೇವರೇ ಶಿಕ್ಷೆ ನೀಡುತ್ತಾನೆ," ಎಂದು ವಿಡಿಯೋದಲ್ಲಿ ಹೇಳಿದ್ದಾರೆ.

ಡೆತ್ ನೋಟ್: "ಜೆಡಿ ಕೃಷ್ಣಪ್ಪ ನನ್ನ ಮೇಲೆ ಇಲ್ಲಸಲ್ಲದ ಆರೋಪ ಹೊರಿಸಿ, ಸಾರ್ವಜನಿಕರಿಂದ ದೂರು ಕೊಡಿಸಿದ್ದಾರೆ. ನಿವೃತ್ತಿ ವೇತನಕ್ಕೆ ತೊಂದರೆ ನೀಡುವುದಾಗಿ ಬೆದರಿಸಿ ಮಾನಸಿಕವಾಗಿ ಹಿಂಸಿಸಿದ್ದಾರೆ," ಎಂದು ಎರಡು ಪುಟಗಳ ಡೆತ್ ನೋಟ್‌ನಲ್ಲಿ ಬರೆದಿದ್ದಾರೆ.

ಅಧಿಕಾರಿಗಳ ನಡೆ ಬಗ್ಗೆ ಅನುಮಾನ:

ಮಲ್ಲಿಕಾರ್ಜುನಯ್ಯ ಅವರು ಭ್ರಷ್ಟಾಚಾರ ನಡೆಸಿದ್ದಾರೆ ಎಂದು 2025ರ ಆಗಸ್ಟ್‌ನಲ್ಲೇ ದೂರು ಬಂದಿತ್ತು. ಆದರೆ, ತುಮಕೂರು ಜಂಟಿ ನಿರ್ದೇಶಕರು ಈ ದೂರನ್ನು ಏಳು ತಿಂಗಳು ಸುಮ್ಮನಿದ್ದು, ಮಲ್ಲಿಕಾರ್ಜುನಯ್ಯ ಅವರು ನಿವೃತ್ತಿ ಹೊಂದುವ ಹದಿನೈದು ದಿನಗಳ ಮುಂಚೆ (ಇದೇ 12, 2026) ತನಿಖಾ ತಂಡ ರಚಿಸಿರುವುದು ಹಲವು ಅನುಮಾನಗಳಿಗೆ ಎಡೆಮಾಡಿಕೊಟ್ಟಿದೆ. ನಿವೃತ್ತಿ ಸಮಯದಲ್ಲಿ ಇಂತಹ ತನಿಖೆ ನಡೆಸಿ ಮಾನಸಿಕವಾಗಿ ಕುಗ್ಗಿಸಿರುವುದು ಸಾವಿಗೆ ಪ್ರೇರಣೆ ನೀಡಿದೆಯೇ ಎಂಬ ಪ್ರಶ್ನೆ ಎದ್ದಿದೆ.

ಪೊಲೀಸ್ ತನಿಖೆ:

ಮೃತ ಮಲ್ಲಿಕಾರ್ಜುನಯ್ಯ ಅವರ ಪತ್ನಿ ನೀಡಿರುವ ದೂರಿನ ಅನ್ವಯ ಜೆಡಿ ಕೃಷ್ಣಪ್ಪ ವಿರುದ್ಧ ಎಫ್.ಐ.ಆರ್ ದಾಖಲಾಗಿದೆ. ಸ್ಥಳದಲ್ಲಿ ಸುಮಾರು 50 ಪುಟಗಳ ದಾಖಲೆಗಳು ಪತ್ತೆಯಾಗಿದ್ದು, ಪೊಲೀಸರು ಅವುಗಳನ್ನು ವಶಕ್ಕೆ ಪಡೆದಿದ್ದಾರೆ.

ಹಿರಿಯ ಪೊಲೀಸ್ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

# ಮಾರ್ಚ್ 25ರಂದು ಬೆಂಗಳೂರಿನ ಫ್ರಿಡಂ ಪಾರ್ಕ್ನಲ್ಲಿ ಬಲಗೈ ಜಾತಿಗಳ ಬೃಹತ್ ಹೋರಾಟ




ಬಾಗೇಪಲ್ಲಿ

ಕರ್ನಾಟಕ ರಾಜ್ಯ ಬಲಗೈ ಜಾತಿಗಳ ಮಹಾ ಒಕ್ಕೂಟದ ವತಿಯಿಂದ ಒಳ ಮೀಸಲಾತಿ ವಿಷಯ ಹಾಗೂ ನಾಗಮೋಹನ್ ದಾಸ್ ಆಯೋಗ ನೀಡಿರುವ ವರದಿಯನ್ನು ವಿರೋಧಿಸಿ ಮಾರ್ಚ್ 25ರಂದು ಬೆಂಗಳೂರಿನ ಫ್ರಿಡಂ ಪಾರ್ಕ್‌ನಲ್ಲಿ ಬೃಹತ್ ಹೋರಾಟವನ್ನು ಹಮ್ಮಿಕೊಳ್ಳಲಾಗಿದೆ ಎಂದು ಛಲವಾದಿ ಮಹಾಸಭಾ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕೆ.ವಿ.ರಮೇಶ್ ಛಲವಾದಿ ಹೇಳಿದರು.

ಪಟ್ಟಣದ ಕಾರ್ಯನಿರತ ಪತ್ರಕರ್ತರ ಸಂಘದ ಭವನದಲ್ಲಿ ಅವರು ಮಾತನಾಡಿ, ನಾಗಮೋಹನ್ ದಾಸ್ ಆಯೋಗದ ವರದಿ ಅವೈಜ್ಞಾನಿಕವಾಗಿದ್ದು ಅದನ್ನು ರಾಜ್ಯ ಸರ್ಕಾರ ತಿರಸ್ಕರಿಸಬೇಕು ಎಂದು ಒತ್ತಾಯಿಸಿದರು. ಜೊತೆಗೆ ಹೋರಾಟವನ್ನು ಯಶಸ್ವಿಗೊಳಿಸಲು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಮನವಿ ಮಾಡಿದರು.

ಮಾರ್ಚ್ 25, 2026 ರಂದು ಬೆಂಗಳೂರಿನ ಫ್ರಿಡಂ ಪಾರ್ಕ್‌ನಲ್ಲಿ ನಡೆಯಲಿರುವ ಬಲಗೈ ಜಾತಿಗಳ ಬೃಹತ್ ಹೋರಾಟದಲ್ಲಿ ಜಿಲ್ಲೆ ಹಾಗೂ ತಾಲೂಕು ಮಟ್ಟದ ಮುಖಂಡರು ಮತ್ತು ಸಮುದಾಯದ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವ ನಿರೀಕ್ಷೆಯಿದೆ ಎಂದು ತಿಳಿಸಿದರು.

ಪರಿಶಿಷ್ಟ ಜಾತಿಯ ಹಲವು ಸಮುದಾಯಗಳ ಹಕ್ಕುಗಳು ಮತ್ತು ಭವಿಷ್ಯವನ್ನು ಕಾಪಾಡುವ ಉದ್ದೇಶದಿಂದ ಈ ಹೋರಾಟವನ್ನು ಕರ್ನಾಟಕ ರಾಜ್ಯ ಬಲಗೈ ಜಾತಿಗಳ ಮಹಾ ಒಕ್ಕೂಟದ ವತಿಯಿಂದ ಆಯೋಜಿಸಲಾಗಿದೆ. ಆದ್ದರಿಂದ ಬಾಗೇಪಲ್ಲಿ, ಚೇಳೂರು ಹಾಗೂ ಗುಡಿಬಂಡೆ ತಾಲೂಕಿನ ಎಲ್ಲಾ ಹಳ್ಳಿಗಳಿಂದ ಸಮಾಜದ ಮುಖಂಡರು, ಯುವಕರು ಹಾಗೂ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಈ ಐತಿಹಾಸಿಕ ಪ್ರತಿಭಟನೆಯನ್ನು ಯಶಸ್ವಿಗೊಳಿಸಬೇಕು ಎಂದು ಅವರು ಮನವಿ ಮಾಡಿದರು.

ತಾಲ್ಲೂಕು ಪ್ರಧಾನ ಕಾರ್ಯದರ್ಶಿ ರಾಮಚಂದ್ರ ಮಾತನಾಡಿ ನಾಗಮೋಹನ ದಾಸ್ ಆಯೋಗದ ವರದಿ ಪರಿಶಿಷ್ಟ ಜಾತಿಯ ಇತರೆ ಅನೇಕ ಸಮುದಾಯಗಳ ಶೈಕ್ಷಣಿಕ ಹಾಗೂ ಉದ್ಯೋಗಾವಕಾಶ ಗಳನ್ನು ಕಸಿದುಕೊಳ್ಳುವ ಅನ್ಯಾಯವಾಗಿದ್ದು, ಇದನ್ನು ತಕ್ಷಣವೇ ತಿರಸ್ಕರಿಸಬೇಕು ಎಂದು ಆಗ್ರಹಿಸಿದರು. ಒಕ್ಕೂಟದ ರಾಜ್ಯ ಸಮಿತಿಯಿಂದ ಒಳಮೀಸಲಾತಿ ರಹಿತ ಹಳೆಯ ಮೀಸಲಾತಿ ವ್ಯವಸ್ಥೆಯನ್ನು ಜಾರಿಗೆ ತರಲು ಒತ್ತಾಯಿಸಿ ಈ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ.

ತಾಲ್ಲೂಕು ಹಾಗೂ ಜಿಲ್ಲೆಯ ಬಲಗೈ ಸಮುದಾಯದವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ತಮ್ಮ ಹಕ್ಕುಗಳಿಗಾಗಿ ಧ್ವನಿ ಎತ್ತಬೇಕು ಎಂದು ಹೇಳಿದರು.

ತದನಂತರ ತಾಲ್ಲೂಕು ಅದ್ಯಕ್ಷ ಮುನಿರಾಜು ಮಾತನಾಡಿ ನಮ್ಮ ಸಮುದಾಯದ ಶಕ್ತಿ ಪ್ರದರ್ಶನ ಮಾಡುವ ಸಮಯ ಬಂದಿದೆ. ನಾವು ಮೌನವಾಗಿದ್ದರೆ ಸರ್ಕಾರ ನಮ್ಮನ್ನು ನಿರ್ಲಕ್ಷ್ಯ ಮಾಡುತ್ತದೆ. ನಮ್ಮ ಹಕ್ಕುಗಳಿಗೆ ಧಕ್ಕೆ ಬಂದರೆ ತೀವ್ರ ಹೋರಾಟ ನಡೆಸಲಾಗುವುದು" ನಾಗ ಮೊಹನದಾಸ್ ವರದಿಯನ್ನು ಅವೈಜ್ಞಾನಿಕ ಎಂದು ಆರೋಪಿಸಿ, ಯಾವುದೇ ಕಾರಣಕ್ಕೂ ಅದನ್ನು ಜಾರಿಗೆ ತರಬಾರದು ಎಂದು ಸರ್ಕಾರವನ್ನು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ತಾಲ್ಲೂಕು ಛಲವಾದಿ ಮಹಾಸಭೆ ಮುಖಂಡರಾದ ವೇಣುಗೋಪಾಲ್, ಓಬಲೇಶ್,ಮುನಿರಾಜು, ರಾಮಚಂದ್ರ,ನಾರಾಯಣಪ್ಪ, ಮುನಿಯಪ್ಪ ,ನರಸಿಂಹಮೂರ್ತಿ,,ವೆಂಕಟೇಶ್, ರಮಣ,ಚಿನ್ನಪ್ಪಯ್ಯ,ಶ್ರೀರಾಮ, ಕೃಷ್ಣಪ್ಪ, ಅಶೋಕ,ಅಂಜಿನಪ್ಪ ಹಾಗೂ ಇತರರು ಹಾಜರಿದ್ದರು.

# ಏಪ್ರಿಲ್‌ನಿಂದ ಒಟಿಎಸ್ ಜಾರಿ

ಬೆಂಗಳೂರು

ಬೆಂಗಳೂರು ನಾಗರಿಕರಿಗೆ ಜಲಮಂಡಳಿಯು ಸಿಹಿ ಸುದ್ದಿ ನೀಡಿದ್ದು, ದೀರ್ಘಕಾಲದಿಂದ ನೀರಿನ ಬಿಲ್ ಬಾಕಿ ಉಳಿಸಿಕೊಂಡಿ ರುವ ಗ್ರಾಹಕರಿಗೆ ಅನು ಕೂಲ ಕಲ್ಪಿಸಲು ಒನ್ ಟೈಮ್ ಸೆಟಲ್‌ಮೆಂಟ್ ಯೋಜನೆಯನ್ನು ಏಪ್ರಿಲ್‌ನಿಂದ ಜಾರಿಗೊಳಿಸಲಾಗುತ್ತಿದೆ ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ತಿಳಿಸಿದ್ದಾರೆ.

ರೂ. 311 ಕೋಟಿ ಬಡ್ಡಿ ಮನ್ನಾ ಭಾಗ್ಯ

ಜಲಮಂಡಳಿಯ ವ್ಯಾಪ್ತಿಯಲ್ಲಿರುವ ಸುಮಾರು 11 ಲಕ್ಷ ಗ್ರಾಹಕರ ಪೈಕಿ 5.11 ಲಕ್ಷ ಮಂದಿ ಬಿಲ್ ಬಾಕಿ ಉಳಿಸಿಕೊಂಡಿದ್ದಾರೆ. ಫೆಬ್ರವರಿ ಅಂತ್ಯದ ವೇಳೆಗೆ ಒಟ್ಟು ರೂ. 851.33 ಕೋಟಿ ಬಾಕಿ ಇದ್ದು, ಇದರಲ್ಲಿ ರೂ.311.90 ಕೋಟಿ ಬಡ್ಡಿ ಮೊತ್ತವೇ ಸೇರಿದೆ. ಈ ಯೋಜನೆಯಡಿ ಅಸಲು ಮೊತ್ತವನ್ನು ಪಾವತಿಸಿದರೆ, ಸಂಪೂರ್ಣ ಬಡ್ಡಿಯನ್ನು ಮನ್ನಾ ಮಾಡಲಾಗುವುದು.

ಕಾಲಾವಕಾಶ: ಏಪ್ರಿಲ್ 2026 ರಿಂದ ಜೂನ್ 2026 ರವರೆಗೆ (3 ತಿಂಗಳು ಮಾತ್ರ).

ಯಾರಿಗೆ ಅನ್ವಯ?: ಗೃಹ ವಾಣಿಜ್ಯ ಮತ್ತು ಕೈಗಾರಿಕಾ ಸೇರಿದಂತೆ ಎಲ್ಲಾ ವರ್ಗದ ಗ್ರಾಹಕರಿಗೆ ಈ ಸೌಲಭ್ಯ ದೊರೆಯಲಿದೆ ಎಂದು ತಿಳಿಸಿದ್ದಾರೆ.

# ಡಿಸಿಎಂ ಡಿ.ಕೆ.ಶಿವಕುಮಾರ್‌ಗೆ ಮುಖ್ಯಮಂತ್ರಿ ಸ್ಥಾನಕ್ಕಾಗಿ ಪ್ರತ್ಯಂಗಿರ ಹೋಮ



ರಾಮನಗರ

ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್‌ರವರಿಗೆ ಮುಖ್ಯಮಂತ್ರಿ ಸ್ಥಾನ ದೊರೆಯಲೆಂದು ಹರಸಿ ಅವರ ಆಪ್ತಬಳಗದ ಶಾಸಕರು ಹಾಗೂ ಮುಖಂಡರಿಂದ ತಮ್ಮ ಇಷ್ಟ ದೇವತೆಗಳಿಗೆ ಹೋಮ ಹವನ ಹರಕೆಗಳಾದಿಯಾಗಿ ನಾನಾ ಪೂಜಾ ಕೈಂಕರ್ಯಗಳ ಸಲ್ಲಿಕೆ ಮುಂದುವರೆದಿವೆ.

ಕೆಆರ್‌ಡಿಸಿಎಲ್ ಅಧ್ಯಕ್ಷರು, ಮಾಗಡಿ ಕ್ಷೇತ್ರದ ಶಾಸಕರಾದ ಎಚ್.ಸಿ.ಬಾಲಕೃಷ್ಣ ಹಾಗೂ ಬಿಡದಿ ಭಾಗದ ಕಾಂಗ್ರೆಸ್ ಮುಖಂಡರು ಸೇರಿ ಯುಗಾದಿ ಮುನ್ನ ಅಮಾವಾಸ್ಯೆಯ ದಿನ ಪ್ರಸಿದ್ಧ ಶ್ರೀವರದರಾಜೇಶ್ವರಸ್ವಾಮಿ ದೇವಾಲಯದಲ್ಲಿ ನಡೆದ ಪ್ರತ್ಯಂಗಿರ ದೇವಿ ಹೋಮ ಮತ್ತು ಶ್ರೀಕಾಲಭೈರವೇಶ್ವರ ಹೋಮದಲ್ಲಿ ಪಾಲ್ಗೊಂಡಿದ್ದರು. ಈ ಮೂಲಕ ತಮ್ಮ ನಾಯಕ ಡಿ.ಕೆ.ಶಿವಕುಮಾರ್‌ರವರು ಶೀಘ್ರ ರಾಜ್ಯದ ಮುಖ್ಯಮಂತ್ರಿ ಸ್ಥಾನಕ್ಕೇರಲೆಂದು ಹರಕೆ ಹೊತ್ತು ವಿಶೇಷ ಪೂಜೆಯನ್ನು ನೆರವೇರಿಸಿದರು. ಹೆಸರಾಂತ ಪುರೋಹಿತ ನಾಗೇಂದ್ರ ದೀಕ್ಷತ್‌ರವರು ಹೋಮವನ್ನು ನಡೆಸಿಕೊಟ್ಟರು.

ಪ್ರತ್ಯಂಗಿರ ಹೋಮ ಅತ್ಯಂತ ಶಕ್ತಿಶಾಲಿ:

ಅಮಾವಾಸ್ಯೆ ದಿನಗಳಲ್ಲಿ ಆಯೋಜಿಸುವ ಪ್ರತ್ಯಂಗಿರ ಹೋಮವು ಅತ್ಯಂತ ಶಕ್ತಿಶಾಲಿ ಮತ್ತು ಉಗ್ರ ತಾಂತ್ರಿಕ ಪೂಜೆಯಾಗಿದ್ದು, ಯಾವುದೇ ಮಾಟ ಮಂತ್ರ, ದುಷ್ಟಶಕ್ತಿಗಳು, ಶತ್ರುಕಾಟ ಹಾಗೂ ನರಕಾತ್ಮಕ ಶಕ್ತಿಗಳಿಂದ ರಕ್ಷಣೆ ಪಡೆಯಲು ಅಮಾವಾಸ್ಯೆಯ ದಿನ ಮಾಡಲಾಗುತ್ತದೆ. ಇದು ಆರೋಗ್ಯ, ಸಂಪತ್ತು ಮತ್ತು ಮಾನಸಿಕ ಶಾಂತಿಯನ್ನು ತರುತ್ತದೆ ಅಲ್ಲದೆ ವಿಶೇಷವಾಗಿ ದೃಷ್ಟಿದೋಷ ಮತ್ತು ತೀವ್ರ ಅನಾರೋಗ್ಯ ನಿವಾರಣೆಗೆ ಪರಿಣಾಮಕಾರಿಯಾಗಲಿದೆ ಎಂಬ ನಂಬಿಕೆಯಿಂದ ಆಯೋಜಿಸಲಾಗುತ್ತದೆ.

ಪ್ರತ್ಯಾಂಗಿರ ದೇವಿ ಹೋಮದ ವಿಶೇಷ:

ಪುರಾಣದಲ್ಲಿ ಶಿವನ ಮೂರನೇ ಕಣ್ಣಿನಿಂದ ಉದ್ಭವಿಸಿದ ಪ್ರತ್ಯಾಂಗಿರ ದೇವಿ ನರಸಿಂಹನನ್ನು ಶಾಂತಗೊಳಿಸಿದಳು ಎಂಬ ಉಲ್ಲೇಖವಿದೆ. ಹಾಗಾಗಿ ಅಮಾವಾಸ್ಯೆ ಮತ್ತು ಹುಣ್ಣಿಮೆಯ ದಿನಗಳಲ್ಲಿ ಪತ್ಯಾಂಗಿರ ದೇವಿ ಹೋಮವನ್ನು ನೆರವೇರಿಸಲಾಗುತ್ತದೆ. ಇದರಿಂದ ವಾಮಾಚಾರ ಪರಿಣಾಮಗಳ ರದ್ದತಿ, ಶ್ರತುಗಳ ನಾಶ, ದುರಾದೃಷ್ಟ ನಿವಾರಣೆ, ಕಾನೂನು ಸಮಸ್ಯೆಗಳಿಂದ ರಕ್ಷಣೆ ಮತ್ತು ಆರ್ಥಿಕ ಸಮೃದ್ಧಿ ನೆಲೆಸುತ್ತದೆ ಎನ್ನುವುದು ಕೆಲವರ ದೃಢ ನಂಬಿಕೆಯಾಗಿದೆ.

ಕೆಂಪು ಮೆಣಸಿನಕಾಯಿ ಬಳಸುವುದು ವಿಶೇಷ:

ಪ್ರತ್ಯಾಂಗಿರ ಹೋಮದಲ್ಲಿ ಒಣಗಿದ ಕೆಂಪು ಮೆಣಸಿನಕಾಯಿಗಳನ್ನು ಬಳಸುವುದು ವಿಶೇಷ. ಮಂತ್ರ ಘೋಷಗಳ ಮೂಲಕ ಕೆಂಪು ಮೆಣಸಿನಕಾಯಿಗಳನ್ನು ಅಗ್ನಿಗೆ ಅರ್ಪಿಸಲಾಗುತ್ತದೆ. ಇದು ನಕರಾತ್ಮಕ ಶಕ್ತಿಗಳನ್ನು ಸುಟ್ಟು ಹಾಕುತ್ತದೆ ಅನಾವಾಸ್ಯೆ ಅಥವಾ ಹುಣ್ಣಿಮೆ ದಿನಗಳಲ್ಲಿ ಈ ಹೋಮವನ್ನು ಮಾಡುವುದು ಅತ್ಯಂತ ಫಲಪ್ರದ ಎಂದು ನಂಬಲಾಗಿದೆ. ಈ ಹೋಮವು ಅತ್ಯಂತ ಉಗ್ರವಾಗಿರುವುದರಿಂದ ಇದನ್ನು ಅನುಭವಿ ಪುರೋಹಿತರ ನೇತೃತ್ವದಲ್ಲಿ ನೆರವೇರಿಸಲಾಗುತ್ತದೆ.

ಪ್ರತ್ಯಾಂಗಿರ ಹೋಮದಲ್ಲಿ ಗ್ರೇಟರ್ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಜಿ.ಎನ್.ನಟರಾಜು, ಜಿಲ್ಲಾ ಕಾಂಗ್ರೆಸ್ ಉಪಾಧ್ಯಕ್ಷ ಎಲ್.ಚಂದ್ರಶೇಖರ್, ಕೆಪಿಸಿಸಿ ಸದಸ್ಯ ಬ್ಯಾಟಪ್ಪ, ಬಿಎಂಐಸಿಪಿ ನಿರ್ದೇಶಕ ಅಬ್ಬನಕುಪ್ಪೆ ರಮೇಶ್, ಮುಖಂಡರಾದ ಗೋಪಾಲ್‌ರಾಜ್, ರಂಗಸ್ವಾಮಿ, ಸುಜ್ಞಾನಮೂರ್ತಿ, ಎಚ್. ಎಸ್.ಯೋಗಾನಂದ್, ಆನಂದ್ ಸೇರಿದಂತೆ ದೇವಾಲಯದ ಸಂಸ್ಥಾಪಕ ನಾರಾಯಣಗುರು ಭಾಗವಹಿಸಿದ್ದರು.

ಹಿಂದೂ ಸಂಪ್ರದಾಯದಂತೆ ಹೊಸ ವರ್ಷದಾರಂಭವಾಗಿದೆ. ಯುಗಾದಿ ಹಬ್ಬದ ಮುನ್ನಾದಿನ ಬಿಡದಿಯ ವರದರಾಜೇಶ್ವರಸ್ವಾಮಿ ದೇವಾಲಯದಲ್ಲಿ ಲೋಕ ಕಲ್ಯಾಣಕ್ಕಾಗಿ ನಡೆದ ಪ್ರತ್ಯಂಗಿರ ಹೋಮದಲ್ಲಿ ಭಾಗವಹಿಸುವ ಸದಾವಕಾಶವನ್ನು ಭಗವಂತ ನಮಗೆ ಕಲ್ಪಿಸಿದ್ದಾನೆ. ಹೋಮ ಮತ್ತು ಪೂಜೆಯ ವೇಳೆ ನಮ್ಮ ಮನದಲ್ಲಿರುವ ಬಯಕೆಗಳನ್ನು ಈಡೇರಿಸುವಂತೆ ಹಾಗೂ ಎಲ್ಲರಿಗೂ ಉತ್ತಮ ಆರೋಗ್ಯ, ಸುಖ ಸಮೃದ್ಧಿ ನೀಡಲೆಂದು ದಯಾಮಯನಾದ ಭಗವಂತನಲ್ಲಿ ಪ್ರಾರ್ಥಿಸಿಕೊಳ್ಳಲಾಗಿದೆ ಎಂದು ಶಾಸಕ ಎಚ್.ಸಿ.ಬಾಲಕೃಷ್ಣ ಹೇಳಿದರು.

# ಕಸದ ರಾಶಿಗಳಿದ್ದ ಜಾಗಕ್ಕೆ ಈಗ ಬಣ್ಣದ ಸೀರೆಗಳ ಸಿಂಗಾರ; ಆರೋಗ್ಯ ನಿರೀಕ್ಷಕಿಯರ ಸದ್ದಿಲ್ಲದ ಕ್ರಾಂತಿ!

● ಚಿಕ್ಕಬಳ್ಳಾಪುರ

ನಗರಸಭೆ ಅಧಿಕಾರಿಗಳು ಎಷ್ಟೇ ಬೊಬ್ಬೆ ಹೊಡೆದರೂ, 'ಕಸಮುಕ್ತ ನಗರ'ದ ಘೋಷಣೆಗಳು ಗೋಡೆ ಬರಹಗಳಾದರೂ, ಜನರ ಬೇಜವಾಬ್ದಾರಿಯಿಂದಾಗಿ ಎಲ್ಲೆಂದರಲ್ಲಿ ಕಸ ಸುರಿಯುವ ಚಾಳಿ ಮಾತ್ರ ನಿಂತಿಲ್ಲ. ಆದರೆ, ನಗರದ ಸೌಂದರ್ಯಕ್ಕೆ ಕಪ್ಪುಚುಕ್ಕೆಯಂತಿದ್ದ ಈ ಕಸದ ರಾಶಿಗಳಿಗೆ ಸದ್ದಿಲ್ಲದೆ ಮುಕ್ತಿ ನೀಡುವ ನಿಟ್ಟಿನಲ್ಲಿ ನಗರಸಭೆಯ ಆರೋಗ್ಯ ನಿರೀಕ್ಷಕರು ಕೈಗೊಂಡಿರುವ ವಿಶಿಷ್ಟ ಕಾರ್ಯಾಚರಣೆ ಈಗ ಎಲ್ಲರ ಗಮನ ಸೆಳೆಯುತ್ತಿದೆ.



<u>ಹಬ್ಬದ ದಿನವೂ ಬಿಡುವಿಲ್ಲದ ಕಾಯಕ:</u> ನಗರದ ಸಾಧುಮಠ ರಸ್ತೆ ಸೇರಿದಂತೆ ಸರಿಸುಮಾರು 20ಕ್ಕೂ ಅಧಿಕ ಪ್ರದೇಶಗಳು ಕಸದ ತೊಟ್ಟಿಗಳಾಗಿ ಮಾರ್ಪಟ್ಟಿದ್ದವು. ಚಂದ್ರಮಾನ ಯುಗಾದಿ ಹಬ್ಬದ ಮರುದಿನ ಇಡೀ ನಗರ ಹಬ್ಬದ ಸಂಭ್ರಮದಲ್ಲಿದ್ದರೆ, ಆರೋಗ್ಯ ನಿರೀಕ್ಷಕಿಯರಾದ ರೇಖಾ ಮತ್ತು ಮುಕ್ತಾಂಬ ಅವರು ತಮ್ಮ ಸಿಬ್ಬಂದಿಯೊಂದಿಗೆ ಬೀದಿಗಿಳಿದಿದ್ದರು. ಕಸದ ರಾಶಿ ಬಿದ್ದಿದ್ದ ಸ್ಥಳಗಳನ್ನು ಸ್ವಚ್ಛಗೊಳಿಸಿ, ಅಲ್ಲಿ ಯಾರೂ ಕಸ ಸುರಿಯದಂತೆ ತಡೆಯಲು ವಿಶಿಷ್ಟ 'ದೇಶಿ' ತಂತ್ರ ಅನುಸರಿಸಿದ್ದಾರೆ.

<u>ಹಳೆಯ ಸೀರೆ, ಟಯರ್‌ಗಳೇ ಇಲ್ಲಿ ಅಲಂಕಾರಿಕ ವಸ್ತುಗಳು!</u> ನಾಗರಿಕರು ಎಲ್ಲೆಂದರಲ್ಲಿ ಎಸೆಯುವ ಹಳೆಯ ಸೀರೆಗಳು, ಹಳೆಯ ಸೈಕಲ್ ಹಾಗೂ ಕಾರಿನ ಟಯರ್‌ಗಳು ಮತ್ತು ಇಟ್ಟಿಗೆಗಳನ್ನೇ ಬಳಸಿಕೊಂಡು ಕಸದ ಜಾಗಗಳನ್ನು ಶೃಂಗರಿಸಲಾಗಿದೆ. "ಇಲ್ಲಿ ಯಾರೂ ಕಸ ಸುರಿಯಬಾರದು" ಎಂಬ ಎಚ್ಚರಿಕೆಯ ಘೋಷವಾಕ್ಯಗಳೊಂದಿಗೆ, ಆ ಸ್ಥಳಗಳನ್ನು ಆಕರ್ಷಕವಾಗಿ ನವೀಕರಿಸಲಾಗಿದೆ. ಈಗಾಗಲೇ ನಗರದ 21 ಪ್ರದೇಶಗಳಲ್ಲಿ ಇಂತಹ 'ಬ್ಲ್ಯಾಕ್ ಸ್ಪಾಟ್'ಗಳನ್ನು ಸೌಂದರ್ಯೀಕರಣಗೊಳಿಸಲಾಗಿದೆ ಎಂದು ಆರೋಗ್ಯ ನಿರೀಕ್ಷಕರು ಹೆಮ್ಮೆಯಿಂದ ಹೇಳುತ್ತಾರೆ.

<u>ಅನಧಿಕೃತ ಫ್ಲೆಕ್ಸ್, ಬ್ಯಾನರ್‌ಗಳ ಕಾಟ:</u> ನಗರದ ಅಂದ ಕೆಡಿಸಲು ಕೇವಲ ಕಸ ಮಾತ್ರವಲ್ಲ, ಎಲ್ಲೆಂದರಲ್ಲಿ ರಾರಾಜಿಸುವ ಅನಧಿಕೃತ ಫ್ಲೆಕ್ಸ್ ಹಾಗೂ ಬ್ಯಾನರ್‌ಗಳೂ ಕಾರಣವಾಗಿವೆ. ಅಧಿಕಾರಿಗಳು ಚಾಪೆ ಕೆಳಗೆ ತೂರಿದರೆ, ಜನ ರಂಗೋಲಿ ಕೆಳಗೆ ತೂರಿ ನಗರದ ಐತಿಹಾಸಿಕ ಕಟ್ಟಡ ಹಾಗೂ ಸಾರ್ವಜನಿಕ ಸ್ಥಳಗಳ ಮೇಲೆ ಬ್ಯಾನರ್ ಹಚ್ಚುತ್ತಿರುವುದು ಸೌಂದರ್ಯಕ್ಕೆ ಕೊಡಲಿ ಪೆಟ್ಟು ನೀಡುತ್ತಿದೆ. ಹೋಟೆಲ್ ಮತ್ತು ಅಂಗಡಿ ಮುಂಗಟ್ಟುಗಳ ಮಾಲೀಕರು ಪ್ಲಾಸ್ಟಿಕ್ ತ್ಯಾಜ್ಯವನ್ನು ರಸ್ತೆಗೆ ಎಸೆಯುತ್ತಿರುವುದು ಕಪ್ಪು ಚುಕ್ಕೆಯಾಗಿ ಪರಿಣಮಿಸಿದೆ.

<u>ಸಾರ್ವಜನಿಕರ ಸಾಮಾಜಿಕ ಬದ್ಧತೆ ಅಗತ್ಯ:</u> ನಗರಸಭೆ ಸಹಾಯಕ ಕಾರ್ಯಪಾಲಕ ಅಭಿಯಂತರ ಉಮಾಶಂಕರ್, ಆರೋಗ್ಯ ನಿರೀಕ್ಷಕರುಗಳಾದ ಮುಕ್ತಾಂಬ, ರೇಖಾ ಹಾಗೂ ಸಹಾಯಕರಾದ ನವೀನ್, ರಾಜಶೇಖರ್ ತಂಡ ಹಗಲಿರುಳು ಶ್ರಮಿಸುತ್ತಿದೆ. ಆದರೆ, ನಗರ ಸ್ವಚ್ಛವಾಗಿರಬೇಕಾದರೆ ಸಾರ್ವಜನಿಕರ ಸಹಕಾರ ಅತಿ ಮುಖ್ಯ. ಕೇವಲ ಅಧಿಕಾರಿಗಳ ಮೇಲೆ ಗೂಬೆ ಕೂರಿಸುವ ಬದಲು, ಸಾರ್ವಜನಿಕರೇ ಜಾಗೃತರಾಗಿ ಕಸ ವಿಲೇವಾರಿಗೆ ಸಹಕರಿಸಬೇಕಿದೆ.



## ಮುಖ್ಯಮಂತ್ರಿ ಸಿದ್ದರಾಮಯ್ಯ ಇನ್ನೂ ಎರಡು ಬಜೆಟ್ ಮಂಡಿಸುತ್ತಾರೆ

ಬೆಂಗಳೂರು

ನಾಯಕತ್ವ ಬದಲಾವಣೆ ಎಂಬ ಉರಿಯುವ ಬೆಂಕಿಗೆ ತುಪ್ಪ ಸುರಿಯುವಂತೆ ಸಚಿವ ಜಮೀರ್ ಅಹಮದ್ ಖಾನ್ ಮುಂದಿನ ಎರಡು ವರ್ಷಗಳ ಕಾಲ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೇ ಬಜೆಟ್ ಮಂಡಿಸುತ್ತಾರೆ ಎಂದು ಹೇಳಿದ್ದಾರೆ.ಬಿಜೆಪಿಯ ಶಾಸಕ ವಿ.ಸುನೀಲ್‌ಕುಮಾರ್ 2026–27ನೇ ಸಾಲಿಗೆ ಬಜೆಟ್ ಮೇಲಿನ ಚರ್ಚೆಯಲ್ಲಿ ಭಾಗವಹಿಸಿ, ಸಿದ್ದರಾಮಯ್ಯ ವಿತ್ತ ತಜ್ಞ ಅಷ್ಟೆ ಅಲ್ಲ. ಆರ್ಥಿಕ ತಜ್ಞ ಕೂಡ ಆಗಿದ್ದಾರೆ. ಈ ಬಾರಿಯ ಬಜೆಟ್‌ನಲ್ಲಿ ಹೊಸ ಹೊಸ ಪದಗಳನ್ನು ಬಳಸಿದ್ದಾರೆ. ಅವುಗಳನ್ನು ನಮಗೆ ಅರ್ಥ ಮಾಡಿಕೊಳ್ಳಲು ಕಷ್ಟವಾಗುತ್ತಿದೆ. ಟ್ರೊಟಿಂಗ್ ಎಕನಾಮಿ, 11ಜಿ, ಫಲಧಾರೆ, ಭಿಷತತ್ವ, ಬೆಂಕಿಯನ್ನು ಬೆಳಕಾಗಿಸುವುದು ಸೇರಿದಂತೆ ಹಲವಾರು ಪದಗಳು ಬಳಕೆಯಾಗಿದೆ. ಇವುಗಳನ್ನು ಅರ್ಥಮಾಡಿಕೊಳ್ಳಬೇಕಾದರೆ ಮುಂದಿನ ಬಜೆಟ್ ವೇಳೆ ಶಬ್ದಕೋಶವನ್ನು ಕೊಟ್ಟುಬಿಡಿ ಎಂದರು. ಸಭಾಧ್ಯಕ್ಷರು ಈಗ ಶಬ್ದಕೋಶದ ಅಗತ್ಯವಿದೆ ಎಂದು ಕೇಳಿದರು, ನಿಮ್ಮ ಕಚೇರಿಯ ಸಹಾಯದಿಂದ ಈ ಬಜೆಟ್ಟಿನಲ್ಲಿರುವ ಹೊಸ ಪದಗಳನ್ನು ಅರ್ಥಮಾಡಿಕೊಂಡಿದ್ದೇನೆ ಎಂದ ಸುನೀಲ್ ಕುಮಾರ್, ಮುಂದಿನ ಬಾರಿಯೂ ಸಿದ್ದರಾಮಯ್ಯ ಅವರೇ ಬಜೆಟ್ ಮಂಡಿಸಿದರೆ ಆಗ ಶಬ್ದಕೋಶ ಬೇಕಾಗಬಹುದು ಎಂದರು.

## ಕೆಎಸ್‌ಆರ್‌ಟಿಸಿ ಚಾಲಕನ ಕುಟುಂಬ ಬೀದಿಗೆ!



ದೊಡ್ಡಬಳ್ಳಾಪುರ

"ವೈದ್ಯರ ಸಲಹೆಯಂತೆ ಶಸ್ತ್ರಚಿಕಿತ್ಸೆ ಪಡೆದು ವಿಶ್ರಾಂತಿಯಲ್ಲಿದ್ದರೂ, ರಜೆ ಮಂಜೂರು ಮಾಡದೆ ಮೂರು ತಿಂಗಳ ಸಂಬಳ ತಡೆಹಿಡಿಯಲಾಗಿದೆ. ಇದರಿಂದ ನನ್ನ ಇಡೀ ಕುಟುಂಬ ಆರ್ಥಿಕ ಸಂಕಷ್ಟಕ್ಕೆ ಸಿಲುಕಿದೆ" ಎಂದು ಕೆ.ಎಸ್.ಆರ್.ಟಿ.ಸಿ. ಚಾಲಕ ಎಚ್.ಸಿ. ಮಂಜುನಾಥ್ ತಮ್ಮ ಅಳಲು ತೋಡಿಕೊಂಡಿದ್ದಾರೆ.

<u>ಘಟನೆಯ ಹಿನ್ನೆಲೆ:</u> ತಾಲ್ಲೂಕಿನ ಹಾಡೋನಹಳ್ಳಿ ನಿವಾಸಿಯಾದ ಎಚ್.ಸಿ. ಮಂಜುನಾಥ್ ದೊಡ್ಡಬಳ್ಳಾಪುರ ಡಿಪೋದಲ್ಲಿ ಚಾಲಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಇತ್ತೀಚೆಗೆ ಅವರಿಗೆ ವೃಷಣಗಳ ಶಸ್ತ್ರಚಿಕಿತ್ಸೆಯಾಗಿದ್ದು, ವೈದ್ಯರು ಕಡ್ಡಾಯವಾಗಿ ಮೂರು ತಿಂಗಳು ವಿಶ್ರಾಂತಿ ಪಡೆಯಲು ಸೂಚಿಸಿದ್ದರು. ಶಸ್ತ್ರಚಿಕಿತ್ಸೆಯ ನಂತರ ನಡೆಯಲು ಅಥವಾ ಕುಳಿತುಕೊಳ್ಳಲು ಸಾಧ್ಯವಾಗದ ಸ್ಥಿತಿಯಲ್ಲಿದ್ದ ಕಾರಣ ಅವರು ಮನೆಯಲ್ಲಿಯೇ ಉಳಿಯಬೇಕಾಯಿತು.

ದಿನಾಂಕ 20–04–2025ರಂದು ಮಂಜುನಾಥ್ ಅವರ ಪತ್ನಿ ಡಿಪೋಗೆ ಭೇಟಿ ನೀಡಿ ವೈದ್ಯಕೀಯ ಪ್ರಮಾಣಪತ್ರ ಮತ್ತು ರಜೆ ಚೀಟಿಯನ್ನು ನೀಡಿದ್ದರು. "ನನ್ನ ಮಡದಿ ರಜೆ ಚೀಟಿ ನೀಡಿದ್ದರೂ ಸಹ, ಅಂದಿನ ಡಿಪೋ ಮ್ಯಾನೇಜರ್ ವೈದ್ಯಕೀಯ ರಜೆ ಮಂಜೂರು ಮಾಡದೆ 'ಗೈರು ಹಾಜರಿ' ಎಂದು ನಮೂದಿಸಿದ್ದಾರೆ. ಇದರಿಂದ ಸತತ ಮೂರು ತಿಂಗಳಿನಿಂದ ನನಗೆ ಸಂಬಳ ಬಂದಿಲ್ಲ," ಎಂದು ಮಂಜುನಾಥ್ ನೋವು ವ್ಯಕ್ತಪಡಿಸಿದ್ದಾರೆ.

ಸಂಬಳದ ಮೇಲೆ ಸಾಲ ಮಾಡಿದ್ದ ಮಂಜುನಾಥ್ ಅವರಿಗೆ ಈಗ ಬ್ಯಾಂಕ್‌ನಿಂದಲೂ ಸಂಕಷ್ಟ ಎದುರಾಗಿದೆ. ಸಂಬಳ ಬಾರದಿರುವ ಕಾರಣ ಬ್ಯಾಂಕ್‌ನವರು ಅವರ ಖಾತೆಯನ್ನು 'ಫ್ರೀಜ್' ಮಾಡಿದ್ದಾರೆ. "ವಯಸ್ಸಾದ ತಂದೆ–ತಾಯಿ, ಹೆಂಡತಿ ಮತ್ತು ಇಬ್ಬರು ಮಕ್ಕಳನ್ನು ಸಾಕುವುದು ಕಷ್ಟವಾಗಿದೆ. ಹಣವಿಲ್ಲದೆ ಸಂಸಾರ ನಡೆಸುವುದು ಸಾಧ್ಯವಾಗುತ್ತಿಲ್ಲ, ಮಡದಿ ಮಕ್ಕಳು ಆತ್ಮಹತ್ಯೆಯ ಮಾತುಗಳನ್ನಾಡುತ್ತಿದ್ದಾರೆ" ಎಂದು ಅವರು ಕಣ್ಣೀರಿಟ್ಟಿದ್ದಾರೆ. ಸಂಬಳದ ಮೇಲೆ ಸಾಲ ಮಾಡಿದ್ದ ಮಂಜುನಾಥ್ ಅವರಿಗೆ ಈಗ ಬ್ಯಾಂಕ್‌ನಿಂದಲೂ ಸಂಕಷ್ಟ ಎದುರಾಗಿದೆ. ಸಂಬಳ ಬಾರದಿರುವ ಕಾರಣ ಬ್ಯಾಂಕ್‌ನವರು ಅವರ ಖಾತೆಯನ್ನು 'ಫ್ರೀಜ್' ಮಾಡಿದ್ದಾರೆ. "ವಯಸ್ಸಾದ ತಂದೆ–ತಾಯಿ, ಹೆಂಡತಿ ಮತ್ತು ಇಬ್ಬರು ಮಕ್ಕಳನ್ನು ಸಾಕುವುದು ಕಷ್ಟವಾಗಿದೆ. ಹಣವಿಲ್ಲದೆ ಸಂಸಾರ ನಡೆಸುವುದು ಸಾಧ್ಯವಾಗುತ್ತಿಲ್ಲ, ಮಡದಿ ಮಕ್ಕಳು ಆತ್ಮಹತ್ಯೆಯ ಮಾತುಗಳನ್ನಾಡುತ್ತಿದ್ದಾರೆ" ಎಂದು ಅವರು ಕಣ್ಣೀರಿಟ್ಟಿದ್ದಾರೆ.

ಈ ಕುರಿತು ಪ್ರತಿಕ್ರಿಯಿಸಿದ ಹಾಲಿ ಡಿಪೋ ವ್ಯವಸ್ಥಾಪಕ ಲಕ್ಷ್ಮೀಪತಿ, "ನಾನು ಈ ಘಟಕಕ್ಕೆ ಬಂದು ಕೇವಲ ಒಂದು ವಾರವಾಗಿದೆ. ಮಂಜುನಾಥ್ ಅವರ ಪ್ರಕರಣದ ಬಗ್ಗೆ ಸಂಪೂರ್ಣ ಮಾಹಿತಿ ಪಡೆದು, ವೈದ್ಯಕೀಯ ರಜೆಯ ಕುರಿತು ವಿಚಾರಣೆ ನಡೆಸಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು," ಎಂದು ತಿಳಿಸಿದ್ದಾರೆ.

## ಚುನಾವಣಾ ಪರ್ವ ಶುರು!

ರಾಮನಗರ

ತಾಲ್ಲೂಕಿನ ಪ್ರತಿಷ್ಠಿತ 'ಬಿಡದಿ ವಿವಿಧೋದ್ದೇಶ ಪ್ರಾಥಮಿಕ ಗ್ರಾಮೀಣ ಕೃಷಿ ಸಹಕಾರ ಸಂಘ'ದ ಮುಂದಿನ 5 ವರ್ಷಗಳ ಅವಧಿಯ ಆಡಳಿತ ಮಂಡಳಿ ಸದಸ್ಯರ ಚುನಾವಣೆಯು ಏಪ್ರಿಲ್ 12ರಂದು ನಡೆಯಲಿದೆ ಎಂದು ರಿಟರ್ನಿಂಗ್ ಅಧಿಕಾರಿ ಬಿ.ಕೆ. ಮಂಜುನಾಥ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. <u>ಚುನಾವಣಾ ವೇಳಾಪಟ್ಟಿ ಹೀಗಿದೆ:</u>

ನಾಮಪತ್ರ ಸಲ್ಲಿಕೆ ಆರಂಭ ಏಪ್ರಿಲ್ 1, ಬುಧವಾರ (ಬೆಳಿಗ್ಗೆ 10 ರಿಂದ ಸಂಜೆ 3ರ ವರೆಗೆ). ನಾಮಪತ್ರ ಸಲ್ಲಿಸಲು ಕೊನೆಯ ದಿನ ಏಪ್ರಿಲ್ 4. ಪರಿಶೀಲನೆ ಏಪ್ರಿಲ್ 5, ಭಾನುವಾರ ಬೆಳಿಗ್ಗೆ 11 ಗಂಟೆಗೆ. ಹಿಂಪಡೆಯಲು ಕೊನೆಯ ದಿನ ಏಪ್ರಿಲ್ 6, ಮಧ್ಯಾಹ್ನ 3 ಗಂಟೆಯವರೆಗೆ. ಮತದಾನ ಏಪ್ರಿಲ್ 12, ಭಾನುವಾರ (ಬೆಳಿಗ್ಗೆ 10 ರಿಂದ ಸಂಜೆ 4ರ ವರೆಗೆ). ಫಲಿತಾಂಶ ಮತದಾನ ಮುಗಿದ ನಂತರ ಅಂದೇ ಮತ ಎಣಿಕೆ ನಡೆಸಿ ಫಲಿತಾಂಶ ಘೋಷಿಸಲಾಗುವುದು. <u>ಸ್ಥಳ ನಿಗದಿ:</u> ಬಿಡದಿಯ ಛತ್ರದ ಬಾನಂದೂರು ರಸ್ತೆಯಲ್ಲಿರುವ ಬಿ.ಜಿ.ಎಸ್. ಪದವಿ ಪೂರ್ವ ಕಾಲೇಜಿನಲ್ಲಿ ಮತದಾನ ಪ್ರಕ್ರಿಯೆ ನಡೆಯಲಿದೆ.

## ಉಮೇಶ್ ಆರ್.ಗೆ ಗೌರವ ಡಾಕ್ಟರೇಟ್

ದೊಡ್ಡಬಳ್ಳಾಪುರ



ನಗರದ ಸಾಯಿ ವಿದ್ಯಾ ಇನ್ಸಿಟ್ಯೂಟ್ ಆಫ್ ಟೆಕ್ನಾಲಜಿ ಸ್ನಾತಕೋತ್ತರ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಉಮೇಶ್ ಆರ್. ಅವರು ಮಂಡಿಸಿದ ಮಹಾಪ್ರಬಂಧಕ್ಕೆ ಬೆಂಗಳೂರು ವಿಶ್ವವಿದ್ಯಾಲಯವು ಪಿಎಚ್.ಡಿ ಪದವಿ ನೀಡಿ ಗೌರವಿಸಿದೆ.

<u>ಸಂಶೋಧನಾ ವಿಷಯ ಮತ್ತು ಮಾರ್ಗದರ್ಶನ:</u> ಡಾ. ಉಮೇಶ್ ಆರ್. ಅವರು ಬೆಂಗಳೂರು ವಿಶ್ವವಿದ್ಯಾಲಯದ ನಿರ್ವಹಣಾ ವಿಭಾಗದ ನಿರ್ದೇಶಕರು ಹಾಗೂ ಪ್ರಾಧ್ಯಾಪಕರಾದ ಡಾ. ವೈ. ನಾಗರಾಜು ಅವರ ಮಾರ್ಗದರ್ಶನದಲ್ಲಿ ಸಂಶೋಧನೆ ನಡೆಸಿದ್ದರು. "ನೇರ ಲಾಭ ವರ್ಗಾವಣೆ (ಆಃಖ) ಯೋಜನೆಗಳ ಮೂಲಕ ಬ್ಯಾಂಕ್ ಸೌಲಭ್ಯವಿಲ್ಲದವರಿಗೆ ಬ್ಯಾಂಕಿಂಗ್ ಸೇವೆ: ಬೆಂಗಳೂರು ಗ್ರಾಮೀಣ ಜಿಲ್ಲೆಯಲ್ಲಿನ ಒಂದು ಅಧ್ಯಯನ" ಎಂಬ ವಿಷಯದ ಕುರಿತು ಅವರು ಮಂಡಿಸಿದ ಪ್ರಬಂಧವನ್ನು ವಿಶ್ವವಿದ್ಯಾಲಯವು ಅಂಗೀಕರಿಸಿದೆ.

<u>ಶೈಕ್ಷಣಿಕ ಸಾಧನೆಗೆ ಅಭಿನಂದನೆ:</u> ಡಾಕ್ಟರೇಟ್ ಪದವಿಗೆ ಭಾಜನರಾದ ಡಾ. ಉಮೇಶ್ ಆರ್. ಅವರನ್ನು ಸಾಯಿ ವಿದ್ಯಾ ತಾಂತ್ರಿಕ ಶಿಕ್ಷಣ ಸಂಸ್ಥೆಯ ಪ್ರಾಂಶುಪಾಲರು, ವಿವಿಧ ವಿಭಾಗಗಳ ಮುಖ್ಯಸ್ಥರು, ಪ್ರಾಧ್ಯಾಪಕರು ಮತ್ತು ಸಿಬ್ಬಂದಿ ವರ್ಗದವರು ಅಭಿನಂದಿಸಿ, ಅವರ ಮುಂದಿನ ಶೈಕ್ಷಣಿಕ ವೃತ್ತಿಜೀವನಕ್ಕೆ ಶುಭ ಹಾರೈಸಿದ್ದಾರೆ.

## 24ಕ್ಕೆ ರಾಷ್ಟ್ರೀಯ ವಿಚಾರ ಸಂಕಿರಣ

ರಾಮನಗರ

ಕನಕಪುರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ವತಿಯಿಂದ ಐಸಿಎಸ್‌ಎಸ್‌ಆರ್ ಸಹಯೋಗದೊಂದಿಗೆ ಇದೇ 24ರಂದು 'ಜಿಎಸ್‌ಟಿ ಸುಧಾರಣೆಗಳು ಮತ್ತು ಭಾರತದ ಬೆಳವಣಿಗೆ ಪಥ: ಕ್ಷೇತ್ರವಾರು ಅವಕಾಶಗಳು ಮತ್ತು ಸವಾಲುಗಳು' ಎಂಬ ವಿಷಯದ ಕುರಿತು ಒಂದು ದಿನದ ರಾಷ್ಟ್ರೀಯ ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಗಿದೆ.

<u>ತಜ್ಞರಿಂದ ವಿಚಾರ ಮಂಥನ:</u> ಕಾಲೇಜಿನ ಕುವೆಂಪು ಸಭಾಂಗಣದಲ್ಲಿ ನಡೆಯಲಿರುವ ಈ ಕಾರ್ಯಕ್ರಮವನ್ನು ತಮಿಳುನಾಡಿನ ಖ್ಯಾತ ವಾಣಿಜ್ಯ ಶಾಸ್ತ್ರ ಪ್ರಾಧ್ಯಾಪಕ ಡಾ. ಕೆ. ಸೆಲ್ವ ಸುಂದರಂ ಅವರು ಉದ್ಘಾಟಿಸಲಿದ್ದಾರೆ. ಬೆಂಗಳೂರು ವಿಶ್ವವಿದ್ಯಾಲಯದ ಹಿರಿಯ ಪ್ರಾಧ್ಯಾಪಕ ಡಾ. ಎಸ್.ಆರ್. ಕೇಶವ ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ.

ಬೆಂಗಳೂರಿನ ಆರ್.ಸಿ. ಕಾಲೇಜಿನ ಪ್ರಾಂಶುಪಾಲ ಎಜಾಜ್ ಅಹ್ಮದ್ ಖಾನ್ ಅವರು ಜಿಎಸ್‌ಟಿಯ ಪರಿಣಾಮಗಳು, ಅದರಿಂದ ದೊರೆಯುವ ಅವಕಾಶಗಳು ಮತ್ತು ಎದುರಾಗುತ್ತಿರುವ ಸವಾಲುಗಳ ಕುರಿತು ವಿಶೇಷ ಉಪನ್ಯಾಸ ನೀಡಲಿದ್ದಾರೆ ಎಂದು ಕಾಲೇಜಿನ ಪ್ರಾಚಾರ್ಯರಾದ ಡಾ. ಬಿ. ಶಾಮಲಾ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

<u>ಶೈಕ್ಷಣಿಕ ಸಂವಾದಕ್ಕೆ ವೇದಿಕೆ:</u> ಈ ಕಾರ್ಯಾಗಾರದಲ್ಲಿ ವಿವಿಧ ಕಾಲೇಜುಗಳ ವಿದ್ಯಾರ್ಥಿಗಳು, ಅಧ್ಯಾಪಕರು ಹಾಗೂ ಸಂಶೋಧಕರು ಭಾಗವಹಿಸಿ ಜಿಎಸ್‌ಟಿ ವ್ಯವಸ್ಥೆಯ ಆರ್ಥಿಕ ಪರಿಣಾಮಗಳ ಕುರಿತು ಸಕ್ರಿಯ ಚರ್ಚೆಯಲ್ಲಿ ತೊಡಗಲಿದ್ದಾರೆ. ಭಾರತದ ಆರ್ಥಿಕ

## 25ರಂದು ಒಳಮೀಸಲಾತಿ ವಿರೋಧಿಸಿ ಶಕ್ತಿ ಪ್ರದರ್ಶನ



ಕೋಲಾರ

"ಬಲಗೈ ಸಮುದಾಯಕ್ಕೆ ಆಗುತ್ತಿರುವ ಅನ್ಯಾಯವನ್ನು ಸರಿಪಡಿಸುವಂತೆ ಒತ್ತಾಯಿಸಿ ಮಾರ್ಚ್ 25ರ ಬುಧವಾರ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಜ್ಞಾನಪ್ರಕಾಶ್ ಸ್ವಾಮೀಜಿಗಳ ನೇತೃತ್ವದಲ್ಲಿ ಬೃಹತ್ ಸಮಾವೇಶ ಹಮ್ಮಿಕೊಳ್ಳಲಾಗಿದೆ. ಜಿಲ್ಲೆಯ ಬಲಗೈ ಸಮುದಾಯದ ಬಂಧುಗಳು ಸ್ವಯಂಪ್ರೇರಿತರಾಗಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕು," ಎಂದು ದಮನಿತರ ಸೇವಾ ಸಮಿತಿ ರಾಜ್ಯ ಅಧ್ಯಕ್ಷ ಮೇಡಿಹಾಳ ಮುನಿಅಂಜಿನಪ್ಪ ಮನವಿ ಮಾಡಿದರು.

ನಗರದ ನಚಿಕೇತನ ನಿಲಯದ ಬುದ್ಧ ಮಂದಿರದಲ್ಲಿ ಶನಿವಾರ ನಡೆದ ಪೂರ್ವಭಾವಿ ಸಭೆಯಲ್ಲಿ ಅವರು ಮಾತನಾಡಿದರು.

<u>ನಾಗಮೋಹನ್ ದಾಸ್ ವರದಿ ತಿರಸ್ಕರಿಸಲು ಒತ್ತಾಯ:</u> ನ್ಯಾಯಮೂರ್ತಿ ಎಚ್.ಎನ್. ನಾಗಮೋಹನ್ ದಾಸ್ ಆಯೋಗದ ವರದಿ ಅವೈಜ್ಞಾನಿಕವಾಗಿದೆ ಎಂದು ಕಿಡಿಕಾರಿದ ಮುನಿಅಂಜಿನಪ್ಪ, "ಇಷ್ಟು ದಿನ ಹೊಲೆಯ ಮತ್ತು ಮಾದಿಗರು ಸಹೋದರರಂತೆ ಇದ್ದೆವು. ಆದರೆ ಈ ವರದಿ ಮನಸ್ಸುಗಳ ಮಧ್ಯೆ ಬೆಂಕಿ ಹಚ್ಚುವ ಕೆಲಸ ಮಾಡಿದೆ. ಒಳಮೀಸಲಾತಿ ಆಯೋಗದ ವರದಿಯನ್ನು ರಾಜ್ಯ ಸರ್ಕಾರ ಯಾವುದೇ ಕಾರಣಕ್ಕೂ ಜಾರಿ ಮಾಡಬಾರದು," ಎಂದು ಆಗ್ರಹಿಸಿದರು.

<u>ಜನಸಂಖ್ಯೆ ಲೆಕ್ಕಾಚಾರದಲ್ಲಿ ವ್ಯತ್ಯಾಸ ಮಕ್ಕಳ ಭವಿಷ್ಯಕ್ಕೆ ಕಂಟಕ:</u> ದರಕಾಸ್ತು ಸಮಿತಿ ಸದಸ್ಯ ಖಾದ್ರಿಪುರ ಬಾಬು ಮಾತನಾಡಿ, "ರಾಜ್ಯದಲ್ಲಿ 30 ಲಕ್ಷಕ್ಕೂ ಅಧಿಕ ಇರುವ ಬಲಗೈ ಸಮಾಜದ ಜನಸಂಖ್ಯೆಯನ್ನು 24 ಲಕ್ಷಕ್ಕೆ ಇಳಿಸಿರುವುದು ಸರಿಯಲ್ಲ. ಸಮೀಕ್ಷೆಯಲ್ಲಿ ಸರಿಯಾದ ಮಾಹಿತಿ ದಾಖಲಾಗದ ಕಾರಣ ಪ್ರಾದೇಶಿಕವಾಗಿ ಜಾತಿ ನಮೂದನೆಯಲ್ಲಿ ಭಿನ್ನತೆ ಉಂಟಾಗಿದೆ.

## ಕಣ್ಮನ ಸೆಳೆದ ನೀರು ಬಂಡಿಗಳ ಮೆರವಣಿಗೆ

ದೊಡ್ಡಬಳ್ಳಾಪುರ

ಯುಗಾದಿ ಹಬ್ಬದ ಸಡಗರದ ಬೆನ್ನಲ್ಲೇ ಗೌರಿಬಿದನೂರು ತಾಲ್ಲೂಕಿನ ಪೂಜಾರಹಳ್ಳಿ ಗ್ರಾಮದಲ್ಲಿ ಶನಿವಾರ ಶ್ರೀ ವೀರ ತಿಪ್ಪಯ್ಯಸ್ವಾಮಿ ಜಾತ್ರಾ ಮಹೋತ್ಸವವು ಅತ್ಯಂತ ವೈಭವದಿಂದ ಜರುಗಿತು. ಈ ಸಾಂಪ್ರದಾಯಿಕ ಉತ್ಸವದಲ್ಲಿ ದೊಡ್ಡಬಳ್ಳಾಪುರ ತಾಲ್ಲೂಕಿನ ತೂಬಗೆರೆ ಹೋಬಳಿಯ ಕೆಳಗಿನ ಜೂಗಾನಹಳ್ಳಿ ಸೇರಿದಂತೆ ಸುತ್ತಮುತ್ತಲಿನ ಗ್ರಾಮಗಳ ಸಾವಿರಾರು ಭಕ್ತರು ಭಾಗವಹಿಸಿ ಭಕ್ತಿಭಾವ ಮೆರೆದರು.

<u>ಜಾತ್ರೆಯ ಆಕರ್ಷಣೆ ನೀರು ಬಂಡಿಗಳ ಸಡಗರ:</u> ಜಾತ್ರೆಯ ಪ್ರಮುಖ ಆಕರ್ಷಣೆಯಾಗಿದ್ದ ಅಲಂಕಾರಿಕ ನೀರು ಬಂಡಿಗಳ ಮೆರವಣಿಗೆ ಜನಸಾಗರದ ಕಣ್ಮನ ಸೆಳೆಯಿತು. ರೈತರು ತಮ್ಮ ನೆಚ್ಚಿನ ಎತ್ತುಗಳನ್ನು ಬಣ್ಣ ಬಣ್ಣದ ಹೂವುಗಳು ಹಾಗೂ ಆಭರಣಗಳಿಂದ ಸಿಂಗರಿಸಿದ್ದರು. ಬಣ್ಣಬಣ್ಣದ ಅಲಂಕಾರಗಳಿಂದ ಸಜ್ಜುಗೊಂಡ ಎತ್ತುಗಳು, ಕಳಸ ಹೊತ್ತ ನೀರು ಬಂಡಿಗಳು



ಗ್ರಾಮೀಣ ಸಂಸ್ಕೃತಿ ಮತ್ತು ರೈತರ ಜೀವನಶೈಲಿಯನ್ನು ಪ್ರತಿಬಿಂಬಿಸಿದವು. ರೈತರು ಭಕ್ತಿಭಾವದಿಂದ ನೀರು ಬಂಡಿಗಳನ್ನು ಹೊಡೆದುಕೊಂಡು ಹೋಗುತ್ತಿದ್ದ ದೃಶ್ಯ ಜಾತ್ರೆಯ ಸೊಬಗನ್ನು ಇಮ್ಮಡಿಗೊಳಿಸಿತ್ತು.

<u>ಸೌಹಾರ್ದತೆಯ ಪ್ರತೀಕ:</u> ಜಾತ್ರೆಯ ಅಂಗವಾಗಿ ಭಕ್ತಾದಿಗಳಿಗೆ ಮಜ್ಜಿಗೆ ಮತ್ತು ಪಾನಕ ವಿತರಣೆ ಮಾಡಲಾಯಿತು. ಅಪಾರ ಜನಸ್ತೋಮದ ನಡುವೆ ನಡೆದ ಈ ಉತ್ಸವವು ಸಮಾಜದಲ್ಲಿ ಒಗ್ಗಟ್ಟು ಮತ್ತು ಸಂಸ್ಕೃತಿಯ ಮೌಲ್ಯಗಳನ್ನು ಎತ್ತಿ ಹಿಡಿಯುವಲ್ಲಿ ಯಶಸ್ವಿಯಾಯಿತು.

ಈ ಸಂದರ್ಭದಲ್ಲಿ ಮಾಜಿ ಶಾಸಕ ನಿಸರ್ಗ ನಾರಾಯಣಸ್ವಾಮಿ, ಗ್ರಾಮ ಪಂಚಾಯಿತಿ ಮಾಜಿ ಸದಸ್ಯೆ ರಾಧಾ ಮಂಜುನಾಥ್, ಮುಖಂಡರಾದ ಕುಮಾರ್, ವೀರತಿಪ್ಪಯ್ಯ ದೇವರಾಜ್ ಹಾಗೂ ಸಾವಿರಾರು ಭಕ್ತರು ಉಪಸ್ಥಿತರಿದ್ದು, ದೇವರ ದರ್ಶನ ಪಡೆದು ಧನ್ಯತೆ ಮೆರೆದರು.

## 'ಸೋಲಿಗೆ ಎದೆಗುಂದದೆ ಗುರಿಯತ್ತ ಸಾಗಿದರೆ ಯಶಸ್ಸು ಖಚಿತ'

ಶಿಡ್ಲಘಟ್ಟ

"ಯಾವುದೇ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಯಶಸ್ಸು ಗಳಿಸಲು ಕಠಿಣ ಪರಿಶ್ರಮ ಮತ್ತು ಶ್ರದ್ಧೆ ಅತಿ ಮುಖ್ಯ. ಸೋಲುಗಳು ಎದುರಾದಾಗ ಎದೆಗುಂದದೆ ಗುರಿಯತ್ತ ಸಾಗಿದರೆ ಖಂಡಿತವಾಗಿಯೂ ಗೆಲುವು ನಮ್ಮದಾಗುತ್ತದೆ," ಎಂದು ಯುಪಿಎಸ್‌ಸಿ ರ‍್ಯಾಂಕ್ ವಿಜೇತ ಡಾ. ವರುಣ್ ಗೌಡ ಅವರು ಯುವಜನತೆಗೆ ಕರೆ ನೀಡಿದರು.

ತಾಲೂಕಿನ ಮೇಲೂರು ಗ್ರಾಮದಲ್ಲಿ ಶಾಸಕ ಬಿ.ಎನ್. ರವಿಕುಮಾರ್ ಅವರ ನೇತೃತ್ವದಲ್ಲಿ ಹಮ್ಮಿಕೊಳ್ಳಲಾಗಿದ್ದ ಅಭಿನಂದನಾ ಸಮಾರಂಭದಲ್ಲಿ ಸನ್ಮಾನ ಸ್ವೀಕರಿಸಿ ಅವರು ಮಾತನಾಡಿದರು.

<u>ಸೋಲೇ ಗೆಲುವಿನ ಮೆಟ್ಟಿಲು:</u> ತಮ್ಮ ಯಶಸ್ಸಿನ ಹಾದಿಯನ್ನು ಮೆಲುಕು ಹಾಕಿದ ಡಾ. ವರುಣ್, "ಇದು ನನ್ನ ಮೂರನೇ ಪ್ರಯತ್ನವಾಗಿತ್ತು. ಮೊದಲ ಎರಡು ಪ್ರಯತ್ನಗಳಲ್ಲಿ ವಿಫಲನಾದಾಗಲೂ ನನ್ನ ಕುಟುಂಬ ನೀಡಿದ ಬೆಂಬಲ ಮತ್ತು ನನ್ನ ಮೇಲಿದ್ದ ಆತ್ಮವಿಶ್ವಾಸ ನನ್ನನ್ನು ಇಂದು ಈ ಮಟ್ಟಕ್ಕೆ ತಂದು ನಿಲ್ಲಿಸಿದೆ. ಸಾಧನೆಗೆ ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡರೇ ನನಗೆ ಸ್ಫೂರ್ತಿ," ಎಂದು ಭಾವುಕರಾಗಿ ನುಡಿದರು.

<u>ಅವಳಿ ಜಿಲ್ಲೆಯ ಕೀರ್ತಿ ಪತಾಕೆ:</u> ಶಾಸಕ ಬಿ.ಎನ್. ರವಿಕುಮಾರ್ ಮಾತನಾಡಿ, "ಯುಪಿಎಸ್‌ಸಿ ಪರೀಕ್ಷೆಯಲ್ಲಿ ರಾಷ್ಟ್ರ ಮಟ್ಟದಲ್ಲಿ 462ನೇ ಹಾಗೂ ರಾಜ್ಯ ಮಟ್ಟದಲ್ಲಿ 7ನೇ ಶ್ರೇಯಾಂಕ ಪಡೆಯುವ ಮೂಲಕ ವರುಣ್ ಗೌಡ ಅವರು ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳಿಗೆ ಕೀರ್ತಿ ತಂದಿದ್ದಾರೆ. ಒಬ್ಬ ಸಾಮಾನ್ಯ ಪೊಲೀಸ್ ಅಧಿಕಾರಿ ಪ್ರಕಾಶ್ ಗೌಡ ಅವರ ಪುತ್ರನಾಗಿ, ವೈದ್ಯಕೀಯ ವೃತ್ತಿಯ ನಡುವೆಯೂ ಇಂತಹ ಕಠಿಣ ಪರೀಕ್ಷೆಯಲ್ಲಿ ಸಾಧನೆ ಮಾಡಿರುವುದು ಗ್ರಾಮೀಣ ಪ್ರತಿಭೆಗಳಿಗೆ ಮಾದರಿಯಾಗಿದೆ," ಎಂದು ಹರ್ಷ ವ್ಯಕ್ತಪಡಿಸಿದರು.



<u>ಗ್ರಾಮೀಣ ಹಾದಿಯಿಂದ ರಾಷ್ಟ್ರ ಮಟ್ಟಕ್ಕೆ:</u> ಶಿಡ್ಲಘಟ್ಟ, ಮಂಚೇನಹಳ್ಳಿ, ಚಿಂತಾಮಣಿ ಹಾಗೂ ಮೂಡುಬಿದಿರೆಯಂತಹ ಪ್ರದೇಶಗಳಲ್ಲಿ ಓದಿ, ಕೊಪ್ಪಳದ ಸರ್ಕಾರಿ ವೈದ್ಯಕೀಯ ಕಾಲೇಜಿನಲ್ಲಿ ಎಂಬಿಬಿಎಸ್ ಪದವಿ ಪಡೆದಿರುವ ವರುಣ್ ಅವರ ಶೈಕ್ಷಣಿಕ ಹಾದಿಯನ್ನು ಶಾಸಕರು ಶ್ಲಾಘಿಸಿದರು. ಇದೇ ವೇಳೆ ವರುಣ್ ಅವರಿಗೆ ದೇವೇಗೌಡರ ಜೀವನ ಚರಿತ್ರೆಯ 'ಶಿಖರಾರೋಹಣ' ಪುಸ್ತಕವನ್ನು ಉಡುಗೊರೆಯಾಗಿ ನೀಡಿ ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ತಹಶೀಲ್ದಾರ್ ಗಗನ ಸಿಂಧು, ಚೀಮುಲ್ ನಿರ್ದೇಶಕ ಬಂಕ್ ಮುನಿಯಪ್ಪ, ಹೂಜುಗೂರು ರಾಮಣ್ಣ, ಸುಬ್ಬಾರೆಡ್ಡಿ ಸೇರಿದಂತೆ ಅನೇಕ ಮುಖಂಡರು ಹಾಗೂ ಹಿತೈಷಿಗಳು ಉಪಸ್ಥಿತರಿದ್ದರು.

## ಬೆಸ್ಕಾಂ ಟೆಂಡರ್ ಅಕ್ರಮ: 18 ಪ್ಯಾಕೇಜ್ ಟೆಂಡರ್ ರದ್ದುಪಡಿಸುವಂತೆ ಒತ್ತಾಯ

ದೇವನಹಳ್ಳಿ

"ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ (ಬೆಸ್ಕಾಂ) ವತಿಯಿಂದ ನೀಡಲಾಗುತ್ತಿರುವ ಪ್ಯಾಕೇಜ್ ಟೆಂಡರ್‌ಗಳಲ್ಲಿ ನಿಯಮಗಳನ್ನು ಗಾಳಿಗೆ ತೂರಿ ದೊಡ್ಡ ಮಟ್ಟದ ಅಕ್ರಮ ಎಸಗಲಾಗುತ್ತಿದೆ. ಕೇವಲ ಬೆರಳೆಣಿಕೆಯ ಗುತ್ತಿಗೆದಾರರಿಗೆ ಅನುಕೂಲ ಮಾಡಿಕೊಡುವ ಈ 18 ಪ್ಯಾಕೇಜ್ ಟೆಂಡರ್‌ಗಳನ್ನು ಸರ್ಕಾರ ಕೂಡಲೇ ರದ್ದುಪಡಿಸಬೇಕು," ಎಂದು ವಿದ್ಯುತ್ ಗುತ್ತಿಗೆದಾರರ ಸಂಘದ ರಾಜ್ಯಾಧ್ಯಕ್ಷ ಡಿ. ಸುಧಾಕರ ಗಂಭೀರ ಆರೋಪ ಮಾಡಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಬೆಸ್ಕಾಂ ಟೆಂಡರ್ ಪ್ರಕ್ರಿಯೆಯಲ್ಲಿ ನಡೆಯುತ್ತಿರುವ ಲೋಪದೋಷಗಳನ್ನು ಎಳೆಎಳೆಯಾಗಿ ಬಿಚ್ಚಿಟ್ಟರು.

<u>ಮೀಸಲಾತಿ ವರ್ಗದ ಗುತ್ತಿಗೆದಾರರಿಗೆ ಅನ್ಯಾಯ:</u> "ಸರ್ಕಾರ ಎಸ್.ಸಿ, ಎಸ್.ಟಿ ಹಾಗೂ ಒಬಿಸಿ ವರ್ಗದವರಿಗೆ ಮೀಸಲಾತಿ ಯೋಜನೆಗಳನ್ನು ತಂದಿದ್ದರೂ, ಬೆಸ್ಕಾಂ ಅಧಿಕಾರಿಗಳ ಧೋರಣೆಯಿಂದಾಗಿ ಅದರ ಪ್ರಯೋಜನ ತಳಮಟ್ಟದ ಗುತ್ತಿಗೆದಾರರಿಗೆ ಸಿಗುತ್ತಿಲ್ಲ. 'ದೇವರು ವರ ಕೊಟ್ಟರೂ ಪೂಜಾರಿ ಕೊಡಲಿಲ್ಲ' ಎನ್ನುವಂತೆ ಅಧಿಕಾರಿಗಳು ಅರ್ಹ ಗುತ್ತಿಗೆದಾರರನ್ನು ವಂಚಿಸುತ್ತಿದ್ದಾರೆ," ಎಂದು ಅಸಮಾಧಾನ ವ್ಯಕ್ತಪಡಿಸಿದರು.

<u>ಬೆಸ್ಕಾಂ ವಿರುದ್ಧ ಕೇಳಿಬಂದ ಪ್ರಮುಖ ಆರೋಪಗಳು:</u>

<u>ನಿಯಮಗಳ ಉಲ್ಲಂಘನೆ:</u> 1 ಕೋಟಿ ರೂಪಾಯಿಯೊಳಗಿನ ಕಾಮಗಾರಿಗಳನ್ನು ಕಡ್ಡಾಯವಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನಲ್ಲಿ (ಏಕಕಕ) ಪ್ರಕಟಿಸಬೇಕೆಂಬ ನಿಯಮವನ್ನು ಪಾಲಿಸುತ್ತಿಲ್ಲ.

<u>ಸ್ಥಳೀಯರಿಗೆ ವಂಚನೆ:</u> 5 ಲಕ್ಷ ರೂಪಾಯಿಯೊಳಗಿನ ಸಣ್ಣ ಕಾಮಗಾರಿಗಳನ್ನು ಸ್ಥಳೀಯ ಗುತ್ತಿಗೆದಾರರಿಗೆ ನೀಡಬೇಕಿದ್ದರೂ, ಅದನ್ನು ಉದ್ದೇಶಪೂರ್ವಕವಾಗಿ ನಿರ್ಲಕ್ಷಿಸಲಾಗಿದೆ.

<u>ಅವೈಜ್ಞಾನಿಕ ಪ್ರಕ್ರಿಯೆ:</u> ಟೆಂಡರ್ ಪ್ರಕಟಿಸುವ ಮುನ್ನ ಅಗತ್ಯವಿರುವ ಅಂದಾಜು ಪಟ್ಟಿ ಅಥವಾ ವೋಲ್ಟೇಜ್ ಸಮಸ್ಯೆಗಳ ಸರಿಯಾದ ಗುರುತಿಸುವಿಕೆ ನಡೆದಿಲ್ಲ.

<u>ಭ್ರಷ್ಟಾಚಾರಕ್ಕೆ ಉತ್ತೇಜನ:</u> ಸುಮಾರು 18 ಪ್ರಭಾವಿ ಗುತ್ತಿಗೆದಾರರಿಗೆ ಮಾತ್ರ ಅನುಕೂಲವಾಗುವಂತೆ ಟೆಂಡರ್ ಶರತ್ತುಗಳನ್ನು ರೂಪಿಸಲಾಗಿದ್ದು, ಸಣ್ಣ ಗುತ್ತಿಗೆದಾರರಿಗೆ ತರಬೇತಿ ಅಥವಾ ಉತ್ತೇಜನ ನೀಡುತ್ತಿಲ್ಲ.

<u>ಸರ್ಕಾರಕ್ಕೆ ಎಚ್ಚರಿಕೆ:</u> "ನ್ಯಾಯಾಲಯ ಹಾಗೂ ಕೇಂದ್ರ–ರಾಜ್ಯ ಸರ್ಕಾರಗಳ ಆದೇಶಗಳನ್ನು ಗಾಳಿಗೆ ತೂರಿ ಟೆಂಡರ್ ಪ್ರಕ್ರಿಯೆ ನಡೆಸಲಾಗುತ್ತಿದೆ. ದೋಷಗಳನ್ನು ಸರಿಪಡಿಸಲು ಅವಕಾಶ ನೀಡದೆ ಮನಬಂದಂತೆ ಟೆಂಡರ್ ರದ್ದುಪಡಿಸಲಾಗುತ್ತಿದೆ. ಸರ್ಕಾರ ಕೂಡಲೇ ಮಧ್ಯಪ್ರವೇಶಿಸಿ ಈ 18 ಪ್ಯಾಕೇಜ್ ಟೆಂಡರ್‌ಗಳನ್ನು ತಡೆಹಿಡಿಯಬೇಕು. ಇಲ್ಲವಾದಲ್ಲಿ ಇದು ಭ್ರಷ್ಟಾಚಾರಕ್ಕೆ ನೇರ ಉತ್ತೇಜನ ನೀಡಿದಂತಾಗುತ್ತದೆ," ಎಂದು ಡಿ. ಸುಧಾಕರ ಎಚ್ಚರಿಸಿದರು.

## ರೈತರ ಮಕ್ಕಳಿಗೆ 10 ತಿಂಗಳ ತೋಟಗಾರಿಕೆ ತರಬೇತಿ

ತುಮಕೂರು

ತೋಟಗಾರಿಕೆ ಇಲಾಖೆಯು ರಾಜ್ಯದ ವಿವಿಧ ಭಾಗಗಳಲ್ಲಿನ 10 ತೋಟಗಾರಿಕೆ ತರಬೇತಿ ಕೇಂದ್ರಗಳಲ್ಲಿ 2026 ಮೇ 2 ರಿಂದ 2027 ಫೆಬ್ರವರಿ 28ರವರೆಗೆ ರೈತ ಮಕ್ಕಳಿಗೆ 10 ತಿಂಗಳ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ.

ಅಭ್ಯರ್ಥಿಗಳು ಕನಿಷ್ಠ ಎಸ್.ಎಸ್.ಎಲ್.ಸಿ ಯಲ್ಲಿ ಉತ್ತೀರ್ಣರಾಗಿರಬೇಕು, ಅಭ್ಯರ್ಥಿಯ ತಂದೆ, ತಾಯಿ /ಪೋಷಕರು ಕಡ್ಡಾಯವಾಗಿ ಜಮೀನು ಹೊಂದಿರಬೇಕು ಹಾಗೂ ಸ್ವಂತ ಸಾಗುವಳಿ ಮಾಡುತ್ತಿರಬೇಕು. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ 18 ರಿಂದ 33 ವರ್ಷ ಹಾಗೂ ಇತರರಿಗೆ 18 ರಿಂದ 30 ವರ್ಷ



ವಯೋಮಿತಿಯನ್ನು ನಿಗಧಿಪಡಿಸಲಾಗಿದೆ.

ಅರ್ಜಿಯನ್ನು ಏಪ್ರಿಲ್ 13ರೊಳಗಾಗಿ ಪಡೆದು ಭರ್ತಿ ಮಾಡಿದ ಅರ್ಜಿಯನ್ನು ಏ. 15ರೊಳಗಾಗಿ ಸಲ್ಲಿಸಬೇಕು. ಅರ್ಜಿಯೊಂದಿಗೆ ಸಾಮಾನ್ಯ ಅಭ್ಯರ್ಥಿಗಳು 30 ರೂ. ಹಾಗೂ ಪರಿಶಿಷ್ಟ ಜಾತಿ/ಪಂಗಡದ ಅಭ್ಯರ್ಥಿಗಳು 15 ರೂ.ಗಳ ಮೌಲ್ಯದ ಇಂಡಿಯನ್ ಪೋಸ್ಟಲ್ ಆರ್ಡರ್/ ಡಿಮ್ಯಾಂಡ್ ಡ್ರಾಫ್ಟ್ ಅನ್ನು ತೋಟಗಾರಿಕೆ ಜಂಟಿ ನಿರ್ದೇಶಕರು (ಜಿಪಂ) ತುಮಕೂರು ಇವರ ಹೆಸರಿನಲ್ಲಿ ಪಡೆದು ಸಲ್ಲಿಸಬೇಕು. ಏಪ್ರಿಲ್ 23ರಂದು ಬೆಳಿಗ್ಗೆ 11 ಗಂಟೆಗೆ ಸಂದರ್ಶನ ನಡೆಯಲಿದೆ.

ನಿಬಂಧನೆಗಳು ಮತ್ತು ಹೆಚ್ಚಿನ ಮಾಹಿತಿಗಾಗಿ ಇಲಾಖಾ ವೆಬ್‌ಸೈಟ್ https://horticulturedir.karnataka.gov.in ಅಥವಾ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು(ರಾಜ್ಯವಲಯ) ಕಚೇರಿ ದೂ.ವಾ.ಸಂ. 0816–2278647ನ್ನು ಸಂಪರ್ಕಿಸಬಹುದಾಗಿದೆ ಎಂದು ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## 'ಅಡುಗೆ ಕೋಣೆ ನಿರ್ಮಾಣಕ್ಕೆ 10 ಲಕ್ಷ

ಮಾಲೂರು

"ತಾಲ್ಲೂಕಿನ ಮುಸ್ಲಿಂ ಸಮುದಾಯದ ಕಲ್ಯಾಣಕ್ಕಾಗಿ ನಿರ್ಮಿಸಲಾಗಿರುವ ಶಾದಿ ಮಹಲ್ ಆವರಣದಲ್ಲಿ ಸುಸಜ್ಜಿತ ಅಡುಗೆ ಕೋಣೆ ನಿರ್ಮಿಸಲು ಜೆಡಿಎಸ್ ಪಕ್ಷದ ವತಿಯಿಂದ 10 ಲಕ್ಷ ರೂಪಾಯಿಗಳನ್ನು ನೀಡಲಾಗುವುದು," ಎಂದು ಜೆಡಿಎಸ್ ಮುಖಂಡ ಹೂಡಿ ವಿಜಯ್ ಕುಮಾರ್ ತಿಳಿಸಿದರು.

ನಗರದ ಬೆಂಗಳೂರು ರಸ್ತೆಯ ಈದ್ಗಾ ಮೈದಾನದಲ್ಲಿ ಶನಿವಾರ ರಂಜಾನ್ ಹಬ್ಬದ ಪ್ರಯುಕ್ತ ಆಯೋಜಿಸಿದ್ದ ಸಾಮೂಹಿಕ ಪ್ರಾರ್ಥನಾ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮುಸ್ಲಿಂ ಬಾಂಧವರಿಗೆ ಶುಭಾಶಯ ಕೋರಿ ಮಾತನಾಡಿದರು.

<u>ಸೌಹಾರ್ದತೆಯ ಸಂಕೇತ:</u> "ಮಾಲೂರು ತಾಲ್ಲೂಕಿನಲ್ಲಿ ಮುಸ್ಲಿಂ ಸಮುದಾಯದವರು ದಶಕಗಳಿಂದಲೂ ಎಲ್ಲಾ ಧರ್ಮೀಯರೊಂದಿಗೆ ಅತ್ಯಂತ ಸ್ನೇಹ ಮತ್ತು ಬಾಂಧವ್ಯದಿಂದ ಬದುಕುತ್ತಿದ್ದಾರೆ. ಒಂದು ತಿಂಗಳ ಕಾಲ ಕಠಿಣ ಉಪವಾಸ ವ್ರತ ಆಚರಿಸಿ, ಇಂದು ಶ್ರದ್ಧಾ ಭಕ್ತಿಯಿಂದ ರಂಜಾನ್ ಆಚರಿಸುತ್ತಿರುವುದು ಸಂತಸದ ವಿಷಯ. ಸಮುದಾಯದ ಮುಖಂಡರ ಮನವಿಯ ಮೇರೆಗೆ ಶಾದಿ ಮಹಲ್ ಅಭಿವೃದ್ಧಿಗೆ ಈ ಧನಸಹಾಯ ಘೋಷಿಸಲಾಗಿದೆ," ಎಂದು ಅವರು ಹೇಳಿದರು.

<u>ತಂಪು ಪಾನೀಯ ವಿತರಣೆ:</u> ಇದೇ ಸಂದರ್ಭದಲ್ಲಿ ಮಾಜಿ ಸಚಿವ ಎಸ್.ಎನ್. ಕೃಷ್ಣಯ್ಯ ಶೆಟ್ಟಿ ಅವರ ವತಿಯಿಂದ ನಗರಸಭಾ ಸದಸ್ಯ ಬಾನುತೇಜ ಮತ್ತು ತಂಡವು ಪ್ರಾರ್ಥನೆಗೆ ಆಗಮಿಸಿದ್ದ ಸಾವಿರಾರು ಮುಸ್ಲಿಂ ಬಾಂಧವರಿಗೆ ಕುಡಿಯುವ ನೀರು ಹಾಗೂ ತಂಪು ಪಾನೀಯಗಳನ್ನು ವಿತರಿಸಿ ಸೌಹಾರ್ದತೆ ಮೆರೆದರು.

24/03/2026
ಭಾರತ ಸಾರಥಿ
BHARATHA SARATHI KANNADA DAILY NEWS PAPER
ಬೆಂಗಳೂರು | ಬೆಂ.ಗ್ರಾಮಾಂತರ | ತುಮಕೂರು | ಮೈಸೂರು | ಮಂಡ್ಯ | ರಾಮನಗರ | ಕೋಲಾರ | ಚಿಕ್ಕಬಳ್ಳಾಪುರ | ಚಿತ್ರದುರ್ಗ | ದಾವಣಗೆರೆ | ಶಿವಮೊಗ್ಗ | ಮಂಗಳೂರು | ಉಡುಪಿ | ಹುಬ್ಬಳ್ಳಿ | ಮಡಿಕೇರಿ | ಚಿಕ್ಕಮಗಳೂರು | ಹಾಸನ | ಬಳ್ಳಾರಿ
ಇ-ಪೇಪರ್: www.epaperbharathasarathi.com | ಇಮೇಲ್: desk.newsbox@gmail.com

# ಗುಬ್ಬಚ್ಚಿಗಳ ಸಂರಕ್ಷಣೆ ಜೀವ ವೈವಿಧ್ಯತೆಯ ಸಮತೋಲನಕ್ಕೆ ಅಗತ್ಯ: ಜಿ.ವಿ. ರಘು

ತಿಪಟೂರು

"ಜೀವ ವೈವಿಧ್ಯತೆ ಮತ್ತು ಪರಿಸರ ಸಮತೋಲನವನ್ನು ಕಾಪಾಡುವಲ್ಲಿ ಗುಬ್ಬಚ್ಚಿಗಳು ಮಹತ್ವದ ಪಾತ್ರ ವಹಿಸುತ್ತವೆ. ಮಾನವನ ಸ್ನೇಹಿಯಾಗಿರುವ ಈ ಪುಟ್ಟ ಪಕ್ಷಿಗಳ ಸಂರಕ್ಷಣೆ ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ" ಎಂದು ಆರ್ಡರ್ ಸಂಸ್ಥೆಯ ಯೋಜನಾ ನಿರ್ದೇಶಕ ಜಿ.ವಿ. ರಘು ತಿಳಿಸಿದರು.

ನಗರದ ಕಲ್ಪತರು ವಿದ್ಯಾಸಂಸ್ಥೆಯ ಪ್ರಥಮ ದರ್ಜೆ ಕಾಲೇಜಿನಲ್ಲಿ ಇದೇ 20ರ 'ವಿಶ್ವ ಗುಬ್ಬಚ್ಚಿ ದಿನ'ದ ಅಂಗವಾಗಿ ಸುಜಲಾನ್ ಫೌಂಡೇಶನ್ ಪುಣೆ ಹಾಗೂ ಆರ್ಡರ್ ಸಂಸ್ಥೆಯ ಸಹಯೋಗದಲ್ಲಿ ಹಮ್ಮಿಕೊಂಡಿದ್ದ 'ಗುಬ್ಬಚ್ಚಿ ಸಂರಕ್ಷಣಾ ಅಭಿಯಾನ'ದಲ್ಲಿ ಅವರು ಮಾತನಾಡಿದರು.



**ಅಳಿವಿನ ಅಂಚಿನಲ್ಲಿ ಗುಬ್ಬಿ ಸಂತತಿ:** ನಗರೀಕರಣ, ಆವಾಸಸ್ಥಾನಗಳ ನಾಶ ಹಾಗೂ ಕೃಷಿ ಪದ್ಧತಿಯಲ್ಲಿನ ಬದಲಾವಣೆಗಳಿಂದಾಗಿ ಗುಬ್ಬಚ್ಚಿಗಳ ಸಂಖ್ಯೆ ಕ್ಷೀಣಿಸುತ್ತಿದೆ. ಈ ಹಿನ್ನೆಲೆಯಲ್ಲಿ ಜನರಲ್ಲಿ ಮತ್ತು ವಿದ್ಯಾರ್ಥಿಗಳಲ್ಲಿ ಅರಿವು ಮೂಡಿಸುವುದು ಅನಿವಾರ್ಯವಾಗಿದೆ. ಮನೆಯ ಬಾಲ್ಕನಿಗಳಲ್ಲಿ ನೀರು, ಧಾನ್ಯಗಳನ್ನು ಇಡುವುದು ಹಾಗೂ ಕೃತಕ ಗೂಡುಗಳನ್ನು ಅಳವಡಿಸುವ ಮೂಲಕ ಇವುಗಳನ್ನು ಉಳಿಸಬಹುದು ಎಂದು ರಘು ಕಿವಿಮಾತು ಹೇಳಿದರು.

**ಪುಟ್ಟ ಪ್ರಯತ್ನದಿಂದ ದೊಡ್ಡ ಬದಲಾವಣೆ:** ಕಾರ್ಯಕ್ರಮದಲ್ಲಿ ಮಾತನಾಡಿದ ಆರ್ಡರ್ ಸಂಸ್ಥೆಯ ಅಧ್ಯಕ್ಷ ಲಿಂಗದೇವರು, "ಗುಬ್ಬಚ್ಚಿಗಳು ನಮ್ಮ ಪರಿಸರದ ಅವಿಭಾಜ್ಯ ಅಂಗ. ಸೂಕ್ತ ಪರಿಸರ ನಿರ್ಮಾಣ ಮತ್ತು ನಮ್ಮ ಸಣ್ಣ ಪುಟ್ಟ ಪ್ರಯತ್ನಗಳಿಂದ ಇವುಗಳ ಸಂತತಿಯನ್ನು ಮತ್ತೆ ವೃದ್ಧಿಸಬಹುದು," ಎಂದರು.

**50 ಕೃತಕ ಗೂಡುಗಳ ವಿತರಣೆ:** ಕಾರ್ಯಕ್ರಮದ ವಿಶೇಷವಾಗಿ ವಿದ್ಯಾರ್ಥಿಗಳಿಗೆ ಕೃತಕ ಗೂಡುಗಳನ್ನು ತಯಾರಿಸುವ ಮತ್ತು ಅಳವಡಿಸುವ ಬಗ್ಗೆ ಮಾಹಿತಿ ನೀಡಿ, ಸುಮಾರು 50 ಕೃತಕ ಗೂಡುಗಳನ್ನು ಉಚಿತವಾಗಿ ವಿತರಿಸಲಾಯಿತು. ಈ ಸಂದರ್ಭದಲ್ಲಿ ಕಲ್ಪತರು ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ಸೋಮಶೇಖರ್, ಪ್ರಾಧ್ಯಾಪಕ ಭೈರಪ್ಪ ಹಾಗೂ ಕಾಲೇಜಿನ ಇತರೆ ಸಿಬ್ಬಂದಿ ಉಪಸ್ಥಿತರಿದ್ದರು. ಅಭಿಯಾನದಲ್ಲಿ 100ಕ್ಕೂ ಹೆಚ್ಚು ವಿದ್ಯಾರ್ಥಿಗಳು ಉತ್ಸಾಹದಿಂದ ಪಾಲ್ಗೊಂಡು ಗುಬ್ಬಚ್ಚಿ ಉಳಿಸುವ ಶಪಥ ಮಾಡಿದರು.



ವಿಧಾನ ಸಭೆ ಅಧಿವೇಶನ ಸಂದರ್ಭದಲ್ಲಿ ಸಚಿವ ಜಮೀರ್ ಅಹಮದ್ ಖಾನ್ ಹಾಗೂ ಮಾಜಿ ಸಚಿವ ಎಚ್. ಡಿ. ರೇವಣ್ಣ ಉಭಯ ಕುಶಲೋಪರಿ.

# 'ಸ್ನೇಹಜೀವಿ ಪೊಲೀಸ್ ಧೋರಣೆ ಬೆಳೆಸಿಕೊಳ್ಳಿ'

ರಾಮನಗರ

ಪೊಲೀಸರು ಯಾವುದೇ ಸಂದರ್ಭದಲ್ಲೂ ಎದೆಗುಂದದೇ ಕಾರ್ಯನಿರ್ವಹಿಸಬೇಕು ಹಾಗೂ ಸಾರ್ವಜನಿಕರೊಂದಿಗೆ ಸದಾ ಸ್ನೇಹಪೂರ್ಣವಾಗಿ ವರ್ತಿಸಬೇಕು ಎಂದು ಉಪ ಪೊಲೀಸ್ ಮಹಾ ನಿರೀಕ್ಷಕರಾದ ಡಿ. ದೇವರಾಜ್ ಹೇಳಿದರು.

ಚನ್ನಪಟ್ಟಣದ ಕರ್ನಾಟಕ ರಾಜ್ಯ ಪೊಲೀಸ್ ತರಬೇತಿ ಶಾಲೆಯಲ್ಲಿ ಬುಧವಾರ ಆಯೋಜಿಸಲಾಗಿದ್ದ 69ನೇ ತಂಡದ ನಾಗರಿಕ ಪೊಲೀಸ್ ಕಾನ್ಸ್ಟೇಬಲ್‌ಗಳ ನಿರ್ಗಮನ ಪಥಸಂಚಲನ ಕಾರ್ಯಕ್ರಮದಲ್ಲಿ ವಂದನೆ ಸ್ವೀಕರಿಸಿ ಅವರು ಮಾತನಾಡಿದರು.

ಪೊಲೀಸ್ ಸಮವಸ್ತ್ರದ ಮೇಲೆ ಸಾರ್ವಜನಿಕರು ಅಪಾರ ಗೌರವ ಇಟ್ಟುಕೊಂಡಿದ್ದಾರೆ. ಆ ಗೌರವಕ್ಕೆ ಧಕ್ಕೆ ಬಾರದಂತೆ ನಡೆದುಕೊಳ್ಳುವುದು ಪ್ರತಿಯೊಬ್ಬ ಪೊಲೀಸರ ಕರ್ತವ್ಯ ಎಂದು ಅವರು ತಿಳಿಸಿದರು. "ಸ್ನೇಹಜೀವಿ ಪೊಲೀಸ್" ಎಂಬ ಮನೋಭಾವವನ್ನು ಬೆಳೆಸಿಕೊಳ್ಳಬೇಕು ಎಂದು ಕರೆ ನೀಡಿದರು.

ರಾಜ್ಯದ ಪ್ರಸಿದ್ಧ ತರಬೇತಿ ಕೇಂದ್ರವಾಗಿರುವ ಚನ್ನಪಟ್ಟಣ ಪೊಲೀಸ್ ತರಬೇತಿ ಶಾಲೆಯಲ್ಲಿ 110 ಮಂದಿ ತರಬೇತಿ ಪಡೆದು ನಿರ್ಗಮಿಸುತ್ತಿದ್ದು, ಅವರ ಪಥಸಂಚಲನ ಅತ್ಯಂತ ಶಿಸ್ತಿನಿಂದ ಕೂಡಿತ್ತು ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಈ ತಂಡದಲ್ಲಿ 18 ಮಂದಿ ಪದವೀಧರರು ಹಾಗೂ ಇಂಜಿನಿಯರ್‌ಗಳು ಪೊಲೀಸ್ ಇಲಾಖೆಗೆ ಸೇರ್ಪಡೆಯಾಗಿರುವುದು ವಿಶೇಷವೆಂದು ಹೇಳಿದರು.

ಕಾರ್ಯಕ್ರಮದ ವೇಳೆ ಅತ್ಯುತ್ತಮ ಸಾಧನೆ ಮಾಡಿದ ಕಾನ್ಸ್ಟೇಬಲ್‌ಗಳಿಗೆ ಫಲಕ ನೀಡಿ ಸನ್ಮಾನಿಸಲಾಯಿತು.

ಈ ಸಂದರ್ಭದಲ್ಲಿ ಬೆಂಗಳೂರು ದಕ್ಷಿಣ ಜಿಲ್ಲಾ ಪೊಲೀಸ್ ಅಧೀಕ್ಷಕರಾದ ಆರ್. ಶ್ರೀನಿವಾಸ್ ಗೌಡ, ಪ್ರಭಾರ ಪ್ರಾಂಶುಪಾಲರಾದ ಟಿ. ಕುಮಾರ್ ಸೇರಿದಂತೆ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು. ತರಬೇತಿ ಪೂರ್ಣಗೊಳಿಸಿದ ಕಾನ್ಸ್ಟೇಬಲ್‌ಗಳ ಬಂಧುಗಳು ಸಮಾರಂಭದಲ್ಲಿ ಭಾಗವಹಿಸಿದ್ದರು.

# ಕನ್ನಮಂಗಲ ಪಂಚಾಯಿತಿಗೆ ವಿಶೇಷ ಮಾನಿಟರ್ ಭೇಟಿ

ದೇವನಹಳ್ಳಿ

ಸ್ಥಳೀಯ ಸರ್ಕಾರಗಳ ಆಡಳಿತ ವೈಖರಿ ಹಾಗೂ ಜನಕಲ್ಯಾಣ ಯೋಜನೆಗಳ ಅನುಷ್ಠಾನದ ಕುರಿತು ಅಧ್ಯಯನ ನಡೆಸಲು ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗದ ಪಂಚಾಯತ್ ರಾಜ್ ಹಾಗೂ ಸ್ಥಳೀಯ ಸರ್ಕಾರದ ವಿಶೇಷ ಮಾನಿಟರ್ ಆಗಿರುವ ಉಮಾಕಾಂತ್ ಅವರು ತಾಲ್ಲೂಕಿನ ಕನ್ನಮಂಗಲ ಗ್ರಾಮ ಪಂಚಾಯಿತಿಗೆ ಶನಿವಾರ ಭೇಟಿ ನೀಡಿದರು.

ಜಿ.ಪಂ. ಉಪಕಾರ್ಯದರ್ಶಿ ಶಿವಕುಮಾರ್ ಹಾಗೂ ದೇವನಹಳ್ಳಿ ತಾ.ಪಂ. ಕಾರ್ಯನಿರ್ವಾಹಕ ಅಧಿಕಾರಿ ಶ್ರೀನಾಥಗೌಡ ಅವರ ನೇತೃತ್ವದಲ್ಲಿ ನಡೆದ ಈ ಭೇಟಿಯ ಸಂದರ್ಭದಲ್ಲಿ, ಸಂವಿಧಾನದ ಧ್ಯೇಯೋದ್ದೇಶಗಳನ್ನು ಸ್ಥಳೀಯ ಮಟ್ಟದಲ್ಲಿ ಸಾಕಾರಗೊಳಿಸುವ ಕುರಿತು ಸುದೀರ್ಘ ಚರ್ಚೆ ನಡೆಸಲಾಯಿತು. ಪಂಚಾಯತ್ ಮಟ್ಟದಲ್ಲಿ ಯೋಜನೆಗಳ ಜಾರಿಗೆ ಎದುರಾಗುತ್ತಿರುವ ಸವಾಲುಗಳು ಮತ್ತು ಅವುಗಳಿಗೆ ಪರಿಹಾರ ಕಂಡುಕೊಳ್ಳುವ ಬಗ್ಗೆ ಉಮಾಕಾಂತ್ ಅವರು ಅಧಿಕಾರಿಗಳಿಂದ ಮಾಹಿತಿ ಪಡೆದರು. ಈ ವೇಳೆ ಮೋಹನ್ ಕುಮಾರ್, ನೋಮೇಶ್, ಶ್ರೀನಿವಾಸ್, ಪಂಚಾಯತ್ ಕಾರ್ಯದರ್ಶಿಗಳು ಹಾಗೂ ಸಿಬ್ಬಂದಿ ಉಪಸ್ಥಿತರಿದ್ದರು.

# ವಿಜೃಂಭಣೆಯಿಂದ ಜರುಗಿದ ಶ್ರೀ ಚೌಡೇಶ್ವರಿ ಅಮ್ಮನವರ ಜ್ಯೋತಿ ಉತ್ಸವ

ವೈ.ಎನ್. ಹೊಸಕೋಟೆ

ಗ್ರಾಮದ ಶಾಂತಿ, ಸಮೃದ್ಧಿ ಹಾಗೂ ರಕ್ಷಣೆಗಾಗಿ ತೊಗಟವೀರ ಕ್ಷತ್ರಿಯ ಸಮುದಾಯದ ವತಿಯಿಂದ ಹಮ್ಮಿಕೊಳ್ಳಲಾಗುವ ಶ್ರೀ ಚೌಡೇಶ್ವರಿ ಅಮ್ಮನವರ ಜ್ಯೋತಿ ಉತ್ಸವವು ಶನಿವಾರ ಅತ್ಯಂತ ಶ್ರದ್ಧಾಭಕ್ತಿ ಹಾಗೂ ಸಡಗರದಿಂದ ನೆರವೇರಿತು.

ಯುಗಾದಿ ಹಬ್ಬದ ಮೂರನೇ ದಿನದಂದು ದೇವಿಯ ಜ್ಯೋತಿಗಳ ಮೆರವಣಿಗೆ ನಡೆಸುವುದು ಈ ಭಾಗದ ಹಳೆಯ ಸಂಪ್ರದಾಯವಾಗಿದ್ದು, ಈ ವರ್ಷವೂ ಸಹ ಸಾವಿರಾರು ಭಕ್ತರ ಸಮ್ಮುಖದಲ್ಲಿ ಅದ್ದೂರಿಯಾಗಿ ಆಚರಿಸಲಾಯಿತು.



**ಜಾನಪದ ಕಲಾತಂಡಗಳ ಮೆರಗು:** ಉತ್ಸವದ ಅಂಗವಾಗಿ ನಡೆದ ಪುರಮೆರವಣಿಗೆಯಲ್ಲಿ ಜೋಡಿ ಅಚ್ಚಮ್ಮನಹಳ್ಳಿ ಕಲಾವಿದರ ಕೋಲಾಟ ಮತ್ತು ಸಿದ್ದಾಪುರ ಕಲಾವಿದರ ಡ್ರಮ್ಸ್ ವಾದನ ನೋಡುಗರ ಗಮನ ಸೆಳೆಯಿತು. ವಿವಿಧ ವಾದ್ಯವೃಂದ ಹಾಗೂ ಆನಂದ ಪದಗಳ ಗಾಯನದೊಂದಿಗೆ ದೇವಿಯ ಮೂರ್ತಿ, ಕಳಸ, ಭಾನ ಮತ್ತು ಜ್ಯೋತಿಗಳ ಮೆರವಣಿಗೆಯು ಪುರದಕಟ್ಟೆಯಿಂದ ಪ್ರಾರಂಭವಾಯಿತು. ಬಿ.ಹೆಚ್. ರಸ್ತೆ, ಹಳೆಯ ಅಂಚೆ ಕಚೇರಿ ರಸ್ತೆ ಹಾಗೂ ಎಸ್.ಕೆ.ಪಿ.ಟಿ ರಸ್ತೆಯ ಮೂಲಕ ಸಾಗಿದ ಮೆರವಣಿಗೆಯು ಹೊಸ ಚೌಡೇಶ್ವರಿ ದೇವಾಲಯದಲ್ಲಿ ಮುಕ್ತಾಯಗೊಂಡಿತು.

**ಭಕ್ತರ ಹರಕೆ – ಸೇವೆ:** ಉತ್ಸವದ ವಿಶೇಷವಾಗಿ ಹರಕೆ ಹೊತ್ತ ಭಕ್ತಾಧಿಗಳು ಬಾಯಿಗೆ ಬೀಗ (ನಾರದ) ಹಾಕಿಕೊಂಡು ದೇವಿಗೆ ಭಕ್ತಿ ಸಮರ್ಪಿಸಿದರು. ಮೆರವಣಿಗೆ ಸಾಗುವ ದಾರಿಯುದ್ದಕ್ಕೂ ಭಕ್ತರಿಗಾಗಿ ಶಾಮಿಯಾನಗಳನ್ನು ಹಾಕಿ ನೆರಳಿನ ವ್ಯವಸ್ಥೆ ಮಾಡಲಾಗಿತ್ತು. ಅಲ್ಲಲ್ಲಿ ಮಜ್ಜಿಗೆ, ಪಾನಕ ಹಾಗೂ ಅನ್ನಪ್ರಸಾದ ವಿತರಿಸುವ ಮೂಲಕ ಭಕ್ತರು ಸೇವೆ ಸಲ್ಲಿಸಿದರು.

# ಅಯ್ಯಪಲ್ಲಿಯಲ್ಲಿ ಮಷಮ್ಮ ದೇವಿಯ ವೈಭವದ ಉತ್ಸವ

ಬೇತಮಂಗಲ

ಟಿ. ಗೊಲ್ಲಹಳ್ಳಿ ಗ್ರಾಮ ಪಂಚಾಯತಿ ವ್ಯಾಪ್ತಿಯ ಇತಿಹಾಸ ಪ್ರಸಿದ್ಧ ಅಯ್ಯಪಲ್ಲಿ ಗ್ರಾಮದಲ್ಲಿ ಆರಾಧ್ಯ ದೈವ ಶ್ರೀ ಮಷಮ್ಮ ದೇವಿಯ ಉತ್ಸವವು ಯುಗಾದಿ ಹಬ್ಬದ ಅಂಗವಾಗಿ ಅತ್ಯಂತ ಶ್ರದ್ಧಾಭಕ್ತಿಗಳಿಂದ ನೆರವೇರಿತು.

ಗ್ರಾಮದ ಪುರಾತನ ಸಂಪ್ರದಾಯದಂತೆ ಯುಗಾದಿ ಮತ್ತು ದಸರಾ ಹಬ್ಬಗಳಂದು ಮಾತ್ರ ದೇವಿಯ ಉತ್ಸವ ನಡೆಸಲಾಗುತ್ತಿದ್ದು, ಈ ವರ್ಷವೂ ಸಹ ಹಿರಿಯರ ಮಾರ್ಗದರ್ಶನದಲ್ಲಿ ಅದ್ದೂರಿಯಾಗಿ ಆಚರಿಸಲಾಯಿತು.

**ತಂಬಿಟ್ಟು ದೀಪಗಳ ಹರಕೆ:** ಗುರುವಾರ ಸಂಜೆ ಊರಿನ ಹೊರವಲಯದಲ್ಲಿ ತಾತ್ಕಾಲಿಕವಾಗಿ ದೇವಸ್ಥಾನ ನಿರ್ಮಾಣ ಮಾಡಿ ದೇವಿಯ ಮೂರ್ತಿಯನ್ನು ಪ್ರತಿಷ್ಠಾಪಿಸಲಾಗಿತ್ತು. ಶುಕ್ರವಾರ ಮುಂಜಾನೆ 4 ಗಂಟೆಗೆ ನೂರಾರು ಮಹಿಳೆಯರು ಸಾಲಾಗಿ ತಂಬಿಟ್ಟು ದೀಪಗಳನ್ನು ಹೊತ್ತು ತಂದು ದೇವಿಗೆ ಸಮರ್ಪಿಸಿ ಪೂಜೆ ಸಲ್ಲಿಸಿದರು. ಸಂಜೆ ದೇವರಿಗೆ ವಿಶೇಷ ಹೂವಿನ ಅಲಂಕಾರ ಮಾಡಿ, ಗ್ರಾಮಸ್ಥರು ಉತ್ಸವ ಮೂರ್ತಿಯನ್ನು ಭುಜದ ಮೇಲೆ ಹೊತ್ತು ಊರಿನ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡಿದರು.

**ದಸರಾವರೆಗೆ ದೇವಸ್ಥಾನದಲ್ಲಿ ವಾಸ್ತವ್ಯ:** ಬೀದಿಗಳಲ್ಲಿ ಸಂಚರಿಸಿದ ದೇವಿಯ ಉತ್ಸವವು ಊರಿನ ಮಧ್ಯಭಾಗಕ್ಕೆ ಬಂದಾಗ ಪ್ರತಿಯೊಂದು ಮನೆಯವರು ದೇವಿಗೆ ಮಂಗಳಾರತಿ ಎತ್ತಿ ಭಕ್ತಿ ಸಮರ್ಪಿಸಿದರು. ಪೂಜೆಯ ನಂತರ ಭಕ್ತಾದಿಗಳಿಗೆ ತೀರ್ಥ ಪ್ರಸಾದ ವಿನಿಯೋಗಿಸಲಾಯಿತು. ರಾತ್ರಿ ದೇವಿಯ ಉತ್ಸವ ಮೂರ್ತಿಯನ್ನು ದೇವಸ್ಥಾನಕ್ಕೆ ಮರಳಿ ಸೇರಿಸಲಾಗಿದ್ದು, ಸಂಪ್ರದಾಯದಂತೆ ಮತ್ತೆ ದಸರಾ ಹಬ್ಬದ ದಿನದಂದು ಮಾತ್ರ ದೇವಿಯನ್ನು ಹೊರತೆಗೆಯಲಾಗುತ್ತದೆ.



ಈ ಧಾರ್ಮಿಕ ಕಾರ್ಯಕ್ರಮದಲ್ಲಿ ಗ್ರಾಮದ ಹಿರಿಯರಾದ ಗುರುಮೂರ್ತಿ ರೆಡ್ಡಿ, ರಾಮಕೃಷ್ಣಪ್ಪ, ಚಂದ್ರಶೇಖರ್ ರೆಡ್ಡಿ, ಧನವಿಜೇಂದ್ರ ರೆಡ್ಡಿ ಸೇರಿದಂತೆ ಅಯ್ಯಪಲ್ಲಿ ಹಾಗೂ ಸುತ್ತಮುತ್ತಲಿನ ಗ್ರಾಮಸ್ಥರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು.

# ಸಿಲಿಂಡರ್ ಸಿಗದೆ ಹೋಟೆಲ್ ಮಾಲೀಕರು ಕಂಗಾಲು!

ಬಂಗಾರಪೇಟೆ

ಯುದ್ಧದ ಹಿನ್ನೆಲೆ ನಗರದಲ್ಲಿ ವಾಣಿಜ್ಯ ಗ್ಯಾಸ್ ಸಿಲಿಂಡರ್‌ಗಳ ಭಾರೀ ಕೊರತೆ ಉಂಟಾಗಿ ಹೋಟೆಲ್ ಉದ್ಯಮ ಸಂಪೂರ್ಣ ಅಸ್ತವ್ಯಸ್ತಗೊಂಡಿದೆ. ಸಣ್ಣ ಹೋಟೆಲ್‌ಗಳು ಒಂದರ ಹಿಂದೆ ಒಂದಾಗಿ ಬಾಗಿಲು ಮುಚ್ಚುತ್ತಿರುವುದರಿಂದ ಜನಜೀವನಕ್ಕೂ ಗಂಭೀರ ಪರಿಣಾಮ ಉಂಟಾಗಿದೆ.

ವಾಣಿಜ್ಯ ಸಿಲಿಂಡರ್‌ಗಳ ಬೇಡಿಕೆ ಹೆಚ್ಚಿದರೂ ಸರಬರಾಜು ಸಮರ್ಪಕವಾಗಿ ಆಗದ ಹಿನ್ನೆಲೆಯಲ್ಲಿ ಅನೇಕ ಸಣ್ಣ ಹೋಟೆಲ್‌ಗಳು ಕಾರ್ಯನಿರ್ವಹಣೆ ನಿಲ್ಲಿಸಿವೆ. ದಿನಗೂಲಿ ಕಾರ್ಮಿಕರು, ಕಚೇರಿ ನೌಕರರು, ವಿದ್ಯಾರ್ಥಿಗಳು ಸೇರಿದಂತೆ ಮಧ್ಯಮ ವರ್ಗದ ಜನತೆ ಹೊಟೇಲ್‌ಗಳ ಮೇಲೆ ಅವಲಂಬಿತರಾಗಿದ್ದು, ಈಗ ಊಟಕ್ಕೂ ಪರದಾಡುವ ಪರಿಸ್ಥಿತಿ ನಿರ್ಮಾಣವಾಗಿದೆ.

ಇದಕ್ಕೂ ಮೀರಿಯಾಗಿ, ಕಾರ್ಯನಿರ್ವಹಿಸುತ್ತಿರುವ ಕೆಲ ದೊಡ್ಡ ಹೋಟೆಲ್‌ಗಳಲ್ಲಿಯೂ ಸಂಪೂರ್ಣ ಆಹಾರ ಲಭ್ಯವಿಲ್ಲ. ದೋಸೆ, ರೊಟ್ಟಿ, ಚಪಾತಿ ಮೊದಲಾದ ಪ್ರಮುಖ ತಿನಿಸುಗಳು ಸಿಗದೆ, ಮೊಸರನ್ನಕ್ಕೆ ಮಾತ್ರ ಸೇವೆ ಸೀಮಿತಗೊಂಡಿರುವುದು ಗ್ರಾಹಕರ ಅಸಮಾಧಾನಕ್ಕೆ ಕಾರಣವಾಗಿದೆ.

"ಬೆಳಿಗ್ಗೆ ತಿಂಡಿ ಸಿಗುತ್ತಿಲ್ಲ, ಮಧ್ಯಾಹ್ನವೂ ಸರಿಯಾಗಿ ಊಟ ಸಿಗದ ಪರಿಸ್ಥಿತಿ ಬಂದಿದೆ. ಇದು ಸಾಮಾನ್ಯ ಜನರ ಬದುಕನ್ನೇ ಸಂಕಷ್ಟಕ್ಕೆ ತಳ್ಳಿದೆ," ಎಂದು ಸ್ಥಳೀಯರು ಆಕ್ರೋಶ ವ್ಯಕ್ತಪಡಿಸಿದ್ದಾರೆ.




ಹೋಟೆಲ್ ಮಾಲೀಕರೂ ಸಂಕಷ್ಟದಲ್ಲಿದ್ದು, "ಸಿಲಿಂಡರ್ ಸಿಗುವುದಿಲ್ಲ, ಸಿಕ್ಕರೂ ಬೆಲೆ ಏರಿಕೆಯಾಗಿದೆ. ಈ ಪರಿಸ್ಥಿತಿಯಲ್ಲಿ ವ್ಯವಹಾರ ನಡೆಸುವುದು ಕಷ್ಟವಾಗಿದೆ," ಎಂದು ತಮ್ಮ ಅಳಲು ವ್ಯಕ್ತಪಡಿಸಿದ್ದಾರೆ.

**ಕಾಳಸಂತೆ ಆರೋಪಗಳು:** ನಗರದಲ್ಲಿ ಉಂಟಾಗಿರುವ ಸಿಲಿಂಡರ್ ಕೊರತೆಗೆ ಕಾಳಸಂತೆ ದಂಧೆ ಕಾರಣ ಎಂಬ ಗಂಭೀರ ಆರೋಪಗಳು ಕೇಳಿಬರುತ್ತಿವೆ. ಕೆಲವು ಏಜೆನ್ಸಿಗಳು ಮತ್ತು ಮಧ್ಯವರ್ತಿಗಳು ವಾಣಿಜ್ಯ ಸಿಲಿಂಡರ್‌ಗಳನ್ನು ಅಧಿಕ ದರಕ್ಕೆ ಕಾಳಸಂತೆಯಲ್ಲಿ ಮಾರಾಟ ಮಾಡುತ್ತಿದ್ದಾರೆ ಎಂಬ ಅನುಮಾನ ವ್ಯಕ್ತವಾಗಿದೆ.

ಅಧಿಕೃತ ದರದಲ್ಲಿ ಸಿಲಿಂಡರ್ ದೊರೆಯದಿದ್ದು, ಹೆಚ್ಚಿನ ಹಣ ಕೊಟ್ಟವರಿಗೆ ಮಾತ್ರ ಸರಬರಾಜು ಮಾಡಲಾಗುತ್ತಿದೆ ಎಂಬ ಆರೋಪವೂ ಇದೆ. "ಸಿಲಿಂಡರ್ ಕಾಳಸಂತೆಗೆ ಹೋಗುತ್ತಿರುವುದರಿಂದ ನಮಗೆ ಸಿಗುತ್ತಿಲ್ಲ," ಎಂದು ಸಣ್ಣ ಹೋಟೇಲ್ ಮಾಲೀಕರು ದೂರಿದ್ದಾರೆ.

ಸಿಲಿಂಡರ್ ಕೊರತೆಯಿಂದ ಅನೇಕ ಸಣ್ಣ ಹೋಟೇಲ್‌ಗಳು ಈಗಾಗಲೇ ಬಂದ್ ಆಗಿದ್ದು, ದೊಡ್ಡ ಹೋಟೇಲ್‌ಗಳಲ್ಲಿಯೂ ಆಹಾರ ಪೂರೈಕೆ ಸೀಮಿತಗೊಂಡಿದೆ. ನಂದಿ ಮೆಡಿಕಲ್ಸ್ ವೃತ್ತದಲ್ಲಿರುವ ಶ್ರೀ ಬಸವೇಶ್ವರ ಕೆಫೆ ಕಳೆದ ಮೂರು ದಿನಗಳಿಂದ ಬಂದ್ ಆಗಿರುವುದು ಪರಿಸ್ಥಿತಿಯ ಗಂಭೀರತೆಯನ್ನು ತೋರಿಸುತ್ತದೆ.

**ಸಾರ್ವಜನಿಕರ ಒತ್ತಾಯ:** ತಕ್ಷಣ ವಾಣಿಜ್ಯ ಗ್ಯಾಸ್ ಸಿಲಿಂಡರ್ ಸರಬರಾಜು ಸಾಮಾನ್ಯಗೊಳಿಸಬೇಕು. ಸಣ್ಣ ಹೋಟೇಲ್‌ಗಳಿಗೆ ವಿಶೇಷ ಆದ್ಯತೆ ನೀಡಬೇಕು. ಬೆಲೆ ಏರಿಕೆಯನ್ನು ನಿಯಂತ್ರಿಸಬೇಕು. ಅಧಿಕಾರಿಗಳ ನಿರ್ಲಕ್ಷ್ಯಕ್ಕೆ ಕ್ರಮ ಕೈಗೊಳ್ಳಬೇಕು.

ಸಮಸ್ಯೆ ಗಂಭೀರವಾಗುತ್ತಿದ್ದರೂ ಸಂಬಂಧಿತ ಇಲಾಖೆಗಳು ಮೌನವಾಗಿರುವುದು ಜನರ ಅನುಮಾನವನ್ನು ಮತ್ತಷ್ಟು ಹೆಚ್ಚಿಸಿದೆ. ತಕ್ಷಣ ಕ್ರಮ ಕೈಗೊಳ್ಳದಿದ್ದರೆ ಪರಿಸ್ಥಿತಿ ಇನ್ನಷ್ಟು ಉಲ್ಬಣವಾಗುವ ಸಾಧ್ಯತೆ ಇದೆ ಎಂದು ನಾಗರಿಕರು ಎಚ್ಚರಿಸಿದ್ದಾರೆ.

# ಏ. 23ಕ್ಕೆ ಸಾಮೂಹಿಕ ಉಪನಯನ

ತುಮಕೂರು

ಜಿಲ್ಲಾ ವೈಷ್ಣವ ಸಮುದಾಯ ಧಾರ್ಮಿಕ ಸಂಸ್ಥೆ ಹಾಗೂ ಆಂಡಾಳ್ ಗೋಷ್ಠಿ ಸಹಯೋಗದಲ್ಲಿ ನಗರದ ಮಾರುತಿ ನಗರದ ಸಂಸ್ಥೆಯ ಸಭಾಂಗಣದಲ್ಲಿ ಏಪ್ರಿಲ್ 22 ಮತ್ತು 23ರಂದು ಶ್ರೀ ರಾಮಾನುಜಾಚಾರ್ಯರ ತಿರುನಕ್ಷತ್ರ ಹಾಗೂ ಸಾಮೂಹಿಕ ಉಪನಯನ–ಬ್ರಹ್ಮೋಪದೇಶ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಮೇಲುಕೋಟೆ ಯತಿರಾಜಮಠದ ಪೀಠಾಧಿಪತಿಗಳಾದ ಯದುಗಿರಿ ಯತಿರಾಜ ನಾರಾಯಣ ರಾಮಾನುಜ ಜೀಯರ್ ಅವರ ದಿವ್ಯ ಸಾನಿಧ್ಯದಲ್ಲಿ ಈ ಕಾರ್ಯಕ್ರಮಗಳು ನಡೆಯಲಿವೆ ಎಂದು ಸಂಸ್ಥೆಯ ಅಧ್ಯಕ್ಷ ಟಿ.ಎಸ್. ಮೋಹನ್‌ಕುಮಾರ್ ತಿಳಿಸಿದ್ದಾರೆ.

ಏಪ್ರಿಲ್ 22ರಂದು ಮುಂಜಾನೆ 8ಗಂಟೆಗೆ ಭಗವದ್ ರಾಮಾನುಜಾಚಾರ್ಯರ ತಿರುನಕ್ಷತ್ರದ ಅಂಗವಾಗಿ ಸುಪ್ರಭಾತ ಸೇವೆ, ವೇದಪಾರಾಯಣ, ಆಂಡಾಳ್ ಗೋಷ್ಠಿಯವರಿಂದ ತಮಿಳು ದಿವ್ಯ ಪ್ರಬಂಧ ಪಾರಾಯಣ, ತಿರುಮಜ್ಜನ, ಅಷ್ಟಾವಧಾನ, ಶಾತ್ತುಮುರೈ ಕಾರ್ಯಕ್ರಮಗಳು ವೇದ ವಿದ್ವಾನ್ ರವಿವರ್ಮನ್ ನೇತೃತ್ವದಲ್ಲಿ ನಡೆಯಲಿವೆ.

ಏಪ್ರಿಲ್ 23ರಂದು ಚೌಲೋಪನಯನ, ಬ್ರಹ್ಮೋಪದೇಶ ಉಪನಯನ, ಮಂಗಳಾಶಾಸನ ಸೇರಿದಂತೆ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ಶಾಮಸುಂದರ ಆಚಾರ್ಯರು ಹಾಗೂ ಸಹ ಋತ್ವಿಕರಿಂದ ನೆರವೇರಲಿವೆ ಎಂದು ತಿಳಿಸಿದ್ದಾರೆ.

ಈ ಸಂಬಂಧ ಸಂಸ್ಥೆಯ ಪದಾಧಿಕಾರಿಗಳು ಕೇಂದ್ರ ಸಚಿವ ವಿ. ಸೋಮಣ್ಣ ಅವರನ್ನು ಭೇಟಿ ಮಾಡಿ ಕಾರ್ಯಕ್ರಮಕ್ಕೆ ಆಹ್ವಾನಿಸಿದರು. ಶಾಸಕ ಜಿ.ಬಿ. ಜ್ಯೋತಿಗಣೇಶ್, ಮಾಜಿ ಶಾಸಕ ಹೆಚ್. ನಿಂಗಪ್ಪ ಸೇರಿದಂತೆ ವಿವಿಧ ಮುಖಂಡರು ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ.

ಸಂಸ್ಥೆಯ ಉಪಾಧ್ಯಕ್ಷ ಕೆ.ಎನ್. ನವರತ್ನಕುಮಾರ್, ಕಾರ್ಯದರ್ಶಿ ಯೋಗಾನಂದ, ಸಂಘಟನಾ ಕಾರ್ಯದರ್ಶಿ ಕೆ.ಎಸ್. ರವಿಕುಮಾರ್, ಖಜಾಂಚಿಗಳಾದ ಡಿ.ಎಸ್. ಭಕ್ತವತ್ಸಲ, ಎಸ್. ಜ್ಯೋತಿ ಆಚಾರ್ಯ ಹಾಗೂ ಇತರ ಪದಾಧಿಕಾರಿಗಳು ಈ ವೇಳೆ ಉಪಸ್ಥಿತರಿದ್ದರು.

# ಎಸಿ ಬೋಗಿಯಲ್ಲಿ ಗಾಂಜಾ ಸಾಗಾಟ; ಯುವಕ ಪೊಲೀಸ್ ವಶಕ್ಕೆ

ಬಂಗಾರಪೇಟೆ

ಬಿಹಾರದ ಪಾಟ್ನಾದಿಂದ ರೈಲಿನ ಎಸಿ ಬೋಗಿಯಲ್ಲಿ ಕುಳಿತು ರಾಜಾರೋಷವಾಗಿ ಬೆಂಗಳೂರಿಗೆ ಗಾಂಜಾ ಸಾಗಿಸುತ್ತಿದ್ದ ಆರೋಪಿಯನ್ನು ಬಂಗಾರಪೇಟೆ ರೈಲ್ವೆ ಪೊಲೀಸರು ಸಿನಿಮೀಯ ರೀತಿಯಲ್ಲಿ ಕಾರ್ಯಾಚರಣೆ ನಡೆಸಿ ಬಂಧಿಸಿದ್ದಾರೆ.

ಬಂಧಿತನನ್ನು ಬಿಹಾರದ ಪಾಟ್ನಾ ನಿವಾಸಿ ಇಂದ್ರಜಿತ್ ಕುಮಾರ್ ಮೆಹತೋ (28) ಎಂದು ಗುರುತಿಸಲಾಗಿದೆ. ಈತನಿಂದ ಸುಮಾರು ರೂ. 10.75 ಲಕ್ಷ ಮೌಲ್ಯದ 21.5 ಕೆಜಿ ಗಾಂಜಾವನ್ನು ವಶಪಡಿಸಿಕೊಳ್ಳಲಾಗಿದೆ.

**ಪೊಲೀಸರ ಕಣ್ತಪ್ಪಿಸಲು 'ಎಸಿ' ಪ್ಲಾನ್!** ದುಬಾರಿ ಎಸಿ ಟಿಕೆಟ್ ಪಡೆದು ಪ್ರಯಾಣಿಸಿದರೆ ಪೊಲೀಸರು ತಪಾಸಣೆ ನಡೆಸುವುದಿಲ್ಲ ಎಂಬ ಭ್ರಮೆಯಲ್ಲಿದ್ದ ಆರೋಪಿ, ದಾನಾಪುರ್ ಎಕ್ಸ್‌ಪ್ರೆಸ್ ರೈಲಿನ 3ನೇ ಎಸಿ ಬೋಗಿಯಲ್ಲಿ ಮೂರು ಚೀಲಗಳಲ್ಲಿ ಗಾಂಜಾ ತುಂಬಿಕೊಂಡು ಬರುತ್ತಿದ್ದ. ಈ ರೈಲಿಗೆ ಬೆಂಗಳೂರಿನ ವೈಟ್‌ಫೀಲ್ಡ್‌ನಲ್ಲಿ ನಿಲುಗಡೆ ಇಲ್ಲದ ಕಾರಣ, ಆರೋಪಿಯು ಬಂಗಾರಪೇಟೆ ಜಂಕ್ಷನ್‌ನಲ್ಲಿ ಇಳಿದು ಅಲ್ಲಿಂದ ಖಾಸಗಿ ವಾಹನದ ಮೂಲಕ ಬೆಂಗಳೂರು ತಲುಪಲು ಸಂಚು ರೂಪಿಸಿದ್ದ ಎನ್ನಲಾಗಿದೆ.

**ಕುಪ್ಪಂನಿಂದಲೇ ಬೆನ್ನಟ್ಟಿದ ಪೊಲೀಸರು:** ಆರೋಪಿಯ ಬಗ್ಗೆ ಖಚಿತ ಮಾಹಿತಿ ಪಡೆದ ರೈಲ್ವೆ ಪೊಲೀಸ್ ಎಸ್ಪಿ ಸಾರಾ ಫಾತಿಮಾ ಹಾಗೂ ಡಿವೈಎಸ್‌ಪಿ ಸತೀಶ್ ಕುಮಾರ್ ಅವರ ಮಾರ್ಗದರ್ಶನದಲ್ಲಿ, ಬಂಗಾರಪೇಟೆ ರೈಲ್ವೆ ಪಿಎಸ್‌ಐ ಬಿ. ನಲ್ಲರಾಜು ನೇತೃತ್ವದ ತಂಡ ಕಾರ್ಯಾಚರಣೆಗಿಳಿಯಿತು. ಆಂಧ್ರಪ್ರದೇಶದ ಕುಪ್ಪಂ ನಿಲ್ದಾಣದಿಂದಲೇ ರೈಲನ್ನು ಏರಿದ ಪೊಲೀಸರು ತಪಾಸಣೆ ಆರಂಭಿಸಿದ್ದರು. ರೈಲು ಬಂಗಾರಪೇಟೆ ನಿಲ್ದಾಣಕ್ಕೆ ಬರುತ್ತಿದ್ದಂತೆಯೇ ಜಾಗರೂಕರಾದ ಪೊಲೀಸರು, ಆರೋಪಿ ಇಳಿಯುತ್ತಿದ್ದ ವೇಳೆ ಸುತ್ತುವರಿದು ಮಾಲು ಸಮೇತ ಬಂಧಿಸಿದ್ದಾರೆ.

**ತಂಡದ ಕಾರ್ಯಕ್ಷಮತೆಗೆ ಪ್ರಶಂಸೆ:** ಈ ಯಶಸ್ವಿ ಕಾರ್ಯಾಚರಣೆಯಲ್ಲಿ ಎಎಸ್‌ಐ ರಮೇಶ್, ಸಿಬ್ಬಂದಿಗಳಾದ ಹಿಮಾಚಲ್, ಮುಖ್ಯಪೇದೆ ವೆಂಕಟೇಶ್ ಹಾಗೂ ಪೇದೆ ಸಂತೋಷ್ ಕುಮಾರ್ ಪಾಲ್ಗೊಂಡಿದ್ದರು. ಇಡೀ ತಂಡದ ಸಮಯಪ್ರಜ್ಞೆ ಮತ್ತು ಕಾರ್ಯಕ್ಷಮತೆಯನ್ನು ಎಸ್ಪಿ ಸಾರಾ ಫಾತಿಮಾ ಮುಕ್ತಕಂಠದಿಂದ ಶ್ಲಾಘಿಸಿದ್ದಾರೆ.



# ವಿಶೇಷ ಚೇತನರು ಜಾಗ್ರತೆಯಿಂದ ವಾಹನ ಚಲಾಯಿಸಿ: ಬಿಜಯ್‌ಕೃಷ್ಣ

ರಾಮನಗರ

ವಿಶೇಷಚೇತನರ ಸ್ವಾವಲಂಬಿ ಬದುಕಿಗೆ ತ್ರಿಚಕ್ರ ವಾಹನಗಳು ತೀರಾ ಸಹಕಾರಿಯಾಗಿವೆ. ರಸ್ತೆ ಸುರಕ್ಷತೆ ಅತ್ಯಂತ ಮುಖ್ಯವಾಗಿದ್ದು ಪ್ರತಿಯೊಬ್ಬರೂ ಸಂಚಾರಿ ನಿಯಮಗಳನ್ನು ಪಾಲಿಸಬೇಕು ಎಂದು ಟಯೋಡ ಗೋಸಾಯಿ ಸೌತ್ ಇಂಡಿಯಾ ಸಂಸ್ಥೆಯ ಮುಖ್ಯಸ್ಥ ಬಿಜಯ್‌ಕೃಷ್ಣ ಹೇಳಿದರು.

ತಾಲ್ಲೂಕಿನ ಬಿಡದಿ ಪಟ್ಟಣದ ಸುಜ್ಞಾನಮೂರ್ತಿ ಲೇಔಟ್‌ನಲ್ಲಿ ಕಾರ್ಮಿಕ ಇಲಾಖೆ ಸಹಕಾರದಲ್ಲಿ ಟಯೋಡ ಗೋಸಾಯಿ ಸೌತ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ ವತಿಯಿಂದ ಹಮ್ಮಿಕೊಳ್ಳಲಾಗಿದ್ದ ಕಾರ್ಯಕ್ರಮದಲ್ಲಿ 10 ಜನ ವಿಶೇಷ ಚೇತನರಿಗೆ ತ್ರಿಚಕ್ರ ವಾಹನಗಳನ್ನು ವಿತರಿಸಿ ಮಾತನಾಡಿದರು.

ಪ್ರಸ್ತುತ ದಿನಗಳಲ್ಲಿ ವಿಶೇಷ ಚೇತನರಿಗೂ ವಾಹನ ಸೌಲಭ್ಯಗಳು ಹೆಚ್ಚಾಗುತ್ತಿರುವುದು ಸಂತೋಷದ ಸಂಗತಿ. ದಿವ್ಯಾಂಗರ ಬಗ್ಗೆ ಅನುಕಂಪ ಬೇಕಿಲ್ಲ, ಬದಲಾಗಿ ಅವರಿಗೆ ಅವಕಾಶಗಳನ್ನು ದೊರಕಿಸಬೇಕಿದೆ. ಹಾಗಾಗಿ ಇಂದು ಅನೇಕ ಕ್ಷೇತ್ರಗಳಲ್ಲಿ ಅವರು ಸಾಧನೆ ಮಾಡುತ್ತಿರುವುದನ್ನು ನಾವು ಕಾಣುತ್ತೇವೆ ಎಂದರು. ತ್ರಿಚಕ್ರ ವಾಹನಗಳು ವಿಶೇಷ ಚೇತನರು ಸ್ವಾವಲಂಬಿಯಾಗಿ ಬದುಕಲು ಸಹಕಾರಿಯಾಗುತ್ತವೆ. ಆದರೆ ಜಾಗೃತರಾಗಿ ಟ್ರಾಫಿಕ್ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು. ಅಲ್ಲದೆ ತಮ್ಮ ಆರೋಗ್ಯ ಮತ್ತು ಪರಿಸ್ಥಿತಿಗೆ ಅನುಗುಣವಾಗಿ ಜಾಗ್ರತೆಯಿಂದ ವಾಹನ ಚಲಾಯಿಸಬೇಕು ಎಂದು ಸಲಹೆ ನೀಡಿದರು.



ಕಾರ್ಮಿಕ ಇಲಾಖೆಯ ಸಹಾಯಕ ನಿರ್ದೇಶಕ ನಾರಾಯಣಪ್ಪ ಮಾತನಾಡಿ, ಕಾರ್ಮಿಕರ ಶ್ರಮದಿಂದ ಜೀವನೋಪಾಯ ನಡೆಸುವ ವಿಶೇಷ ಚೇತನರಿಗೆ ಈ ರೀತಿಯ ಸಹಾಯಗಳು ತುಂಬಾ ಉಪಯುಕ್ತವಾಗಿವೆ. ವಾಹನ ಚಲಾಯಿಸುವ ಮೊದಲು ವಾಹನದ ಸ್ಥಿತಿ ಪರಿಶೀಲನೆ, ಸುರಕ್ಷತಾ ಉಪಕರಣಗಳ ಬಳಕೆ ಹಾಗೂ ಅಗತ್ಯವಿರುವಲ್ಲಿ ಸಹಾಯಕ ಸಾಧನಗಳನ್ನು ಬಳಸುವುದು ಅತ್ಯಂತ ಅಗತ್ಯ ಎಂದು ತಿಳಿಸಿದರು.

ಕನ್ನಡ ಶಾಲೆಗಳನ್ನು ಉಳಿಸಿ–ಬೆಳೆಸಿ ಅಭಿಯಾನದ ಜಿಲ್ಲಾಧ್ಯಕ್ಷರು ಹಾಗೂ ರಾಜ್ಯಕಾರ್ಯದರ್ಶಿ ಸುಜ್ಞಾನಮೂರ್ತಿ ಮಾತನಾಡಿ, ದಿವ್ಯಾಂಗರನ್ನು ಸಮಾಜದ ಮುಖ್ಯವಾಹಿನಿಗೆ ತರಲು ಕಂಪನಿಯವರ ಕೈಗೊಂಡಿರುವ ಸೇವೆ ಪ್ರಶಂಸನೀಯ, ಸಂಸ್ಥೆಗೆ ಬಿಡದಿ ಹೋಬಳಿಯ ಸಮಸ್ತ ನಾಗರಿಕರ ಪರವಾಗಿ ಅಭಿನಂದನೆ ಸಲ್ಲಿಸುವುದಾಗಿ ತಿಳಿಸಿದರು.

ಬೆಂಗಳೂರು– ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಪ್ರದೇಶ ಯೋಜನಾ ಪ್ರಾಧಿಕಾರದ ನಿರ್ದೇಶಕ ಅಬ್ಬನಕುಪ್ಪೆರಮೇಶ್ ಅತಿಥಿಗಳನ್ನು ಸನ್ಮಾನಿಸಿದರು.

ಈ ಕಾರ್ಯಕ್ರಮದಲ್ಲಿ ಕಂಪನಿಯ ನಿರ್ದೇಶಕ ರಂಗರಾಜನ್, ಮಾನವ ಸಂಪನ್ಮೂಲ ವಿಭಾಗದ ಮುಖ್ಯಸ್ಥ ಸಹದೇವ್, ಎಚ್.ಆರ್ ಡೆಪ್ಯೂಟಿ ಮ್ಯಾನೇಜರ್ ಮಂಜುನಾಥ್ ಹಾಗೂ ಸಿ.ಎಸ್.ಆರ್ ಆಯೋಜಕ ದಯಾನಂದ್. ನವಚೇತನ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷ ಮಂಜುನಾಥ್, ತಾಲೂಕು ಎಂ.ಆರ್.ಡಬ್ಲ್ಯು ಹರೀಶ್, ಹರ್ಷಿಣಿ ದೇವಿಕ್ ಚಾರಿಟಬಲ್ ಟ್ರಸ್ಟ್‌ನ ರಂಗಸ್ವಾಮಿ, ಜಯರಾಮ್, ರೈತ ಸಂಘದ ಮುಖಂಡ ರಂಗಸ್ವಾಮಿ ಮತ್ತಿತರರು ಇದ್ದರು.

Printed by gandasi sadananda swamy, published by gandasi sadanandaswamy, owned by gandasi sadananda swamy. Printed at LAVANYA MUDRANA No. 79, TR mill, compound, 5th main 9th corss, Chamarajpet Bangalore-560018, published at No.531, prakruthi nilaya, kalikanagar, Andrahalli, Vishwaneedam Post, Bangalore-560091. Editor: Gandasi sadanandaswamy